ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 9 ಗುರುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 203 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ವನ್ಯಮೃಗಗಳಿಗೆ ಬಲಿಯಾದ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು

ಮಾಜಿ ಸಚಿವ ಕೋಟೆ ಎಂ. ಶಿವಣ್ಣ ಒತ್ತಾಯ



ಮೈಸೂರು, ನ.8(ಜಿಎ)–ಕಾಡಂಚಿನ ಪ್ರದೇಶದಲ್ಲಿ ಆನೆ,ಹುಲಿ ದಾಳಿಯಿಂದ ಮೃತರಾದ ಕುಟುಂಬದವರಿಗೆ 50 ಲಕ್ಷ ರೂ.ಪರಿಹಾರ ನೀಡಬೇಕು ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಒತ್ತಾಯಿಸಿದರು.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅರಣ್ಯ ಇಲಾಖೆ ಬಂಡೀಪುರ, ನಾಗರಹೊಳೆ ಕಾಡಂಚಿನ ಪ್ರದೇಶದ ವ್ಯಾಪ್ತಿಯ ತಾಲೂಕುಗಳಲ್ಲಿ ವನ್ಯ ಜೀವಿಗಳ ಹಾವಳಿಯನ್ನು ತಡೆದು ಜನರ ಜೀವ ರಕ್ಷಿಸಲು ಸಂಪೂರ್ಣ ವಿಫಲವಾಗಿದೆ. ಅಭಯಾರಣ್ಯ ಪ್ರದೇಶದ ಗುಂಡ್ಲುಪೇಟೆ, ಸರಗೂರು, ನಂಜನಗೂಡು, ಎಚ್.ಡಿ. ಕೋಟೆ ತಾಲೂಕಿನಲ್ಲಿ ಕಳೆದ 2 ತಿಂಗಳಿಂದ ಹುಲಿ, ಆನೆ ದಾಳಿಯಿಂದ ಹತ್ತು ಮಂದಿ ಸಾವನ್ನಪ್ಪಿದ್ದರೂ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಎಂದು ದೂರಿದರು.

ಆನೆ, ಹುಲಿ ಹಾವಳಿ ಹೆಚ್ಚಾಗಿರುವುದರಿಂದ ಕಾಡಂಚಿನ ಗ್ರಾಮಗಳ ರೈತರು, ನಾಗರಿಕರು ಭಯದಿಂದಲೇ ಜೀವನ ಕಳೆಯುವಂತಾಗಿದೆ. ಎರಡು ತಿಂಗಳಿಂದ ನಿರಂತರವಾಗಿ ಹುಲಿ ದಾಳಿ ಮಾಡುತ್ತಿದ್ದರೂ ಕ್ರಮ ಕೈಗೊಳ್ಳದೆ ಇರುವುದನ್ನು ನೋಡಿದರೆ ಅರಣ್ಯ ಇಲಾಖೆ ಇದೆಯೋ, ಇಲ್ಲವೋ ಎನ್ನುವ ಅನುಮಾನ ಮೂಡಿದೆ. ಅರಣ್ಯ ಸಚಿವರು ಬೇರೆ ವಿಚಾರಗಳಿಗೆ ಮಗ್ನರಾಗಿದ್ದಾರೆಯೇ ಹೊರತು ವನ್ಯಜೀವಿಗಳ ಹಾವಳಿ ತಡೆಯಲು ಗಮನಹರಿಸಿಲ್ಲ ಎಂದು ಶಿವಣ್ಣ ಕಿಡಿಕಾರಿದರು.

> “ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಬಂಡೀಪುರ ಅಥವಾ ನಾಗರಹೊಳೆ ಅರಣ್ಯಪ್ರದೇಶದಲ್ಲಿ ಅರಣ್ಯ, ಕಂದಾಯ ಸಚಿವರು, ಹಿರಿಯ ಅಧಿಕಾರಿಗಳ ಸಭೆ ನಡೆಸಬೇಕು. ಸಿಎಂ ಮೈಸೂರು ಜಿಲ್ಲೆಯವರೇ ಆಗಿರುವ ಕಾರಣ ಬೆಂಗಳೂರಿನ ಬದಲಿಗೆ ಇಲ್ಲಿಯೇ ಸಭೆ ನಡೆಸಿ, ಶಾಶ್ವತ ಪರಿಹಾರ ಕಲ್ಪಿಸಲಿ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆನೆಗಳ ಸಮಸ್ಯೆ ಬಗ್ಗೆ ಪತ್ರ ಬರೆದಿದ್ದೇನೆ. ಶೀಘ್ರದಲ್ಲೇ ಖುದ್ದು ಭೇಟಿ ಮಾಡಿ ಮನವಿ ಮಾಡುತ್ತೇನೆ. ಈ ಸಮಸ್ಯೆಗೆ ಸಕಾರಾತ್ಮಕವಾಗಿ ಸ್ಪಂದಿಸಿ ಸಭೆ ನಡೆಸಿ ಕ್ರಮಕೈಗೊಳ್ಳದೆ ಇದ್ದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು. **–ಕೋಟೆ ಎಂ.ಶಿವಣ್ಣ**

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮೈಸೂರಿನಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಬ್ಯುಸಿಯಲ್ಲಿದ್ದಾರೆ. ಆದರೆ, ಹುಲಿ,ಆನೆ ದಾಳಿಯಿಂದ ಮೃತಪಟ್ಟ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ,ಧೈರ್ಯ ಹೇಳುವ ಕೆಲಸ ಮಾಡಿಲ್ಲ. ರೈತರು ಕಷ್ಟಪಟ್ಟು ಬೆಳೆದ ಫಸಲನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ ಮತ್ತೊಂದೆಡೆ ಧೈರ್ಯ ಮಾಡಿ ಹೊಲಕ್ಕೆ ಹೋದರೆ ಜೀವ ಕಳೆದುಕೊಳ್ಳಬೇಕಾಗುತ್ತದೆ ಎಂಬ ಭಯದ ವಾತಾವರಣದಲ್ಲಿದ್ದಾರೆ. ಆದ್ದರಿಂದ ವನ್ಯ ಜೀವಿಗಳ ದಾಳಿಗೆ ಸಿಲುಕಿ ಮೃತಪಟ್ಟವರ ಕುಟುಂಬಕ್ಕೆ ನೀಡುವ 15 ಲಕ್ಷ ರೂ.ಬದಲಿಗೆ 50ಲಕ್ಷ ರೂ.ಪರಿಹಾರ ನೀಡಬೇಕು. ಮ್ಯಾನ್‌ಹೋಲ್ ಸ್ಕ್ಯಾವೆಂಜರ್‌ಗಳು ಮೃತಪಟ್ಟಾಗ ನೀಡುತ್ತಿದ್ದ ಪರಿಹಾರವನ್ನು 15ರಿಂದ 30ಲಕ್ಷ ರೂ.ಗೆ ಹೆಚ್ಚಿಸಿದ ಮಾದರಿಯಲ್ಲೇ ಅರಣ್ಯ ಇಲಾಖೆಯಲ್ಲೂ ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿದರು.

ಪ್ರಾಣಿಯಿಂದ ದಾಳಿಗೊಳಗಾದ ಸಂದರ್ಭದಲ್ಲಿ ಗ್ರಾಮಸ್ಥರು ಅರಣ್ಯ ಸಿಬ್ಬಂದಿ ಮೇಲೆ ದಾಳಿ ಮಾಡಿ ಅರಣ್ಯ ಇಲಾಖೆ ಅಧಿಕಾರಿಗಳು ಏಟು ತಿನ್ನಬೇಕಿದೆ. ಸ್ಥಳೀಯ ಅಧಿಕಾರಿಗಳು ಅಸಹಾಯಕರಾಗಿದ್ದಾರೆ. ಹಾಗಾಗಿ, ಸಚಿವರು ನಿರ್ಲಕ್ಷ್ಯ ನೀತಿ ತಾಳದೆ ಸೂಕ್ತ ವ್ಯವಸ್ಥೆ ಮಾಡಿ ರಕ್ಷಣೆ ನೀಡಬೇಕು ಎಂದು ಸಲಹೆ ನೀಡಿದರು.

ಕಾಡಂಚಿನ ಗ್ರಾಮಗಳಲ್ಲಿ ಆನೆಗಳು ದಾಳಿ ಮಾಡದಂತೆ ಟ್ರೆಂಚ್‌ಗಳನ್ನು ನಿರ್ಮಿಸುವ ಬದಲಿಗೆ ರೈಲ್ವೆ ಹಳಿ ಬೇಲಿ ನಿರ್ಮಿಸಬೇಕು. ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿದಾಗ ಅನುದಾನದ ಕೊರತೆ ಇದೆ ಎನ್ನುತ್ತಾರೆ. ಸರ್ಕಾರ ಕೂಡಲೇ ರೈಲ್ವೆ ಹಳಿಗೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಮುಂದೆ ಆನೆಗಳ ಹಾವಳಿ ಜಾಸ್ತಿಯಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಬೋರೇಗೌಡ, ಬಿಜೆಪಿ ಸಹ ವಕ್ತಾರ ಸಿ.ಕೆ.ಗಿರೀಶ್ ಉಪಸ್ಥಿತರಿದ್ದರು.

ಪಿ.ವಿ.ಗಿರಿಯವರಿಗೆ ಅಭಿನಂದನೆ



ಅಖಿಲ ಭಾರತ ಕ್ಷತ್ರೀಯ ಫೆಡರೇಷನ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮೈಸೂರಿನ ಸಿದ್ಧಾರ್ಥ ಗ್ರೂಪ್‌ನ ಪಿ.ವಿ.ಗಿರಿ ಅವರನ್ನು, ಅವರ ಪತ್ನಿ ರುಕ್ಮಿಣಿ ಗಿರಿ ಅವರೊಂದಿಗೆ ಇತ್ತೀಚೆಗೆ ಮೈಸೂರಿನ ದಕ್ಷ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ರಾಜು ಕ್ಷತ್ರೀಯ ವೆಲ್‌ಫೇರ್ ಅಸೋಸಿಯೇಷನ್‌ನಿಂದ ಅಭಿನಂದಿಸಲಾಯಿತು. ಚಿತ್ರದಲ್ಲಿ ದಕ್ಷ ಕಾಲೇಜು ಅಧ್ಯಕ್ಷ ಜಯಚಂದ್ರರಾಜು, ಅಮೆರಿಕಾದ ಡಾ.ಗೋವಿಂದರಾಜು, ಎಂ.ರಾಜೇಂದ್ರ, ಗೋಪಾಲರಾಜು ಇತರರನ್ನು ಕಾಣಬಹುದು.

ಡಿ.ಬಿ.ಚಂದ್ರೇಗೌಡರ ನಿಧನಕ್ಕೆ ಸಂಸದ ಶ್ರೀನಿವಾಸಪ್ರಸಾದ್ ಸಂತಾಪ



ಮೈಸೂರು,ನ.8–ಹಿರಿಯ ರಾಜಕಾರಣಿ ಡಿ.ಬಿ.ಚಂದ್ರೇಗೌಡರ ನಿಧನಕ್ಕೆ ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಸಂತಾಪ ಸೂಚಿಸಿದ್ದಾರೆ. ಲೋಕಸಭೆ, ರಾಜ್ಯಸಭೆ, ರಾಜ್ಯ ವಿಧಾನಸಭೆ, ವಿಧಾನ ಪರಿಷತ್ ಸದಸ್ಯರಾಗಿ ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿದ್ದ ಚಂದ್ರೇಗೌಡರು, 1978ರಲ್ಲಿ ಇಂದಿರಾಗಾಂಧಿಯವರು ಚಿಕ್ಕಮಗಳೂರು ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಲು ತಮ್ಮ ಸಂಸತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ರಾಜ್ಯದ ನೀರಾವರಿ ವಿಷಯದಲ್ಲಿ ಪರಿಣತರಾಗಿದ್ದ ಅವರು, ತಮ್ಮ ಸುದೀರ್ಘ 45 ವರ್ಷಗಳ ರಾಜಕೀಯ ಜೀವನದಲ್ಲಿ ಜನಪರ ಕಾಳಜಿಯುಳ್ಳವರಾಗಿದ್ದರು. ಇವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ದೊರೆಯಲಿ ಎಂದು ಅವರು ತಮ್ಮ ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.

ನ.14, ಮಕ್ಕಳಿಗೆ ವಸ್ತುಪ್ರದರ್ಶನಕ್ಕೆ ಉಚಿತ ಪ್ರವೇಶ

ಮೈಸೂರು,ನ.8–ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ನ.14ರಂದು ಮಕ್ಕಳ ದಿನಾಚರಣೆ ಪ್ರಯುಕ್ತ ಬೆಳಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ 14 ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ವಸ್ತು ಪ್ರದರ್ಶನವನ್ನು ವೀಕ್ಷಿಸಲು ಉಚಿತ ಪ್ರವೇಶಾವಕಾಶವನ್ನು ಕಲ್ಪಿಸಿದೆ.

ನ.11ರಂದು ಮೈಸೂರಲ್ಲಿ ಒನಕೆ ಓಬವ್ವ ಜಯಂತಿ

ಮೈಸೂರು, ನ. 8– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2023–24ನೇ ಸಾಲಿನ ಒನಕೆ ಓಬವ್ವ ಜಯಂತಿಯನ್ನು ಜಿಲ್ಲಾಮಟ್ಟದಲ್ಲಿ ನವೆಂಬರ್ 11 ರಂದು ಬೆಳಗ್ಗೆ 11 ಗಂಟೆಗೆ ನಗರದ ಕರ್ನಾಟಕ ಕಲಾಮಂದಿರದ ಆವರಣದ ಕಿರುರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಘನಉಪಸ್ಥಿತಿಯಲ್ಲಿ, ಸಮಾಜ ಕಲ್ಯಾಣ ಸಚಿವ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಗೌರವ ಉಪಸ್ಥಿತಿಯಲ್ಲಿ ಭಾಗವಹಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮೈಸೂರು ಮಹಾನಗರಪಾಲಿಕೆ ಮಹಾಪೌರರಾದ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್‌ಕುಮಾರ್.ಸಿ, ರವಿಶಂಕರ್.ಡಿ ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಶಾಸಕರಾದ ಮರಿತಿಬ್ಬೇಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಉಪ ಮಹಾಪೌರರಾದ ಡಾ.ಜಿ.ರೂಪ ಮತ್ತು ಮುಖ್ಯ ಭಾಷಣಕಾರರಾಗಿ ಸಹಾಯಕ ಪ್ರಾಧ್ಯಾಪಕ ಡಾ.ಟಿ.ರಮೇಶ್ ಭಾಗವಹಿಸುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಛದ್ಮವೇಷ ಸ್ಪರ್ಧೆ

ಒನಕೆ ಓಬವ್ವ ಜಯಂತಿ ಸಂಬಂಧ 18 ವರ್ಷದೊಳಗಿನ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ವೀರರಾಣಿ ಒನಕೆ ಓಬವ್ವ ಛದ್ಮವೇಷ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಈ ಸ್ಪರ್ಧೆಯನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಿದ್ದು, 12 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಒಂದು ವಿಭಾಗ ಹಾಗೂ 13 ವರ್ಷದಿಂದ 18 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಇನ್ನೊಂದು ವಿಭಾಗವಾಗಿರುತ್ತದೆ. ಸ್ಪರ್ಧೆಗೆ ನೋಂದಾಯಿಸಿಕೊಂಡ ಸ್ಪರ್ಧಿಗಳು ಅಂದು ಬೆಳಗ್ಗೆ 10ರೊಳಗೆ ಕಿರುರಂಗಮಂದಿರದ ಆವರಣದಲ್ಲಿ ಹಾಜರಿರತಕ್ಕದ್ದು. ಭಾಗವಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರಮಾಣ ಪತ್ರವನ್ನು ವಿತರಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಅಂದು ಬೆಳಗ್ಗೆ 9ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಅಥವಾ ದೂಸಂ. 0821–2513225 ಸಂಪರ್ಕಿಸಿ.

ಯುದ್ಧ ಸ್ಮಾರಕ ನಿರ್ಮಾಣ ಕಾಮಗಾರಿ ನನೆಗುದಿಗೆ

ದೀಪಾವಳಿ ನಂತರ ಕಾಮಗಾರಿ ಪುನರಾರಂಭ ಆಗಲಿದೆ: ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಭರವಸೆ





ಮೈಸೂರು, ನ.8(ಜಿಎ)– ಸೈನಿಕರು, ಮಾಜಿ ಸೈನಿಕರ ಎರಡು ದಶಕಗಳ ಬೇಡಿಕೆಯಾಗಿದ್ದ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಕಳೆದ ವರ್ಷವೇ ಅಡಿಪಾಯ ಹಾಕಿದ್ದರೂ ಕಾಮಗಾರಿ ನನೆಗುದಿಗೆ ಬಿದ್ದಿದ್ದು, ದೇಶ ಪ್ರೇಮಿಗಳು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಮೀಪ, ಎನ್‌ಸಿಸಿ ಗ್ರೂಪ್ ಹೆಡ್‌ಕ್ವಾರ್ಟರ್ಸ್‌ನ ಮುಂಭಾಗದಲ್ಲಿರುವ ಐದು ಎಕರೆಯಷ್ಟಿರುವ ಉದ್ಯಾನದಲ್ಲಿ ಯುದ್ಧ ಸ್ಮಾರಕ (ವಾರ್ ಮೆಮೋರಿಯಲ್) ನಿರ್ಮಾಣ ಕಾಮಗಾರಿಗೆ 2022ರ ಜುಲೈ 29ರಂದು ಭೂಮಿ ಪೂಜೆ ನೆರವೇರಿಸಲಾಗಿತ್ತು. ಕಾಮಗಾರಿಯನ್ನು ಒಂದು ವರ್ಷದೊಳಗೆ ಮುಗಿಸುವ ಯೋಜನೆಯೂ ಸಿದ್ಧವಾಗಿತ್ತು. ಅದಕ್ಕಾಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸೈನಿಕ ಕಲ್ಯಾಣ ಇಲಾಖೆ, ಲೋಕೋಪಯೋಗಿ ಇಲಾಖೆಗಳು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದವು. ಆದರೆ, ಕೆಲವು ತಾಂತ್ರಿಕ ಕಾರಣಗಳಿಂದ ಕಾಮಗಾರಿ ಅರ್ಧಕ್ಕೆ ನಿಂತಿದೆ.

ದಾನಿಗಳ ಸಹಕಾರ: ಯುದ್ಧ ಸ್ಮಾರಕ ನಿರ್ಮಾಣಕ್ಕೆ ಚಾಮರಾಜನಗರ ಜಿಲ್ಲೆಯ ಕ್ವಾರೆಯಿಂದ 33 ಕ್ಯೂಬಿಕ್ ಮೀಟರ್ ಉತ್ಕೃಷ್ಟ ಕಲ್ಲುಗಳ ಸ್ಲ್ಯಾಬ್‌ಗಳನ್ನು ಈಗಾಗಲೇ ತಂದು ಉದ್ಯಾನದಲ್ಲಿ ಇರಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ಅಮಚವಾಡಿ ಗ್ರಾಮದ ಎಚ್.ಎಂ.ಪುಟ್ಟಮಾದಯ್ಯ ಎಂಬುವರು 33 ಕ್ಯೂಬಿಕ್ ಮೀಟರ್ ಕಪ್ಪು ಶಿಲೆಯನ್ನು ದಾನವಾಗಿ ನೀಡಿದ್ದಾರೆ. ಮತ್ತೊಬ್ಬ ಕ್ವಾರಿ ಮಾಲೀಕ ಎ.ಶ್ರೀನಾಥ್ 200 ಟನ್ ತೂಕದ ಕಚ್ಚಾಶಿಲೆಯನ್ನು ಕತ್ತರಿಸಿ, ಯಾವುದೇ ಶುಲ್ಕವನ್ನು ಪಡೆದಿಲ್ಲ.

ಮಾತ್ರವಲ್ಲದೇ ಹಾಸನ ಮೂಲದ ದಾನಿಯೊಬ್ಬರು 25 ಲಕ್ಷ ಮೌಲ್ಯದ ಹಾಸನ್ ಗ್ರೀನ್ ಸ್ಟೋನ್ (40 ಎಂಎಂ)ಗಳನ್ನು ದಾನವಾಗಿ ನೀಡಿದ್ದಾರೆ. ಈ ಸ್ಟೋನ್‌ಗಳನ್ನು ಮೆಟ್ಟಿಲುಗಳಿಗೆ ಬಳಸಲು ಯೋಜನೆ ರೂಪಿಸಲಾಗಿದೆ. ಇಷ್ಟೆಲ್ಲ ನೆರವನ್ನು ದಾನಿಗಳು ನೀಡಿದ್ದಾರೆ. ಇದರಿಂದ ಸರ್ಕಾರಕ್ಕೆ 1.50 ಕೋಟಿ ರೂ. ಉಳಿತಾಯವಾಗಿದೆ. ಆದರೆ, ಸ್ಮಾರಕ ಮಾತ್ರ ಪೂರ್ಣಗೊಂಡಿಲ್ಲ.

ಸ್ಮಾರಕದ ರೂಪುರೇಷೆ : 1.47 ಕೋಟಿ ಅಂದಾಜು ವೆಚ್ಚದೊಂದಿಗೆ ಪ್ರಾರಂಭವಾಗಿರುವ ಈ ಯೋಜನೆ, 4 ಚದರ ಅಡಿ ವಿಸ್ತೀರ್ಣದೊಂದಿಗೆ 33 ಅಡಿ ಎತ್ತರ ಇರಲಿದೆ. ಇದರ ಜತೆಗೆ ಭೂಸೇನೆ, ವಾಯುಸೇನೆ, ನೌಕಾಪಡೆ ಲೋಗೋ ಅಳವಡಿಕೆ ಮಾಡಲಾಗುವುದು. ಅಲ್ಲದೆ, ಮೇಲ್ಭಾಗದಲ್ಲಿ ಸಾರನಾಥ ಮಾದರಿಯ ರಾಷ್ಟ್ರಲಾಂಛನ ಅಳವಡಿಕೆಗೆ ಯೋಜನೆ ರೂಪಿಸಲಾಗಿದೆ. ಸ್ಮಾರಕದ ಪೀಠದ ಎತ್ತರ ಸುಮಾರು 10 ಅಡಿ ಇರಲಿದ್ದು, ಸಮೀಪದಲ್ಲಿ ಎರಡು ಫೈಟರ್ ವಿಮಾನಗಳ ಮಾದರಿ ರಚನೆ, ವೈಟ್ ಪೇಯಿಂಟ್‌ನಿಂದ ಅಕ್ಷರಗಳನ್ನು ಕೊರೆಯಲು ಯೋಜನೆ ರೂಪಿಸಲಾಗಿದೆ.

> **ದೀಪಾವಳಿ ನಂತರ ಸಭೆ**
>
> “ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಎಲ್ಲಾ ಅಧಿಕಾರಿಗಳು ಆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೆವು. ದೀಪಾವಳಿ ಹಬ್ಬ ಕಳೆದ ನಂತರ ಡಿಸಿ ಸಮ್ಮುಖದಲ್ಲಿ ಯುದ್ಧ ಸ್ಮಾರಕದ ಕುರಿತು ವಿಶೇಷ ಸಭೆ ನಡೆಸಿ, ಕಾಮಗಾರಿ ಪೂರ್ಣಗೊಳಿಸಲು ನಿರ್ಧಾರ ಕೈಗೊಳ್ಳಲಾಗುತ್ತದೆ.
>
> **–ಎಂ.ಡಿ. ಸುದರ್ಶನ್**

ಮನವಿ ಬರಬೇಕಿದೆ : ಈಗಾಗಲೇ 50 ಲಕ್ಷ ರೂ.ಗಳನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ. ಅನುದಾನದ ಹಣ ಬಳಕೆ ಮನವಿ ಪತ್ರವನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆದು ಉಳಿದ ಹಣ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗುವುದು. ಹಣ ಬಿಡುಗಡೆಯಾದ ನಂತರ ಕೆಲಸ ಮುಂದುವರಿಯಲಿದೆ. ಫೌಂಡೇಷನ್ ಕಾಮಗಾರಿ ಪೂರ್ಣವಾಗಿದ್ದು, ಅದು ಕ್ಯೂರಿಂಗ್ ಆದ ನಂತರ ಕಲ್ಲುಗಳನ್ನು ಜೋಡಿಸುವ ಕಾರ್ಯ ಬಾಕಿ ಇದೆ ಎಂದು ತಿಳಿಸಿದ್ದಾರೆ. ಅದರಂತೆ ಸದ್ಯ ಶೇ.50ರಷ್ಟು ಕೆಲಸವಾಗಿದೆ. ಕಾಮಗಾರಿಗೆ ಬೇಕಿರುವ ಅಗತ್ಯ ವಸ್ತುಗಳು ಸಂಗ್ರಹವಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ‘ಮೈಸೂರು ಮಿತ್ರ’ನಿಗೆ ತಿಳಿಸಿದರು.

ಆರ್ಮಿ ಹೆಡ್‌ಕ್ವಾರ್ಟರ್ಸ್‌ಗೆ ಪತ್ರ : ವಾರ್ ಮೆಮೋರಿಯಲ್ ನಿರ್ಮಾಣ ಪ್ರದೇಶದ ಸುತ್ತಮುತ್ತಲೂ ಇರುವ ಉದ್ಯಾನ ಅಭಿವೃದ್ಧಿಗೆ ಆರ್ಮಿ ಹೆಡ್ ಕ್ವಾರ್ಟರ್ಸ್‌ನೊಂದಿಗೆ ಜಿಲ್ಲಾಧಿಕಾರಿಗಳ ಮೂಲಕ ಪತ್ರ ವ್ಯವಹಾರ ನಡೆಸಲಾಗಿದೆ. ಉದ್ಯಾನದಲ್ಲಿ ಯುದ್ಧ ನೌಕೆ, ಕಾಪ್ಟರ್‌ಗಳು, ಕೆಲವು ಯುದ್ಧ ಸಾಮಗ್ರಿಗಳನ್ನು ಪ್ರದರ್ಶನಕ್ಕೆ ಇಡಲು ಯೋಜನೆ ರೂಪಿಸಲಾಗಿದೆ. ಅದಕ್ಕೆ ಆರ್ಮಿ ಹೆಡ್ ಕ್ವಾರ್ಟರ್ಸ್‌ನಿಂದ ಸಕಾರಾತ್ಮಕ ಸ್ಪಂದನೆಯೂ ದೊರೆತಿದೆ. ಅಲ್ಲದೆ, ಸ್ಮಾರಕದ ಮೇಲ್ಭಾಗದಲ್ಲಿ ಇಡಲು ರೈಫಲ್ ಮತ್ತು ಹೆಲ್ಮೆಟ್ ಕೋರಲಾಗಿದೆ. ಅದನ್ನು ಸುರಕ್ಷಿತವಾಗಿ ಇಡುವ ಬಗ್ಗೆ ಖಾತರಿ ಕೇಳಿದ್ದರು. ಅದನ್ನೂ ಒದಗಿಸಲಾಗಿದ್ದು, ಆದಷ್ಟು ಶೀಘ್ರವಾಗಿ ಕಾಮಗಾರಿ ಮುಗಿಸಲಾಗುವುದು ಎಂದು ತಿಳಿದರು.

ಅಧಿಕಾರ ದುರ್ಬಳಕೆ ಆರೋಪ
ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಎತ್ತಂಗಡಿ



ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಅವರನ್ನು ಎತ್ತಂಗಡಿ ಮಾಡಲಾಗಿದೆ. ಶಿವಮೊಗ್ಗದಿಂದ ಕೋಲಾರಕ್ಕೆ ವರ್ಗಾಯಿಸಲಾಗಿದೆ.

ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಶಿವಮೊಗ್ಗದ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಲೆಕ್ಕಾಧೀಕ್ಷಕರಾಗಿದ್ದ ಷಡಕ್ಷರಿ ಅವರನ್ನು ಕೋಲಾರ ಜಿಲ್ಲೆಯಲ್ಲಿ ಖಾಲಿ ಇದ್ದ ಸಮಾಜ ಕಲ್ಯಾಣ ಇಲಾಖೆ ಲೆಕ್ಕಾಧೀಕ್ಷಕರ ಹುದ್ದೆಗೆ ವರ್ಗಾವಣೆಗೊಳಿಸಿ ಆರ್ಥಿಕ ಇಲಾಖೆ ಅಧೀನ ಕಾರ್ಯದರ್ಶಿ (ಆಡಳಿತ ಮತ್ತು ಮುಂಗಡಗಳು ವಿಭಾಗ) ಆದೇಶಿಸಿದ್ದಾರೆ. ಷಡಕ್ಷರಿ ಶಿವಮೊಗ್ಗದಲ್ಲಿ ಕರ್ತವ್ಯ ಸ್ಥಾನದಲ್ಲಿರದೇ ಬೆಂಗಳೂರಿನಲ್ಲಿಯೇ ಹೆಚ್ಚು ಸಮಯ ಇರುತ್ತಾರೆ ಎನ್ನುವ ಆರೋಪ ಕೇಳಿಬಂದಿತ್ತು. ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಹೆಚ್ಚು ಕೆಲಸ ಇಲ್ಲದೇ ಇರುವುದರಿಂದ ಶಿವಮೊಗ್ಗದ ಬದಲು ಬೆಂಗಳೂರಿನಲ್ಲಿಯೇ ಸಮಯ ಕಳೆಯುತ್ತಿದ್ದರು ಎಂದು ಹೇಳಲಾಗಿತ್ತು. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ, ಇದೀಗ ಶಿವಮೊಗ್ಗದಿಂದ ಕೋಲಾರಕ್ಕೆ ವರ್ಗಾಯಿಸಿದೆ. ಹೆಚ್ಚಿನ ಕೆಲಸದ ಒತ್ತಡ ವಿರುವ ಸಮಾಜ ಕಲ್ಯಾಣ ಇಲಾಖೆ ಲೆಕ್ಕಾಧೀಕ್ಷಕರನ್ನಾಗಿ ನೇಮಿಸಿದೆ. ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಶಿಕ್ಷಣ ಸಚಿವ ಮಧು ಬಂಗಾರಪ್ಪ ಕೂಡ ಷಡಕ್ಷರಿ ಶಿವಮೊಗ್ಗದಲ್ಲಿನ ಲೆಕ್ಕಪರಿಶೋಧಕರ ಕಚೇರಿಯಲ್ಲಿ ಅಲಭ್ಯವಾಗಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದರು ಎಂದು ತಿಳಿದುಬಂದಿದೆ.

ನ.16, ಸಾರಿಗೆ ಅದಾಲತ್

ಮೈಸೂರು,ನ.8–ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಕೊಠಡಿ ಸಂ.8ರಲ್ಲಿ ನ.16ರಂದು ಬೆಳಗ್ಗೆ 11.30ಕ್ಕೆ ಸಾರಿಗೆ ಅದಾಲತ್ ನಡೆಸಲಾಗುತ್ತಿದೆ. ಸಾರ್ವಜನಿಕರು ಕಚೇರಿಗೆ ಸಂಬಂಧಿಸಿದ ಅಹವಾಲುಗಳು ಇದ್ದಲ್ಲಿ, ದಾಖಲಾತಿಗಳೊಂದಿಗೆ ಖುದ್ದು ಹಾಜರಾಗಬಹುದು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ, ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯುಎಸ್‌ಎನ ಚೆಲೆಸ್ಟಿಯಲ್ ಮೈಂಡ್ಸ್ ಸಂಸ್ಥೆಯ 20ನೇ ವಾರ್ಷಿಕೋತ್ಸವದ ಅಂಗವಾಗಿ ಗೋವಾ ಚೆಸ್ ಅಸೋಸಿಯೇಷನ್ ಜೊತೆಗೂಡಿ ಗೋವಾದಲ್ಲಿ ನಡೆಸಿದ ರ್ಯಾಪಿಡ್ ಚದುರಂಗ ಸ್ಪರ್ಧೆಯಲ್ಲಿ ಅಂತಾರಾಷ್ಟ್ರೀಯ ಆಟಗಾರ್ತಿ ಪ್ರೊ. ಪ್ರೇಮಲೀಲಾ ಅವರು ಪ್ರಥಮ ಬಹುಮಾನ ಪಡೆದರು. ಚೆಲೆಸ್ಟಿಯಲ್ ಮೈಂಡ್ಸ್‌ನ ಸಂಸ್ಥಾಪಕ ಅಧ್ಯಕ್ಷೆ ಮೈಸೂರಿನ ಎಂ.ಕಾವ್ಯಶ್ರೀ ಇನ್ನಿತರರು ಚಿತ್ರದಲ್ಲಿದ್ದಾರೆ.

ಟಿ.ಗವಿರಂಗಪ್ಪ ನಿಧನ



ಮೈಸೂರು,ನ.8–ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ (ಕೆಪಿಸಿಎಲ್)ನ ನಿವೃತ್ತ ಹಿರಿಯ ಚಾಲಕ ಟಿ.ಗವಿರಂಗಪ್ಪ(80) ಅವರು ಇಂದು ಹೃದಯಾಘಾತದಿಂದ ಬೆಂಗಳೂರಲ್ಲಿ ನಿಧನರಾದರು. ಮೈಸೂರಿನ ಹೆಬ್ಬಾಳು ಸಂಕ್ರಾಂತಿ ಸರ್ಕಲ್ ನಿವಾಸಿಗಳಾದ ದಿವಂಗತರು ಪತ್ನಿ, ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಹೆಬ್ಬಾಳು ರುದ್ರಭೂಮಿಯಲ್ಲಿ ಬುಧವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮೃತರ ನಿಧನಕ್ಕೆ ಕೆಪಿಸಿಎಲ್ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ ಸಂತಾಪ ಸೂಚಿಸಿದೆ.

ಪುಟ್ಟಮ್ಮ



ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಹಾಗೂ ದಿವಂಗತ ಎಸ್.ವಿ. ಸ್ವಾಮಿ ಅವರ ಪತ್ನಿ ಪುಟ್ಟಮ್ಮ (90) ಸೋಮವಾರ ನಿಧನರಾದರು. ಮೃತರು ಹಿರಿಯ ವಕೀಲ ಅನಂತರಾಜು ಸೇರಿದಂತೆ ಐವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಮತ್ತು ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸೋಮವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ನೇರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿ ಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 8.30 ಆರೋಗ್ಯಾಮೃತ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖಾ ಪ್ರಾಯೋಜಿತ ಕಾರ್ಯಕ್ರಮ, 10.00 ಎಸ್. ಮಹದೇವಪ್ಪ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ, 4.00 ಜನಪದಗೀತೆ, 4.30 ರಸಮಂಜರಿ, 6.50 ಕೃಷಿರಂಗ–ಕಿಸಾನ್‌ವಾಣಿ–ಕಾಳು ಮೆಣಸಿನ ಬೇಸಾಯ ಕುರಿತು ಶಂಕರಸ್ವಾಮಿ ಹಾಗೂ ಎಸ್.ಮಂಜುನಾಥ್ ಅವರೊಂದಿಗೆ ಸಂದರ್ಶನ, 8.00 ಯುವವಾಣಿ–ಯುವ ಪ್ರತಿಭೆ. ಸುಗಮ ಸಂಗೀತ ಕಲಾವಿದೆ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ನಯನ ಎಸ್., 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ “ವರ್ಷಕ್ಕೊಂದು ಕರು”, ರಚನೆ–ಡಾ.ಶಿವಕುಮಾರ ಕ. ರಡ್ಡೋರ್ ಹಾಗೂ ಡಾ.ಕೆ.ಸಿ.ವೀರಣ್ಣ, ನಿರ್ಮಾಣ ಹಾಗೂ ನಿರ್ದೇಶನ–ಪ್ರಭುಸ್ವಾಮಿ ಮಳಿಮಠ್

ಇಂದಿನ ಪಂಚಾಂಗ

9.11.2023 ಗುರುವಾರ, ಮಳೆ ನಕ್ಷತ್ರ: ವಿಶಾಖ, 07.11.2023 ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ದಿ ಆರ್ಟ್ ಆಫ್ ಲಿವಿಂಗ್ (ವೇದ ವಿಜ್ಞಾನ ಮಹಾ ವಿದ್ಯಾಪೀಠ):** ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಶಿಬಿರ, ಆನಂದದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6ರಿಂದ 8.30, ಸಂಜೆ 6ರಿಂದ 8.30ರವರೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.
- **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ವಚನ ಗಾಯನ ಸ್ಪರ್ಧೆ, ಉದ್ಘಾಟನೆ : ಡಾ. ಎಂ.ಸಿ. ಮನೋಹರ, ವಚನ ಗಾಯನ ಸ್ಪರ್ಧೆ, ಶ್ರೀಮತಿ ಮಂಗಳ ಮುದ್ದುಮಾಪ್ಪ ಅವರಿಂದ ವಚನ ಸಾಹಿತ್ಯದಲ್ಲಿನ ಜ್ಞಾನ–ಕ್ರಿಯೆ ಕುರಿತು ಉಪನ್ಯಾಸ, ಬಹುಮಾನ ವಿತರಣೆ : ನೃಪತುಂಗ ಪ್ರೌಢಶಾಲೆ ಕಾರ್ಯದರ್ಶಿ ಶ್ರೀಮತಿ ಸವಿತಾ ಪ. ಮಲ್ಲೇಶ್, ಮುಖ್ಯ ಅತಿಥಿಗಳು : ಮುಖ್ಯೋಪಾಧ್ಯಾಯರಾದ ಶ್ರೀಮತಿ ಸೌಮ್ಯಶ್ರೀ, ದತ್ತಿ ದಾಸೋಹಿಗಳು : ಹೆಚ್.ಸಿ. ಮೋಹನಶಂಕರ, ಹೆಚ್.ಸಿ. ಈಶ್ವರ ಪ್ರಕಾಶ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ರಮಾಗೋವಿಂದ ರಂಗಮಂದಿರ, ನೃಪತುಂಗ ಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.
- **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಅಕ್ಕ ಐಎಎಸ್ ಅಕಾಡೆಮಿ:** ಡಾ.ಶಿವಕುಮಾರ್ ಅವರ ವಚನಬೋಧಿ ಕೃತಿ ಬಿಡುಗಡೆ ಮತ್ತು ಕನ್ನಡ ರಾಜ್ಯೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿ ಬಿಡುಗಡೆ: ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ, ಕೃತಿ ಕುರಿತು ಮಾತನಾಡುವವರು: ವಿದ್ವಾಂಸ ಪ್ರೊ.ನೀಲಗಿರಿ ತಳವಾರ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ವಿಜಯಕುಮಾರಿ ಕರಿಕಲ್, ಮುಖ್ಯ ಅತಿಥಿಗಳು: ಪ್ರೊ.ಪ್ರೀತಿ ಶುಭಚಂದ್ರ, ಶಂಕರ ದೇವನೂರು, ಡಾ.ಶಿವಕುಮಾರ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಹೊಯ್ಸಳ ಟ್ರಸ್ಟ್ ಹಾಗೂ ಭುವನೇಶ್ವರಿ ಆಟೋ ಚಾಲಕರ ಸಂಘ:** ದಿವಂಗತ ಶಂಕರ್‌ನಾಗ್ ಜನ್ಮ ದಿನದ ಅಂಗವಾಗಿ ಆಟೋ ಚಾಲಕರ ದಿನಾಚರಣೆ ಪ್ರಯುಕ್ತ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಮೇಯರ್ ಆಯೂಬ್ ಖಾನ್, ಕಾಂಗ್ರೆಸ್ ಮುಖಂಡರಾದ ಸುಶ್ರುತ್‌ಗೌಡ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ವೃತ್ತ ನಿರೀಕ್ಷಕ ಜೀವನ್, ಹೊಯ್ಸಳ ಟ್ರಸ್ಟ್ ಅಧ್ಯಕ್ಷ ಎಂ.ಪಿ.ರಾಜೇಶ್, ಉದ್ಯಮಿ ಜಟ್ಟಿಹುಂಡಿ ಗೋಪಾಲ್, ಸ್ಥಳ: ಗೋಪಾಲಗೌಡ ಆಸ್ಪತ್ರೆ ಮುಂಭಾಗ, ನಜರ್‌ಬಾದ್, ಬೆಳಗ್ಗೆ 11ಕ್ಕೆ.
- **ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು :** 62ನೇ ರಾಷ್ಟ್ರೀಯ ಫಾರ್ಮಸಿ ಸಪ್ತಾಹದ ಸಮಾರೋಪ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಡಾ. ಮೊಹಮ್ಮದ್ ಗುಲ್ಜಾರ್ ಅಹಮದ್, ಅಧ್ಯಕ್ಷತೆ : ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಟಿ.ಎಂ. ಪ್ರಮೋದ್ ಕುಮಾರ್, ಗೌರವ ಅತಿಥಿಗಳು : ಡಾ. ಎಂ. ಮಂಜುನಾಥ, ಫಾರೂಕಿಯಾ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ನಿಸಾರ್ ಅಹಮದ್, ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 11ಕ್ಕೆ.
- **ಶ್ರೀ ಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ:** ರಾಜ್ಯೋತ್ಸವ ಪ್ರಯುಕ್ತ ಜೈ ಕನ್ನಡಾಂಬೆ ವೃತ್ತಿ ಕಲಾವೇದಿಕೆ ಕಲಾವಿದರಿಂದ ಮುದುಕನ ಮದುವೆ ಹಾಸ್ಯಭರಿತ ನಾಟಕ, ಸ್ಥಳ: ಪುರಭವನ, ಮಧ್ಯಾಹ್ನ 1ಕ್ಕೆ.
- **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ :** ನರವಿಜ್ಞಾನ ಶಾಸ್ತ್ರದ ನಿರಂತರ ಕಲಿಕಾ ಕಾರ್ಯಕ್ರಮ, ಉಪಸ್ಥಿತರು : ಡಾ. ಗಿರೀಶ್ ಬಾಬುರಾವ್ ಕುಲಕರ್ಣಿ, ಡಾ. ಎಂ. ಪೂಜಾ, ಡಾ. ಅಜಯ್ ಅಸ್ರಣ್ಣ, ಡಾ. ಹೆಚ್.ಆರ್. ಅರವಿಂದ, ಡಾ. ಡಿ.ಎನ್. ನಂದಕುಮಾರ್, ಡಾ. ಕವಿರಾಜ ಉಡುಪ, ಸ್ಥಳ: ವೈದ್ಯಕೀಯ ಕಾಲೇಜು ಆವರಣ, ಮಧ್ಯಾಹ್ನ 2 ರಿಂದ.
- **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ :** ಉಚಿತ ಶ್ರವಣ ಸಾಧನಗಳ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಜಿಪಂ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಪತ್ರಕರ್ತೆ ರಶ್ಮಿ ಕೋಟಿ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಭವನ, ಎಂ.ಜಿ. ರಸ್ತೆ, ಸಂಜೆ 4ಕ್ಕೆ.
- **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ–2023, ಸಂಜೆ 6.15 ರಿಂದ ವಿದುಷಿ ಶ್ರೀಮತಿ ಅನುಶ್ರೀ ಪದ್ಮನಾಭ ಅವರಿಂದ ಒಡಿಸ್ಸಿ, ಸಂಜೆ 7.30 ರಿಂದ ವಿದ್ವಾನ್ ಅತಾನುದಾಸ್ ಅವರಿಂದ ಭರತನಾಟ್ಯ, ಗೌರವ ಸಮರ್ಪಣೆ : ಕೆ.ಎಸ್.ಎನ್. ಪ್ರಸಾದ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 9 ಗುರುವಾರ 2023

ಸಂಪುಟ: 44 | ಸಂಚಿಕೆ: 203 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಮಾಜಿ ಕಾರ್ಯದರ್ಶಿ ಸಹಿ ನಕಲು ಮಾಡಿ ನಿವೇಶನ ಗೋಲ್‌ಮಾಲ್ ಮಾಡಿದ ಬೆನ್ನಲ್ಲೇ ಮುಡಾದಲ್ಲಿ ಮತ್ತೊಂದು ಕರ್ಮಕಾಂಡ ಬಯಲು

ಚಲನ್, ಬ್ಯಾಂಕ್ ಸೀಲ್ ನಕಲಿ ಮಾಡಿ ಕೋಟ್ಯಾಂತರ ರೂ. ಲೂಟಿ

■ ಲಕ್ಷ್ಮೀಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲು ■ ತಲೆಮರೆಸಿಕೊಂಡಿರುವ ಮೂವರು ಮುಡಾ ಸಿಬ್ಬಂದಿ
■ ಬ್ಯಾಂಕ್ ಆಫ್ ಬರೋಡಾ ಸಿಬ್ಬಂದಿ ಶಾಮೀಲು ಶಂಕೆ ■ ಸಮಗ್ರ ತನಿಖೆಗೆ ಅಧಿಕಾರಿಗಳ ತಂಡ ರಚನೆ



● ಎಸ್.ಟಿ.ರವಿಕುಮಾರ್

ಮೈಸೂರು, ನ.8–ಮಾಜಿ ಕಾರ್ಯದರ್ಶಿ ಸಹಿ ನಕಲು ಮಾಡಿ ಬದಲಿ ನಿವೇಶನದ ಟೈಟಲ್ ಡೀಡ್ ಕಡತಕ್ಕೆ ಅನುಮೋದನೆ ಪಡೆದು ಭಾರಿ ಗೋಲ್‌ಮಾಲ್ ಮಾಡಿದ ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಇದೀಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಚಲನ್ ಮತ್ತು ಬ್ಯಾಂಕ್ ಸೀಲ್ ಅನ್ನೇ ನಕಲು ಮಾಡಿಕೊಂಡು ಕೋಟ್ಯಾಂತರ ರೂ. ವಂಚಿಸಿರುವ ಮತ್ತೊಂದು ಮಹಾ ವಂಚನೆ ಬಯಲಾಗಿದೆ.

ಮುಡಾ ವ್ಯಾಪ್ತಿಯ ಖಾಸಗಿ ಬಡಾವಣೆಗಳ ಖಾತಾ ವರ್ಗಾವಣೆಗಾಗಿ ಬ್ಯಾಂಕ್‌ಗೆ ಹಣ ಪಾವತಿ ಮಾಡಿದ ಸಂಬಂಧ ನಕಲಿ ಚಲನ್ ಮತ್ತು ಸೀಲ್‌ನೊಂದಿಗೆ ಮುಡಾಗೆ ಅರ್ಜಿದಾರರು ಸಲ್ಲಿಸಿರುವುದು ಕಂಡು ಬಂದಿದ್ದು, ಈ ಸಂಬಂಧ ಮುಡಾದಿಂದ ಅರ್ಜಿದಾರರ ವಿರುದ್ಧ ಲಕ್ಷ್ಮೀಪುರಂ ಠಾಣೆಗೆ ದೂರು ಸಲ್ಲಿಸಲಾಗಿದೆ. ಈ ಪ್ರಕರಣ ಬಯಲಾಗುತ್ತಿದ್ದಂತೆಯೇ ಮುಡಾದ ಮೂವರು ಸಿಬ್ಬಂದಿ ತಲೆಮರೆಸಿಕೊಂಡಿದ್ದಾರೆ.

ವಿವರ: ಅಗತ್ಯ ದಾಖಲೆಗಳೊಂದಿಗೆ ನಿವೇಶನದ ಖಾತಾ ▶ 6ನೇ ಪುಟಕ್ಕೆ

ದೂರು ನೀಡದಂತೆ, ಪ್ರಕರಣ ದಾಖಲಿಸದಂತೆ ತೀವ್ರ ಒತ್ತಡ!

ಮೈಸೂರು, ನ. 8(ಆರ್‌ಕೆ)– ಮುಡಾ ಬ್ಯಾಂಕ್ ಚಲನ್ ಮತ್ತು ಮೊಹರು ನಕಲು ಮಾಡಿ ಕೋಟ್ಯಾಂತರ ರೂ. ಹಣ ಗುಳುಂ ಮಾಡಿರುವ ಪ್ರಕರಣ ಬಯಲಾಗುತ್ತಿದ್ದಂತೆಯೇ ದೂರು ನೀಡದಂತೆ ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸದಂತೆ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಮುಡಾ ಹಾಗೂ ಪೊಲೀಸ್ ಅಧಿಕಾರಿಗಳ ಮೇಲೆ ತೀವ್ರ ಒತ್ತಡ ಹೇರುತ್ತಿವೆ ಎಂದು ಉನ್ನತ ಮೂಲಗಳು ತಿಳಿಸಿವೆ.

ದೂರು ನೀಡಲು ಸಿದ್ಧತೆ ನಡೆಸುತ್ತಿದ್ದಂತೆಯೇ ಮುಡಾ ಆಯುಕ್ತರು, ಕಾರ್ಯದರ್ಶಿಗಳು, ವಲಯಾಧಿಕಾರಿಗಳು ಹಾಗೂ ವಿಶೇಷ ತಹಸೀಲ್ದಾರ್‌ಗಳಿಗೆ ಕೆಲ ಪ್ರಭಾವಿ ರಾಜಕಾರಣಿಗಳು ಇಂದು ಬೆಳಗ್ಗೆಯಿಂದಲೇ ವಾಟ್ಸಾಪ್ ಕಾಲ್ ಮಾಡಿ ದೂರು ನೀಡದೆಯೇ ಪ್ರಕರಣ ಇತ್ಯರ್ಥಪಡಿಸಿ ಎಂದು ಒತ್ತಡ ಹೇರಿದ್ದರು ಎಂದು ಹೇಳಲಾಗಿದೆ.

ಅದೇ ರೀತಿ ಲಕ್ಷ್ಮೀಪುರಂ ಠಾಣಾ ಇನ್ಸ್‌ಪೆಕ್ಟರ್‌ಗೂ ಪ್ರಕರಣ ದಾಖಲಿಸದೆಯೇ ದೂರು ಸ್ವೀಕೃತಿ ಎಂದು ಪರಿಗಣಿಸಿ ವಿಚಾರಣೆ ಮಾಡಿ ಹೇಳಿಕೆ ಪಡೆದು ಮುಕ್ತಾಯಗೊಳಿಸಿ ಎಂದು ಒತ್ತಡ ಹೇರಿದ್ದರಲ್ಲದೇ, ಕೆಲ ಹಿರಿಯ ಪೊಲೀಸ್ ಅಧಿಕಾರಿಗಳ ಮೂಲಕವೂ ಶಿಫಾರಸ್ಸು ಮಾಡಿಸಿದ್ದರು ಎಂದು ಹೆಸರೇಳಲಿಚ್ಛಿಸದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಒತ್ತಡ ಜಾಸ್ತಿಯಾದ ಹಿನ್ನೆಲೆಯಲ್ಲಿ ಮೊಬೈಲ್ ಫೋನ್ ಸ್ವಿಚ್‌ಆಫ್ ಮಾಡಿದ ಮುಡಾ ಅಧಿಕಾರಿಗಳು, ಠಾಣೆಗೆ ಹೋಗಿ ದೂರು ನೀಡಿ ಎಫ್‌ಐಆರ್ ಮಾಡಿಸಿ ದಿಟ್ಟತನ ಮೆರೆದಿದ್ದಾರೆ. ಅಷ್ಟೇ ಅಲ್ಲದೇ, ಈ ಹಿಂದಿನ ನಾಲ್ಕೈದು ವರ್ಷಗಳ ಅವಧಿಯಿಂದಲೂ ಸಲ್ಲಿಕೆಯಾಗಿರುವ ಬ್ಯಾಂಕ್ ಚಲನ್ ಪ್ರತಿಗಳನ್ನೂ ಪರಿಶೀಲಿಸಲು ಮುಂದಾಗಿದ್ದಾರೆ.

ಹಣ ಪಾವತಿ ಪರಿಶೀಲನೆಗೆ ತಂಡ ರಚನೆ

ಮೈಸೂರು, ನ. 8(ಆರ್‌ಕೆ)– ಮುಡಾ ಖಾತೆಗೆ ವಿವಿಧ ಸೇವೆಗಾಗಿ ಅರ್ಜಿದಾರರು ಹಣ ಪಾವತಿಸಿರುವ ಬಗ್ಗೆ ಲೆಕ್ಕ ಶಾಖೆಯಲ್ಲಿ ಪರಿಶೀಲನೆ ನಡೆಸಲು ನಾಲ್ವರು ಅಧಿಕಾರಿಗಳ ಒಳಗೊಂಡ ತಂಡ ರಚಿಸಲಾಗಿದೆ.

ಮುಡಾ ಆಯುಕ್ತ ಜಿ.ಟಿ. ದಿನೇಶಕುಮಾರ್ ಈ ಸಂಬಂಧ ಇಂದು ಅಧಿಕೃತ ಜ್ಞಾಪನ ಹೊರಡಿಸಿದ್ದು, ಪ್ರಾಧಿಕಾರದ ನಗರ ಯೋಜಕ ಸದಸ್ಯ ಆರ್.ಶೇಷ, ಮುಖ್ಯ ಲೆಕ್ಕಾಧಿಕಾರಿ ಎನ್ ಮುತ್ತಾ, ಕಾರ್ಯದರ್ಶಿ ಜಿ.ಡಿ. ಶೇಖರ್, ಎಕ್ಸಿಕ್ಯೂಟಿವ್ ಇಂಜಿನಿಯರ್ (ದಕ್ಷಿಣ) ಕೆ.ಆರ್. ಮಹೇಶ್ ಅವರನ್ನು ತಂಡಕ್ಕೆ ನಿಯೋಜಿಸಿ 15 ದಿನದೊಳಗಾಗಿ ಅವಶ್ಯ ಅಧೀನ ಸಿಬ್ಬಂದಿಗಳ ನೆರವು ಪಡೆದು ಪರಿಶೀಲಿಸಿ ವರದಿ ನೀಡುವಂತೆ ನಿರ್ದೇಶನ ನೀಡಿದ್ದಾರೆ. ನಕ್ಷೆ ಅನುಮೋದನೆ, ಸಿಆರ್, ವಾಸಯೋಗ್ಯ ಪ್ರಮಾಣ ಪತ್ರ, ಖಾತಾ ನೋಂದಣಿ, ಹಕ್ಕುಪತ್ರ ಸೇರಿದಂತೆ ವಿವಿಧ ಸೇವೆಗಾಗಿ ಶುಲ್ಕ ಪಾವತಿಸಿರುವ ಬಗ್ಗೆ ಬ್ಯಾಂಕ್ ಚಲನ್ ಹಾಗೂ ಪ್ರಾಧಿಕಾರದ ಖಾತೆಗೆ ಹಣ ಜಮೆಯಾಗಿರುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ 2023ರ ಜನವರಿ 1ರಿಂದ ಈವರೆಗಿನ ಎಲ್ಲಾ ಪ್ರಕರಣಗಳ ಬಗ್ಗೆ ಸಮಗ್ರ ವರದಿ ನೀಡುವಂತೆ ತಂಡದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅದರನ್ವಯ ನಾಲ್ವರು ಅಧಿಕಾರಿಗಳೂ ಇಂದು ಮಧ್ಯಾಹ್ನದಿಂದಲೇ ಪ್ರಾಧಿಕಾರದ ಲೆಕ್ಕ ಶಾಖೆಗೆ ಬ್ಯಾಂಕ್ ಆಫ್ ಬರೋಡಾ ಶಾಖೆಯಿಂದ ಬಂದಿರುವ ಹಣ ಪಾವತಿ ಚಲನ್, ಲೆಕ್ಕದ ದಸ್ತಾವೇಜಿನಲ್ಲಿ ನಮೂದಿಸಿರುವ ಮಾಹಿತಿಗಳನ್ನು ಪರಿಶೀಲಿಸಲಾರಂಭಿಸಿದ್ದಾರೆ.

ನಮ್ಮ ಶಾಸಕರು ಗಟ್ಟಿಯಾಗಿದ್ದಾರೆ

ಚಿಕ್ಕಮಗಳೂರು, ನ.8– ತಮ್ಮ ಸರ್ಕಾರವನ್ನು ಅಸ್ಥಿರಗೊಳಿಸುವ ಬಿಜೆಪಿಯ



ಪ್ರಯತ್ನ ವಿಫಲವಾಗುತ್ತೆ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಶಾಸಕರು ಗಟ್ಟಿಯಾಗಿದ್ದಾರೆ. 'ಆಪರೇಷನ್ ಕಮಲ'ದ ಯಾವುದೇ ಪ್ರಯತ್ನಗಳಿಗೆ ಬಲಿಯಾಗುವುದಿಲ್ಲ ಎಂದು ಬುಧವಾರ ಹೇಳಿದ್ದಾರೆ. ಇಂದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ಕಾಂಗ್ರೆಸ್ ಶಾಸಕರನ್ನು ಬಿಜೆಪಿಗೆ ಸೆಳೆಯುವ ಬಗ್ಗೆ ಗುಪ್ತಚರ ಮಾಹಿತಿ ವರದಿ ವಿಚಾರವಾಗಿ ಪ್ರತಿಕ್ರಿಯಿಸಿದ ಸಿಎಂ, ಗುಪ್ತಚರ ಇಲಾಖೆ ನನ್ನ ಬಳಿಯೇ ಇದೆ, ▶ 6ನೇ ಪುಟಕ್ಕೆ

ನ.15ಕ್ಕೆ ಹಲವು ಜೆಡಿಎಸ್–ಬಿಜೆಪಿ ಶಾಸಕರು ಕಾಂಗ್ರೆಸ್ ಸೇರ್ಪಡೆ



● ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಫೋಟಕ ಹೇಳಿಕೆ ● ನಮ್ಮ ಒಬ್ಬ ಶಾಸಕರನ್ನೂ ಸೆಳೆಯಲು ಸಾಧ್ಯವಿಲ್ಲ

ನವದೆಹಲಿ, ನ.8– ನವೆಂಬರ್ 15ಕ್ಕೆ ಹಲವು ಜೆಡಿಎಸ್ –ಬಿಜೆಪಿ ಶಾಸಕರು ಕಾಂಗ್ರೆಸ್ ಪಕ್ಷ ಸೇರುತ್ತಾರೆ ಎಂದು ದೆಹಲಿಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಬುಧವಾರ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ದೆಹಲಿ ಪ್ರವಾಸದಲ್ಲಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೀಪಾವಳಿ ನಂತರ ರಾಜ್ಯ ರಾಜಕೀಯದಲ್ಲಿ ಹಲವು ಬದಲಾವಣೆಗಳಾಗುತ್ತವೆ. ಬಿಜೆಪಿ ಹಾಗೂ ಜೆಡಿಎಸ್ ನಾಯಕರು ನಮ್ಮ ಸಂಪರ್ಕದಲ್ಲಿದ್ದಾರೆ. ನ.15ರಂದು ಮತ್ತಷ್ಟು ನಾಯಕರು ನಮ್ಮ ಪಕ್ಷಕ್ಕೆ ಸೇರುತ್ತಾರೆ ಎಂದು ಹೇಳುವ ಮೂಲಕ ಆಪರೇಷನ್ ಹಸ್ತದ ಸುಳಿವು ನೀಡಿದ್ದಾರೆ.

ನಮ್ಮ ಒಬ್ಬ ಶಾಸಕರನ್ನೂ ಸೆಳೆಯಲು ಸಾಧ್ಯವಿಲ್ಲ: ರಾಜ್ಯದಲ್ಲಿ ಬಿಜೆಪಿ ಈಗಿರುವ ಪರಿಸ್ಥಿತಿಯಲ್ಲಿ ನಮ್ಮ ಒಬ್ಬ ಶಾಸಕರನ್ನೂ ಅವರಿಗೆ ಕರೆದುಕೊಳ್ಳಲು ಆಗಲ್ಲ. ಬಿಜೆಪಿಯಲ್ಲಿ ನಾಯಕತ್ವದ ಬಗ್ಗೆಯೇ ತೀರ್ಮಾನ ▶ 6ನೇ ಪುಟಕ್ಕೆ

'ಆಪರೇಷನ್ ಹಸ್ತ'ಕ್ಕೆ ಕೌಂಟರ್: ಹಾಸನಾಂಬೆ ಮುಂದೆ ಜೆಡಿಎಸ್ ಶಾಸಕರ ಒಗ್ಗಟ್ಟು ಪ್ರದರ್ಶನ




ಹಾಸನ, ನ.8–ಮುಂಬರುವ ಲೋಕಸಭೆ ಚುನಾವಣೆಗೆ ಬಿಜೆಪಿ ಜೊತೆ ಮೈತ್ರಿಯಿಂದ ಪಕ್ಷದೊಳಗೆ ಕೆಲವರಲ್ಲಿ ಉಂಟಾಗಿರುವ ಅಸಮಾಧಾನ ಮತ್ತು ಕಾಂಗ್ರೆಸ್‌ನಿಂದ ಆಪರೇಷನ್ ಹಸ್ತದ ಭೀತಿ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಜೆಡಿಎಸ್ ರಾಜ್ಯಾಧ್ಯಕ್ಷ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಹಾಸನದಲ್ಲಿ ಹಾಸನಾಂಬೆ ದೇಗುಲದ ಮುಂದೆ ಒಗ್ಗಟ್ಟು ಪ್ರದರ್ಶಿಸಿ, ಪರೋಕ್ಷವಾಗಿ ತಮ್ಮ ಶಾಸಕರನ್ನು ಸೆಳೆಯಲು ಯತ್ನಿಸುತ್ತಿರುವ ಕಾಂಗ್ರೆಸ್ ನಾಯಕರಿಗೆ ಸಂದೇಶ ನೀಡುವ ಪ್ರಯತ್ನ ಮಾಡಿದ್ದಾರೆ.

ಇಂದು ಬೆಳಗ್ಗೆಯೇ ಜೆಡಿಎಸ್‌ನ ಶಾಸಕರನ್ನು ಕರೆದುಕೊಂಡು ಹಾಸನಾಂಬೆ ದೇಗುಲಕ್ಕೆ ಬಂದು ದೇವಿಯ ದರ್ಶನ ಮಾಡಿ, ಪೂಜೆ ಸಲ್ಲಿಸಿದರು. ಒಟ್ಟು 19 ಜೆಡಿಎಸ್ ಶಾಸಕರ ಪೈಕಿ ಶರಣಗೌಡ ಕಂದಕೂರು ಒಬ್ಬರನ್ನು ಬಿಟ್ಟು ಇನ್ನುಳಿದ ಎಲ್ಲಾ ಶಾಸಕರು ಹಾಸನಾಂಬೆ ದರ್ಶನ ಪಡೆದಿದ್ದಾರೆ. ಈ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ, ನಮ್ಮ ಶಾಸಕರನ್ನು ಸೆಳೆದುಕೊಳ್ಳಲು ಕಾಂಗ್ರೆಸ್ ನಾಯಕರಿಗೆ ಸಾಧ್ಯವಿಲ್ಲ. ನಮ್ಮೆಲ್ಲಾ ಶಾಸಕರು ಒಗ್ಗಟ್ಟಾಗಿ ಇದ್ದೇವೆ. ಜೆಡಿಎಸ್ ಪಕ್ಷವನ್ನು ಸಂಪೂರ್ಣ ನಾಶಪಡಿಸುವ ಕಾಂಗ್ರೆಸ್ ನಾಯಕರ ಉದ್ದೇಶಕ್ಕೆ ನಮ್ಮ ನಾಯಕರು ಇಂದು ಉತ್ತರ ಕೊಟ್ಟಿದ್ದಾರೆ. ನಾಡಿಗೆ ಬಂದಿರುವ ಸಂಕಷ್ಟಗಳು ಸಂಪೂರ್ಣವಾಗಿ ತಾಯಿಯ ಆಶೀರ್ವಾದದಿಂದ ಬಗೆಹರಿಯಲಿ ಎಂದು ▶ 8ನೇ ಪುಟಕ್ಕೆ

ಚುನಾವಣಾ ರಾಜಕೀಯಕ್ಕೆ ಮಾಜಿ ಕೇಂದ್ರ ಸಚಿವ

ಸದಾನಂದಗೌಡ ನಿವೃತ್ತಿ ಘೋಷಣೆ



ಹಾಸನ: ಮಹತ್ವದ ಬೆಳವಣಿಗೆಯಲ್ಲಿ ಬಿಜೆಪಿಯ ಹಿರಿಯ ನಾಯಕ, ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ಸಚಿವ ಡಿವಿ ಸದಾನಂದಗೌಡ, ಚುನಾವಣಾ ರಾಜಕೀಯಕ್ಕೆ ಬುಧವಾರ ನಿವೃತ್ತಿ ಘೋಷಿಸಿದ್ದಾರೆ.

ಹಾಸನದಲ್ಲಿ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಬರ ಅಧ್ಯಯನದಲ್ಲಿ ಪಾಲ್ಗೊಂಡು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿದ್ದಾರೆ. ಪಕ್ಷದಿಂದ ಗರಿಷ್ಠ ಲಾಭ ಪಡೆದಿದ್ದೇನೆ. ಹೆಚ್ಚಿನದಕ್ಕೆ ಆಸೆಪಡುವುದಿಲ್ಲ ಎಂದು ಹೇಳಿ ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಣೆ ಮಾಡಿದ್ದಾರೆ. ಸದಾನಂದಗೌಡ ಪ್ರಸ್ತುತ ಲೋಕಸಭೆಯಲ್ಲಿ ಬೆಂಗಳೂರು ಉತ್ತರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದು, ಚುನಾವಣಾ ರಾಜಕೀಯದಲ್ಲಿ ಮುಂದುವರೆಯದಿರಲು ನಿರ್ಧರಿಸಿದ್ದೇನೆ. ನನ್ನ 30 ವರ್ಷಗಳ ರಾಜಕೀಯ ಜೀವನದಲ್ಲಿ ಪಕ್ಷ ನನಗೆ ಎಲ್ಲವನ್ನೂ ನೀಡಿದೆ. ನಾನು 10 ವರ್ಷಗಳ ಕಾಲ ಶಾಸಕನಾಗಿ, 20 ವರ್ಷ ಸಂಸದನಾಗಿ, ಒಂದು ವರ್ಷ ಮುಖ್ಯಮಂತ್ರಿಯಾಗಿ, 4 ವರ್ಷ ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಮತ್ತು ನರೇಂದ್ರ ಮೋದಿ ಸರ್ಕಾರದಲ್ಲಿ ಏಳು ವರ್ಷ ಸಂಪುಟ ಸಚಿವನಾಗಿ ಸೇವೆ ಸಲ್ಲಿಸಿದ್ದೇನೆ. ನಾನು ಹೆಚ್ಚು ಆಸೆಪಟ್ಟರೆ, ಜನ ನನ್ನನ್ನು ಸ್ವಾರ್ಥಿ ಎಂದು ಕರೆಯುತ್ತಾರೆ ಎಂದು ಹೇಳಿದರು.

2021ರಲ್ಲಿ ಕೇಂದ್ರ ಸಚಿವ ಸಂಪುಟ ಪುನಾರಚನೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಆದೇಶದ ಮೇರೆಗೆ ಅವರು ಕೇಂದ್ರ ಸಚಿವ ಸ್ಥಾನ ತ್ಯಜಿಸಿದ್ದರು. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಅವರಿಗೆ ಟಿಕೆಟ್ ನೀಡುವುದಿಲ್ಲ ಎಂದು ಇತ್ತೀಚೆಗೆ ವದಂತಿಗಳು ಹಬ್ಬಿದ್ದವು. ಆ ವಿಚಾರವಾಗಿ ಅಸಮಾಧಾನಗೊಂಡಿದ್ದ ಅವರು, ▶ 6ನೇ ಪುಟಕ್ಕೆ

ಲೈಂಗಿಕ ದೌರ್ಜನ್ಯ ಪ್ರಕರಣ: ಮುರುಘಾ ಶ್ರೀಗಳಿಗೆ ಷರತ್ತು ಬದ್ಧ ಜಾಮೀನು

ಮತ್ತೊಂದು ಅರ್ಜಿ ಬಾಕಿ; ಶ್ರೀಗಳಿಗೆ ಬಿಡುಗಡೆ ಭಾಗ್ಯವಿಲ್ಲ



ಬೆಂಗಳೂರು: ಅಪ್ರಾಪ್ತ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗದ ಮುರುಘಾ ಮಠದ ಡಾ.ಶಿವಮೂರ್ತಿ ಶ್ರೀಗಳಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿದೆ. ಮುರುಘಾಶ್ರೀ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಶ್ರೀಗಳಿಗೆ ಏಳು ಷರತ್ತನ್ನು ವಿಧಿಸಿ ಜಾಮೀನು ನೀಡಿದೆ. ಅದರಂತೆ ಮುರುಘಾ ಶ್ರೀಗಳು ತಮ್ಮ ಪಾಸ್‌ಪೋರ್ಟ್ ಅನ್ನು ಕೋರ್ಟ್ ವಶಕ್ಕೆ ನೀಡಬೇಕಿದೆ. ಇಬ್ಬರು ಶ್ಯೂರಿಟಿಗಳನ್ನು ಒದಗಿಸಬೇಕು. ಇನ್ನು ಚಿತ್ರದುರ್ಗಕ್ಕೆ ಹೋಗದಂತೆ ಷರತ್ತು ವಿಧಿಸಿದೆ. 2 ಲಕ್ಷ ರೂಪಾಯಿಗಳ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತದ ಇಬ್ಬರ ಶ್ಯೂರಿಟಿಯ ಮೇಲೆ ಅವರಿಗೆ ಜಾಮೀನು ನೀಡಲಾಗಿದೆ. ಸಾಕ್ಷಿಗಳನ್ನು ಹಾಳು ಮಾಡದಂತೆ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರದಂತೆ ಎಚ್ಚರಿಕೆ ನೀಡಲಾಗಿದೆ. ▶ 6ನೇ ಪುಟಕ್ಕೆ

ವೀರಶೈವ ಸಮುದಾಯಕ್ಕೆ ಬಿಜೆಪಿ ಸಾರಥ್ಯ ಅನಿವಾರ್ಯ

● ವರಿಷ್ಠರ ಸಮೀಕ್ಷಾ ವರದಿ ● ಮಾಜಿ ಸಚಿವರಾದ ವಿ.ಸೋಮಣ್ಣ, ಬಸನಗೌಡ ಪಾಟೀಲ್ ಯತ್ನಾಳ್ ಹೆಸರು ಮುಂಚೂಣಿಯಲ್ಲಿ
● ನ.10ರಂದು ಲೋಕಸಭಾ ಚುನಾವಣೆ ಸಂಬಂಧ ಚರ್ಚೆ ● ದೀಪಾವಳಿ ನಂತರ ರಾಜ್ಯಾಧ್ಯಕ್ಷರ ನೇಮಕಾತಿ ಸಾಧ್ಯತೆ



ಸೋಮಣ್ಣ



ಯತ್ನಾಳ್

ಬೆಂಗಳೂರು, ನ.8(ಕೆಎಂಶಿ)– ಬಿಜೆಪಿ ರಾಜ್ಯಾಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದಂತೆ ಸಮೀಕ್ಷೆ ಮೊರೆ ಹೋಗಿದ್ದ ಪಕ್ಷದ ವರಿಷ್ಠರಿಗೆ ಹೊಸ ಸವಾಲು ಎದುರಾಗಿದೆ. ಜಾತಿಗಳ ಪ್ರಭಾವದಿಂದ ಪಕ್ಷವನ್ನು ಹೊರಗೆ ತಂದು ಸಂಘಟನೆ ಮಾಡುವ ವರಿಷ್ಠರ ಕನಸು ವಿಫಲಗೊಂಡಿದ್ದು, ವೀರಶೈವ ಸಮುದಾಯಕ್ಕೆ ಸೇರಿದ ನಾಯಕರನ್ನೇ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವಂತೆ ಎರಡೂ ಸಮೀಕ್ಷೆಗಳು ವರದಿ ನೀಡಿವೆ.

ಮಾಜಿ ಸಚಿವ ವಿ.ಸೋಮಣ್ಣ, ಕೇಂದ್ರದ ಮಾಜಿ ಸಚಿವ ಬಸನಗೌಡ ಪಾಟೀಲ್ ಯತ್ನಾಳ್ ಅವರ ಹೆಸರು ಮುಂಚೂಣಿಯಲ್ಲಿವೆ. ಸಮೀಕ್ಷೆಗೂ ಮೊದಲು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಈ ಸ್ಥಾನಕ್ಕೆ ತರಲು ಪ್ರಧಾನಿ ನರೇಂದ್ರ ಮೋದಿ ಅವರು ಆಸಕ್ತಿ ತೋರಿದ್ದರು. ಇದಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬೆಂಬಲವೂ ಇತ್ತು.

ಶೋಭಾ ಅವರು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಕಾಂಗ್ರೆಸ್ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರೂ ಇದೇ ಸಮುದಾಯಕ್ಕೆ ಸೇರಿದವರಾಗಿರುವುದರಿಂದ ಪಕ್ಷಕ್ಕೆ ಲಾಭದಾಯಕವಲ್ಲ ಎಂಬ ವರದಿಯ ಹಿನ್ನೆಲೆಯಲ್ಲಿ ವರಿಷ್ಠರು ಈ ನಿರ್ಧಾರವನ್ನು ತಡೆಹಿಡಿದಿದ್ದಾರೆ.

ರಾಜ್ಯಾಧ್ಯಕ್ಷರ ಸ್ಥಾನಕ್ಕೆ ಕರ್ನಾಟಕದ ಮುಖಂಡರಿಂದ ಒತ್ತಡಗಳಿವೆ. ಇದಕ್ಕೆ ಮಣಿಯಬಾರದೆಂದು ಪಕ್ಷದ ವರಿಷ್ಠರು ಚುನಾವಣಾ ಸಂದರ್ಭದಲ್ಲಿ ಅಭ್ಯರ್ಥಿಗಳ ಆಯ್ಕೆಗೆ ಸಮೀಕ್ಷೆ ನಡೆಸುವ ಸಂದರ್ಭದಲ್ಲೇ ಈ ಸ್ಥಾನಕ್ಕೂ ಸಮೀಕ್ಷೆ ನಡೆಸಿದ್ದರು.

ಪಕ್ಷದ ಕಾರ್ಯಕರ್ತರು ಹಾಗೂ ಜನಾಭಿಪ್ರಾಯದಲ್ಲಿ ವೀರಶೈವ ಸಮುದಾಯಕ್ಕೆ ಅಧ್ಯಕ್ಷ ಸ್ಥಾನ ನೀಡಿದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸಲು ಸಾಧ್ಯ. ಒಂದು ವೇಳೆ ಈ ಸಮುದಾಯಕ್ಕೆ ಅವಕಾಶ ಮಾಡಿಕೊಡುವುದಾದರೆ ಸಂಘಟನಾ ದೃಷ್ಟಿಯಿಂದ ವಿ.ಸೋಮಣ್ಣ ಇಲ್ಲವೇ ▶ 6ನೇ ಪುಟಕ್ಕೆ

ಕಾವೇರಿ ನದಿ ನೀರಿನ ಹರಿವಿನ ಪ್ರಮಾಣದ ಮೇಲೆ ಕೇಂದ್ರ ಜಲ ಆಯೋಗದ ಕಣ್ಗಾವಲು

ಕೊಪ್ಪ–ಕುಶಾಲನಗರದ ಕಾವೇರಿ ನದಿ ಸೇತುವೆಯಲ್ಲಿ ಟೆಲಿಮೆಟ್ರಿಕ್ ವಾಟರ್ ಮಾನಿಟರಿಂಗ್ ಸಿಸ್ಟಂ ಅಳವಡಿಕೆ

ಕುಶಾಲನಗರ, ನ.8(ಆರ್‌ಹೆಚ್)– ಕೃಷ್ಣರಾಜ ಸಾಗರ ಜಲಾಶಯದ ಪ್ರಮುಖ ಜಲ ಮೂಲವಾಗಿರುವ ಕಾವೇರಿ ನದಿ ಹರಿಯುವ ಮಾರ್ಗ ಮಧ್ಯೆ ಕುಶಾಲನಗರದ ಕಾವೇರಿ ನದಿ ಸೇತುವೆಯಲ್ಲಿ ಟೆಲಿಮೆಟ್ರಿಕ್ ವಾಟರ್ ಮಾನಿಟರಿಂಗ್ ಸಿಸ್ಟಂ ಅಳವಡಿಸುವ ಮೂಲಕ ನೀರಿನ ಆಳ ಹಾಗೂ ಹರಿಯುವ ಪ್ರಮಾಣದ ಮೇಲೆ ನಿಗಾ ಇರಿಸಲಾಗುತ್ತಿದೆ.

ಪ್ರವಾಹ ಸೇರಿದಂತೆ ನದಿ ನೀರಿನ ಹರಿವಿನ ಪ್ರಮಾಣವನ್ನು ಸ್ವಯಂ ಚಾಲಿತ ಮಾಹಿತಿ ಪಡೆಯುವ ನಿಟ್ಟಿನಲ್ಲಿ ಕುಶಾಲನಗರ– ಕೊಪ್ಪ ಕಾವೇರಿ ನದಿ ಸೇತುವೆಯ ಮೇಲ್ಭಾಗದಲ್ಲಿ ಕೇಂದ್ರ ಜಲಸಂಪನ್ಮೂಲ ಇಲಾಖೆಯಿಂದ ನದಿ ಜಲ ಮಾಪಕ ಅಳವಡಿಸಲಾಗಿದೆ.

ಕರ್ನಾಟಕ ಮತ್ತು ತಮಿಳುನಾಡು ನಡುವಿನ ನೀರು ಹಂಚಿಕೆ ವಿವಾದ ಅನೇಕ ವರ್ಷಗಳಿಂದ ಬಗೆಹರಿಯದ ಸಮಸ್ಯೆಯಾಗಿ ಕಾಡುತ್ತಿದೆ. ನೀರು ಹಂಚಿಕೆ ಸಂಬಂಧ ಕೇಂದ್ರ ಜಲ ಆಯೋಗದ ನಿರ್ದೇಶನದ ಮೇರೆಗೆ ಈ ಹಿಂದೆ ಹಾರಂಗಿ ಅಣೆಕಟ್ಟೆಗೆ ಟೆಲಿಮೆಟ್ರಿಕ್ ವಾಟರ್ ಮಾನಿಟರಿಂಗ್ ಸಿಸ್ಟಂ ಅಳವಡಿಸಿದ್ದು, ಜಲಾಶಯದ ನೀರಿನ ಸಂಗ್ರಹ ಪ್ರಮಾಣ, ಒಳ ಹರಿವು ಮತ್ತು ಹೊರ ಹರಿವಿನ ಪ್ರಮಾಣ ಸೇರಿದಂತೆ ಕ್ಷಣ ಕ್ಷಣದ ಮಾಹಿತಿಯನ್ನು ಆಯೋಗಕ್ಕೆ ▶ 6ನೇ ಪುಟಕ್ಕೆ





3 ಸಾವಿರ ಕೆಪಿಎಸ್ ಶಾಲೆ ತೆರೆಯಲು ಸಿದ್ಧತೆ

ಶಿವಮೊಗ್ಗ, ನ.8– ರಾಜ್ಯದಲ್ಲಿ 3 ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ತೆರೆಯಲಾಗುವುದು ಎಂದು ಶಾಲಾ ಶಿಕ್ಷಣ ಸಮಿತಿ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು. ಇಲ್ಲಿನ ಕುವೆಂಪು ರಂಗಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಬದಲಾದ ಪರೀಕ್ಷಾ ಪದ್ಧತಿ ಕುರಿತ ಶೈಕ್ಷಣಿಕ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದರು. ಇದೇ ಸಾಲಿನಲ್ಲಿ ಸುಮಾರು 300 ಕೆಪಿಎಸ್ ಶಾಲೆಗಳನ್ನು ತೆರೆಯಲಾಗುವುದು. ಈ ಶಾಲೆಗಳು ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಇರುತ್ತದೆ. ವಿದ್ಯಾರ್ಥಿಗಳು ಪ್ರಥಮ ಹಾಗೂ ದ್ವಿತೀಯ ಭಾಷೆಯಾಗಿ ಕನ್ನಡ ತೆಗೆದುಕೊಳ್ಳುವುದು ಕಡ್ಡಾಯ. ಕನ್ನಡ ಮಾಧ್ಯಮ ವಿಷಯದಲ್ಲಿ ರಾಜೀ ಮಾಡಿಕೊಳ್ಳುವುದಿಲ್ಲ ಎಂದರು. ಮಕ್ಕಳಿಗೆ ತೊಂದರೆಯಾಗಬಾರದು ಎಂಬ ಹಿನ್ನೆಲೆಯಲ್ಲಿ 43ಸಾವಿರ ಅತಿಥಿ ಶಿಕ್ಷಕರು ಹಾಗೂ 12ಸಾವಿರ ಖಾಯಂ ಶಿಕ್ಷಕರ ನೇಮಕವಾಗಿದೆ. ಮುಂದಿನ ದಿನಗಳಲ್ಲಿ 20 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಉದ್ದೇಶವಿದೆ.



ನಕ್ಕರೆ ಅದೇ ಸ್ವರ್ಗ

ಪತ್ನಿ : (ತುಂಬಾ ಕುಡಿದು ಬಂದ ಗಂಡನಿಗೆ) "ಏನಾಯ್ತು ರೀ, ಯಾವತ್ತು ಕುಡೀತಿರ್ಲಿಲ್ಲ?.

ಪತಿ : "ಇನ್ನೇನಿಲ್ಲಾ ಕಣೆ ಕೆಟ್ಟ ಸಹವಾಸ ಅಷ್ಟೇ"

ಪತ್ನಿ : "ಅಂದ್ರೆ?"

ಪತಿ : "ಒಂದು ಬಾಟ್ಲು ವಿಸ್ಕಿ ಇತ್ತು. ನಾವು ನಾಲ್ಕು ಜನ ಇದ್ವಿ. ಉಳಿದ ಮೂವರು ನಮಗೆ ಅಭ್ಯಾಸ ಇಲ್ಲ ಅಂದ್ರು. ಹಾಗಾಗಿ ನಾನೇ ಎಲ್ಲಾ ಕುಡಿಯಬೇಕಾಯ್ತು!"

ಮೈಸೂರು ಮಿತ್ರ

ಗುರುವಾರ, 9 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಮನುಷ್ಯನಿಗೆ ಒಮ್ಮೆ ಸಂಶಯ ಪಿಶಾಚಿ ಹಿಡಿಯಿತೆಂದರೆ ತೀರಿತು, ಸರಿ ತಪ್ಪುಗಳ ವಿಚಾರವಾಗಿ ಯೋಚಿಸುವ ತಾಳ್ಮೆ ಇರುವುದಿಲ್ಲ. –ನುಡಿಮುತ್ತು.

ವೇದ ಸುಳ್ಳಾದರೂ { ಹಣೆಯಲ್ಲಿ ಬರೆದದ್ದು
ಗಾದೆ ಸುಳ್ಳಾಗದು { ಅಣುವಿನಷ್ಟು ತಪ್ಪದು

ನಿಮ್ಮ ಪತ್ರಗಳು

ಉದ್ಘಾಟನಾ ಭಾಗ್ಯ ದೊರಕದ ಕುಂಬಾರಕೊಪ್ಪಲು ಬಸ್ ನಿಲ್ದಾಣ



ಮಾನ್ಯರೆ,

ಮೈಸೂರು ನಗರದ ಕುಂಬಾರಕೊಪ್ಪಲಿನ ಹಳೆಯ ಬಸ್ ನಿಲ್ದಾಣದ ಸ್ಥಳದಲ್ಲಿ ಜನರ ತೆರಿಗೆ ಹಣದಿಂದ ಕಳೆದ ಒಂದು ವರ್ಷದ ಹಿಂದೆ ಹೊಸದಾಗಿ ಹೈಟೆಕ್ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಾಣಗೊಂಡಿದೆ. ಆದರೆ ಅದಕ್ಕೆ ಉದ್ಘಾಟನಾ ಭಾಗ್ಯ ದೊರೆತಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ನಿಲ್ದಾಣವನ್ನು ಉದ್ಘಾಟಿಸಿ ಸಾರ್ವಜನಿಕರ ಅನುಕೂಲಕ್ಕೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಪಡುವಾರಹಳ್ಳಿ ಎಂ ರಾಮಕೃಷ್ಣ , ವಕೀಲರು, ಮೈಸೂರು.

ಭಾಗ್ಯ ಮಾದೇಶ್ ಕರ್ತವ್ಯ ನಿಷ್ಠೆ ಎಲ್ಲರಿಗೂ ಮಾದರಿ!

ಮಾನ್ಯರೇ,



ಮೈಸೂರು ನಗರದಲ್ಲಿ ಈ ವರ್ಷದ ಅತ್ಯಂತ ಭಾರಿ ದೊಡ್ಡ ವರ್ಷಧಾರೆ ಇತ್ತೀಚೆಗೆ ಸುರಿದು ಜನಜೀವನ ಅಸ್ತವ್ಯಸ್ತಗೊಂಡಿತ್ತು. ಹಲವು ಬಡಾವಣೆಗಳಲ್ಲಿ ಅದರಲ್ಲೂ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಕಂಗಾಲಾಗಿದ್ದರು. ನಗರಪಾಲಿಕೆ ವಾರ್ಡ್ ಸಂಖ್ಯೆ 19ರ ಸದಸ್ಯೆ ಭಾಗ್ಯ ಮಾದೇಶ್ ಕರ್ತವ್ಯ ನಿಷ್ಠೆ ನಿಜಕ್ಕೂ ಮೆಚ್ಚಲೇಬೇಕು. ಸೋಮವಾರ ಸುರಿದ ಭಾರಿ ಮಳೆಯಲ್ಲಿ ಇವರ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಅದೃಷ್ಟವಶಾತ್ ಎಲ್ಲೂ ನೀರು ನುಗ್ಗದೇ ಇರುವುದು ಪವಾಡವೇ ಸರಿ. ಸ್ವಲ್ಪ ದಿನಗಳ ಹಿಂದೆ ನಗರಪಾಲಿಕೆ ಅನುದಾನದಲ್ಲಿ ಬಂದ ಹಣದಲ್ಲಿ ಕನ್ಸರ್‌ವೆನ್ಸಿ ಹಳೆಯ ಪೈಪುಗಳನ್ನು ತೆಗೆದು 8 ಅಡಿ ಉದ್ದದ 1 ಅಡಿ ಅಗಲದ ಕಾಂಕ್ರೀಟ್ ಯುಜಿಡಿ ಪೈಪುಗಳನ್ನು ಅಳವಡಿಸಿ ಎಲ್ಲೂ ನೀರು ನುಗ್ಗದೇ ಇರುವ ಹಾಗೆ ಮಾಡಿ ಜನರ ಆತಂಕ, ಕಳವಳ ದೂರ ಮಾಡಿದ್ದಾರೆ. ಇಲ್ಲಿಯವರೆಗೂ ಯಾರಿಂದಲೂ ದೂರು ಬಂದಿಲ್ಲ. ಭಾಗ್ಯ ಮಾದೇಶ್ ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ ಸಮಾಜ ಸೇವೆಯಲ್ಲಿ ಸದಾ ತಮ್ಮನ್ನು ತಾವು ತೊಡಗಿಸಿಕೊಂಡು ಕರ್ತವ್ಯ ನಿರತರಾಗಿರುತ್ತಾರೆ. ಅವರ ಮುಖ್ಯ ಧ್ಯೇಯ 'ಸ್ವಚ್ಛತೆಗೆ ಮೊದಲ ಆದ್ಯತೆ'. ಭಾಗ್ಯ ಮಾದೇಶ್‌ರವರು ತಮ್ಮ ವಾರ್ಡಿನಲ್ಲಿ ಬರುವ ಎಲ್ಲಾ ಪ್ರದೇಶಗಳಿಗೂ ಸ್ವತಃ ತಾವೇ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಎಲ್ಲಿ ಯಾವ ಸಮಸ್ಯೆ ಇದೆ ಎಂದು ಪರೀಕ್ಷಿಸಿ, ಅದಕ್ಕೆ ಸೂಕ್ತ ಪರಿಹಾರವನ್ನು ತಕ್ಷಣ ಒದಗಿಸುತ್ತಾರೆ. ಇವರು ಮುಂದಿನ ಚುನಾವಣೆಯಲ್ಲಿ ಜನರ ಆಶೀರ್ವಾದದಿಂದ ಗೆದ್ದು ಶಾಸಕಿಯಾಗಲಿ ಎಂಬುದೇ ನಮ್ಮೆಲ್ಲರ ಆಶಯ. – ಶ್ವೇತಾ ಎಂ., ವಿನಾಯಕನಗರ, ಮೈಸೂರು

ನಾನು ಭ್ರಷ್ಟನಲ್ಲ, ಇಲ್ಲಿ ಲಂಚ ಸ್ವೀಕರಿಸುವುದಿಲ್ಲ!

ಮಾನ್ಯರೆ,



ಹಾಸನದ ಬಿಇಓ ಕಚೇರಿಯ ಅಧೀಕ್ಷಕರು ತಮ್ಮ ಮೇಜಿನ ಮೇಲೆ 'ನಾನು ಭ್ರಷ್ಟನಲ್ಲ, ಇಲ್ಲಿ ಲಂಚ ಸ್ವೀಕರಿಸುವುದಿಲ್ಲ' ಎಂದು ಬರೆದಿರುವ ಫಲಕ ಹಾಕಿಕೊಂಡು ಕರ್ತವ್ಯ ನಿರ್ವಹಿಸುತ್ತಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ, ಪ್ರಸ್ತುತ ಕಾಲಕ್ಕೆ ಇದೊಂದು ಆಘಾತಕಾರಿ ಸುದ್ದಿ!. ಆದಾಗ್ಯೂ ಅವರ ಎದೆಗಾರಿಕೆಯನ್ನು ಮೆಚ್ಚಲೇಬೇಕು. ಲಂಚ ಎಂಬುದು ಮನೆ–ಮನಗಳಲ್ಲಿ ತುಂಬಿ ತುಳುಕಾಡುತ್ತಿದೆ, ಲಂಚವಿಲ್ಲದೆ ಯಾವುದೇ ಕೆಲಸ ಆಗುವುದಿಲ್ಲ ಎಂಬುದು ಜಗಜ್ಜಾಹೀರು ವಿಷಯ. ಇದೇ ರೀತಿಯ ಫಲಕಗಳನ್ನು ಮೊದಲು ಶಕ್ತಿಕೇಂದ್ರಗಳಾದ ವಿಧಾನಸೌಧ ಮತ್ತು ವಿಕಾಸಸೌಧಗಳ ಅಣೆಯ ಮೇಲೆ ಇರುವ 'ಸರ್ಕಾರಿ ಕೆಲಸ ದೇವರ ಕೆಲಸ' ಎಂಬ ಉಕ್ತಿಯ ಬದಲಾಗಿ 'ಸರ್ಕಾರಿ ಕೆಲಸ, ಇಲ್ಲಿ ಲಂಚ ಸ್ವೀಕರಿಸುವುದಿಲ್ಲ' ಎಂದು ಬರೆಸಬೇಕಿದೆ. ಜೊತೆಗೆ ಸಚಿವಾಲಯದ ಎಲ್ಲಾ ಅಧಿಕಾರಿಗಳ ಮೇಜಿನ ಮೇಲೆ ಬರೆಸಿಡಬೇಕು ಹಾಗೂ ಲಂಚದ ಹಣ ಸ್ವೀಕರಿಸಿದಾಗ ಸೈರನ್ ಕೂಗುವ ಹಾಗೆ ಸೆನ್ಸಾರ್ ಅಳವಡಿಸಿದರೆ ರಾಜ್ಯದಲ್ಲಿ ಶೇಕಡಾ 90 ರಷ್ಟು ಭ್ರಷ್ಟತೆ ನಿಲ್ಲುವುದರಲ್ಲಿ ಸಂಶಯವಿಲ್ಲ.

ಸರ್ಕಾರ ಹಾಗೂ ಸರ್ಕಾರಿ ಅಧಿಕಾರಿಗಳಷ್ಟೇ ಸಮಾಜದಲ್ಲಿ ಭ್ರಷ್ಟರಲ್ಲ, ಪ್ರಜಾಪ್ರಭುತ್ವದ ಪ್ರಭುಗಳಾದ ನಾವುಗಳೂ ಭ್ರಷ್ಟರಾಗಿದ್ದೇವೆ, ಹಣಕ್ಕಾಗಿ ಮತವನ್ನು ಮಾರಿಕೊಳ್ಳುವುದನ್ನು ನಿಲ್ಲಿಸಬೇಕು, ಹಾಗಾಗಿ ಮೊದಲು ನಮ್ಮ ನಮ್ಮ ಮನೆಗಳ ಮುಂದೆ 'ಹಣಕ್ಕಾಗಿ ನನ್ನ ಅಮೂಲ್ಯವಾದ ಮತವನ್ನು ಮಾರಿಕೊಳ್ಳುವುದಿಲ್ಲ' ಎಂಬ ಫಲಕವನ್ನು ಹಾಕಿಕೊಳ್ಳಬೇಕಾಗಿದೆ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ನಾರಾಯಣ ಹೃದಯಾಲಯ ಸ್ಪಷ್ಟವಾಗಿ ಗೋಚರಿಸಲಿ

ಮಾನ್ಯರೆ,

ಆಸ್ಪತ್ರೆ, ಅಗ್ನಿಶಾಮಕ ಕೇಂದ್ರ, ಪೊಲೀಸ್ ಠಾಣೆ ಹೀಗೆ ಅತೀ ಅವಶ್ಯ ತುರ್ತು ಸೇವಾ ಕೇಂದ್ರಗಳು ಜನರಿಗೆ ಸ್ಪಷ್ಟವಾಗಿ ಗೋಚರಿಸುವಂತಿರಬೇಕು.



ವಿಷಯ ಇಷ್ಟೆ, ಮೈಸೂರು ರಿಂಗ್ ರಸ್ತೆಯಲ್ಲಿರುವ ಹೆಸರಾಂತ ನಾರಾಯಣ ಹೃದಯಾಲಯ ಸುಲಭವಾಗಿ ಗೋಚರಿಸುವುದೇ ಇಲ್ಲ. ಕಾರಣ, ಆಸ್ಪತ್ರೆ ಸೂಚಕ ಫಲಕವಾಗಲೀ, ಪ್ರತಿಫಲಕಗಳಾಗಲೀ ಇಲ್ಲಿ ಇಲ್ಲ. ಹಾಗಾಗಿ ರಿಂಗ್ ರಸ್ತೆಯಲ್ಲಿ ಬರುವಂತಹ ಜನ ಎಷ್ಟೋ ಬಾರಿ ನಾರಾಯಣ ಹೃದಯಾಲಯವನ್ನು ಗುರುತಿಸಲಾಗದೆ ಮುಂದೆ ಸಾಗಿ ಎಲ್ಲೋ ಒಂದು ಕಡೆ ಮತ್ತೆ ವಾಹನವನ್ನು ತಿರುಗಿಸಿಕೊಂಡು ಪ್ರಯಾಸಪಟ್ಟು ಬರಬೇಕಾದ ಪರಿಸ್ಥಿತಿ ಇದೆ. ಹಾಗಾಗಿ ಸದರಿ ಆಸ್ಪತ್ರೆಯವರು, ಮಣಿಪಾಲ್ ಆಸ್ಪತ್ರೆಯವರು ಹೇಗೆ ತಮ್ಮ ಆಸ್ಪತ್ರೆ ಹೆಸರುಳ್ಳ ಬೃಹತ್ ಪ್ರತಿಫಲಕ ಅಳವಡಿಸಿದ್ದಾರೋ ಹಾಗೆಯೇ ಇಲ್ಲಿಯೂ ಅಳವಡಿಸುವುದರಿಂದ ರೋಗಿಗಳಿಗೆ ಸುಲಭವಾಗಿ ಗುರುತಿಸಲು ಅನುಕೂಲಕಾರಿಯಾಗುತ್ತದೆ. –ರಾಮಚಂದ್ರ, ಟಿ.ಕೆ.ಲೇಔಟ್ ಮೈಸೂರು.

ಪಾಲಿಗೆ ಬಂದದ್ದು ಪಂಚಾಮೃತವೆಂದು ಪರಿಭಾವಿಸಿದರೆ ಅದೇ ಸುಖ ಜೀವನ!

'ಭಗವಂತ ನಮಗೇನು ಕೊಟ್ಟಿದ್ದಾನೋ ಅದರಲ್ಲಿ ತೃಪ್ತಿ ಇರಬೇಕು. ಇಬ್ಬರೂ ವ್ಯಕ್ತಿಗಳು; ಒಬ್ಬಾತ ಒಂದು ದೊಡ್ಡ ಕೊಡ, ಮತ್ತೊಬ್ಬಾತ ಒಂದು ತಂಬಿಗೆ ಹಿಡಿದುಕೊಂಡು ಇಬ್ಬರು ನದಿ ನೀರು ತರುತ್ತಾರೆ. ನಂತರ ತಂಬಿಗೆ ನೀರು ತಂದಾತ ಯೋಚಿಸುತ್ತಾನೆ; ನಾವು ಇಬ್ಬರೂ ಬಹಳ ನೀರಿರುವ ನದಿಗೆ ಹೋಗಿದ್ದೆವು. ಆದರೆ, ನಾನು ಬಹಳ ಕಡಿಮೆ ನೀರು ತಂದೆ. ಆತ ನನಗಿಂತ ಹೆಚ್ಚು ನೀರು ತಂದ. ಹೀಗೇಕೆ? ಆಗ ಅಲ್ಲಿದ್ದ ಒಬ್ಬ ಬುದ್ಧಿವಂತ ಹೇಳುತ್ತಾನೆ; ನದಿಯಲ್ಲಿ ಹೆಚ್ಚು ನೀರು ಇದೆಯಲ್ಲ ನನಗೆ ಹೀಗೇಕೆ ಕಡಿಮೆ ನೀರು ಬಂತು ಎಂದು ಆಲೋಚಿಸಬೇಡ, ನದಿಯಲ್ಲಿ ನೀರು ಎಷ್ಟಿದೆ ಎಂಬುದು ಮಹತ್ವ ಅಲ್ಲ, ನಿಮ್ಮ ಪಾತ್ರೆ ಎಷ್ಟಿದೆಯೋ ಅಷ್ಟೇ ನೀರು ನಿಮಗೆ ಸಂಗ್ರಹವಾಗುತ್ತದೆ. ಆತನ ಹತ್ತಿರ ದೊಡ್ಡ ಕೊಡವಿತ್ತು, ಆತನಿಗೆ 10 ತಂಬಿಗೆ ನೀರು ಬಂತು, ನಿನ್ನ ಹತ್ತಿರ ಒಂದು ತಂಬಿಗೆ ಮಾತ್ರ ಇತ್ತು, ನಿನಗೆ ಒಂದೇ ತಂಬಿಗೆ ನೀರು ಬಂತು. ನದಿಯಲ್ಲಿ ಎಷ್ಟೇ ನೀರು ಇರಲಿ ಅದು ನಿನಗೆ ಸಂಬಂಧವಿಲ್ಲ.



ಇಂದಿನ ದಿನಗಳಲ್ಲಿ ಮನುಷ್ಯನಿಗೆ ಎಲ್ಲಾ ಸುಖ–ಸಂಪತ್ತು ಇದ್ದರೂ ಬಹಳ ಜನ ಅಸಂತೃಪ್ತರು. ಯಾವಾಗಲೂ ಏನೋ ಕಳೆದುಕೊಂಡವರಂತೆ, ಬೇರೆಯವರನ್ನು ನೋಡಿ ಅವರು ನಮಗಿಂತ ಸುಖವಾಗಿದ್ದಾರೆ ಎಂದು ಆಲೋಚಿಸುವವರೇ ಹೆಚ್ಚು.

ತನಗೆ ಭಗವಂತ ಏನು ಕೊಟ್ಟಿದ್ದಾನೋ, ನಮ್ಮ ಭಾಗ್ಯದಲ್ಲಿ ಏನಿದೆಯೋ ಅದರಿಂದಲೇ ನಾವು ತೃಪ್ತರಾಗಿರಬೇಕು. ಈ ಮನಸ್ಥಿತಿಯನ್ನು ನಾವು ಸ್ವಯಂ ಅಭ್ಯಾಸ ಮಾಡಿಕೊಳ್ಳಬೇಕು. ಅದಕ್ಕೊಂದು ನಿದರ್ಶನ.... ನೀತಿ...

ಒಂದು ದಿನ ಅಡವಿಯಲ್ಲಿ ಮರವೊಂದರ ಕೆಳಗೆ ಒಬ್ಬ ಸಾಧು ಧ್ಯಾನಕ್ಕೆ ಕೂತಿರುತ್ತಾನೆ. ಆ ಮರದ ಮೇಲೆ ಒಂದು ಕಾಗೆಯೂ ಕೂತಿರುತ್ತದೆ. ಆ ದುಃಖಿತ ಕಾಗೆಗೆ ಕಣ್ಣೀರು ಬಂದು ಕೆಳಗೆ ಕುಳಿತ ಋಷಿಯ ಮುಖದ ಮೇಲೆ ಬೀಳುತ್ತದೆ. ಆಗ ಆ ಋಷಿಯು ಕಾಗೆಯನ್ನು ಏಕೆ ದುಃಖಿಸುತ್ತಿರುವೆ ಎಂದು ಕೇಳುತ್ತಾರೆ. ಆಗ ಕಾಗೆ ಹೇಳುತ್ತದೆ; 'ಋಷಿಗಳೇ ನನಗೆ ಜೀವನ ಬೇಸರ ತರಿಸಿದೆ. ನನ್ನ ಮೈಬಣ್ಣ ಕರಿ, ನನ್ನನ್ನು ಯಾರೂ ಪ್ರೀತಿಸುವುದಿಲ್ಲ. ನಾನು ಎಲ್ಲಿ ಕುಳಿತರೂ ಹುಶ್... ಹುಶ್... ಎಂದು ಕಲ್ಲಿನಿಂದ ಹೊಡೆದು ನನ್ನನ್ನು ಓಡಿಸಿಬಿಡುತ್ತಾರೆ. ನನ್ನನ್ನು ನೋಡಿ ಅಸಹ್ಯ ಪಟ್ಟುಕೊಳ್ಳುತ್ತಾರೆ. ಇದೆಲ್ಲದಕ್ಕೂ ಕಾರಣ ನನ್ನ ಈ ಕಪ್ಪು ಮೈಬಣ್ಣ. ಹಾಗಾಗಿ ನನಗೆ ಸಾವೇ ಶರಣು ಎನ್ನಿಸುತ್ತಿದೆ ಎಂದು ತನ್ನ ದುಃಖ ಹೇಳಿಕೊಳ್ಳುತ್ತದೆ.

ಆಗ ಋಷಿಗಳು ಕಾಗೆಗೆ ಕೇಳುತ್ತಾರೆ; ನೀನು ಹೇಗಿದ್ದರೆ ಸಂತೋಷದಿಂದ ಇರುತ್ತಿ ಹೇಳು, ಹಾಗೆ ನಾನು ಮಾಡುತ್ತೇನೆ. ಆಗ ಕಾಗೆ ಹೇಳುತ್ತದೆ ನನಗೆ ಹಂಸ ಪಕ್ಷಿಯ ತರಹ ಬೆಳ್ಳಗೆ ಹೊಳೆಯುವ ಬಣ್ಣ ಬಹಳ ಉತ್ತಮ ಎನ್ನಿಸುತ್ತಿದೆ. ನನ್ನನ್ನು ಹಂಸ ಪಕ್ಷಿಯ ತರಹ ಬೆಳ್ಳಗೆ ಥಳಥಳ ಹೊಳೆಯುವಂತೆ ಮಾಡಿ ಎನ್ನುತ್ತದೆ ಕಾಗೆ.

ಆಗ ಋಷಿಗಳು ಅದೇನು ಮಹಾ, ನಾನು ಈಗಲೇ ಮಾಡಬಲ್ಲೆ. ಆದರೆ, ಒಮ್ಮೆ ನೀನು ಹಂಸ ಪಕ್ಷಿಯನ್ನು ಕೇಳಿ ಬಾ ಅದು ಸಂತೋಷದಿಂದ ಇದೆಯಾ ಎಂದು ಎನ್ನುತ್ತಾರೆ. ಆಗ ಕಾಗೆ ಹಾರುತ್ತಾ ಪಕ್ಕದ ಗ್ರಾಮದ ದೊಡ್ಡ ಸರೋವರದಲ್ಲಿ ಈಜಾಡುತ್ತಿರುವ ಹಂಸಪಕ್ಷಿ ಹತ್ತಿರ ಹೋಗಿ, ಹಂಸ ಪಕ್ಷಿ ನಿನ್ನ ಬಣ್ಣ ಶಂಖದ ತರಹ ಬೆಳ್ಳಗೆ ಹೊಳೆಯುತ್ತಾ ಅಂದವಾಗಿದೆ. ನೀನು ಸದಾ ಸಂತೋಷದಿಂದ ಇದಿಯಾ ಎಂದು ಕಾಗೆ ಕೇಳುತ್ತದೆ.

ಆಗ ಆ ಹಂಸ ಪಕ್ಷಿ ಹೇಳುತ್ತದೆ; ನನ್ನ ಬಣ್ಣ ಬೆಳ್ಳಗಿರಬಹುದು. ಆದರೆ ಒಂದೇ ತರದ ಬಿಳಿ ಬಣ್ಣ ನನಗೆ ಸಾಕಾಗಿ ಹೋಗಿದೆ. ಬೇಟೆಗಾರ ಯಾವ ಸಮಯದಲ್ಲಿ ಬಂದು ನಮ್ಮನ್ನು ಬಾಣದಿಂದ ಹೊಡೆದು ಕೊಲ್ಲುತ್ತಾರೋ ತಿಳಿಯದು. ನಾವು ಎತ್ತರಕ್ಕೆ ಹಾರುವ ಹಾಗಿಲ್ಲ. ಈ ಬಿಳಿ ಬಣ್ಣವೇ ನಮಗೆ ವೈರಿಯಾಗಿದೆ. ನನ್ನ ಜೀವನ ಸಾಕಾಗಿದೆ ಎಂದು ಹೇಳುತ್ತ, ಅಲ್ಲಿ ನೋಡು, ಗಿಡದ ಮೇಲೆ ರಾಮಗಿಳಿ. ಬಣ್ಣ–ಬಣ್ಣದಿಂದ ಎಷ್ಟು ಸುಂದರವಾಗಿದೆ. ಗಿಡದಿಂದ ಗಿಡಕ್ಕೆ ಹಾರುತ್ತ ಹಣ್ಣುಗಳನ್ನು ತಿನ್ನುತ್ತಾ ಆನಂದವಾಗಿದೆ. ನಾನು 24 ಗಂಟೆ ನೀರಲ್ಲಿ ಇರಬೇಕು. ನನ್ನ ಜೀವನಕ್ಕಿಂತ ಆ ಬಣ್ಣ–ಬಣ್ಣದ ಗಿಳಿಯ ಜೀವನ ಬಹಳ ಉತ್ತಮ ಎಂದು ಹಂಸ ಪಕ್ಷಿ ಹೇಳುತ್ತದೆ.

ಆಗ ಕಾಗೆ ಆ ಬಣ್ಣ–ಬಣ್ಣದ ರಾಮಗಿಳಿ ಬಳಿ ಹೋಗಿ ಗಿಳಿರಾಮ, ನೀನು ಬಣ್ಣ–ಬಣ್ಣವಾಗಿದ್ದಿ. ಗಿಡದಿಂದ ಗಿಡಕ್ಕೆ ಹಾರುತ್ತ ಹಣ್ಣುಗಳನ್ನು ತಿನ್ನುತ್ತಾ ಬಹಳ ಆನಂದವಾಗಿ ಇದ್ದಿಯಲ್ಲ ಎಂದು ಕೇಳುತ್ತದೆ. ಆಗ ಗಿಳಿ ಹೇಳುತ್ತದೆ; ಈ ನನ್ನ ಬಣ್ಣ–ಬಣ್ಣವೇ ನನಗೆ ವೈರಿಯಾಗಿದೆ. ನಾನು ಸುಂದರವಾಗಿದ್ದೇನೆ ಎಂದು ಬೇಟೆಗಾರ ಬಂದು ನನ್ನನ್ನು ಹಿಡಿದುಕೊಂಡು ಹೋಗಿ ಪಂಜರದಲ್ಲಿಟ್ಟು ಮಾರಾಟ ಮಾಡುತ್ತಾನೆ. ನನ್ನನ್ನು ಕೊಂಡುಕೊಂಡ ಜನ ನನ್ನಿಂದ ತಮ್ಮ ಭಾಷೆಯ ಮಾತುಗಳನ್ನು ಆಡಿಸುತ್ತಾ ನನಗೆ ಚಿತ್ರಹಿಂಸೆ ಕೊಡುತ್ತಾರೆ. ನನಗೆ ಜೀವನವೇ ಸಾಕಾಗಿದೆ. ಯಾವಾಗ ಯಾವ ಬೇಟೆಗಾರ ಬಂದು ಹಿಡಿಯುತ್ತಾನೋ ಎಂಬ ಭಯ ಕಾಡುತ್ತಿದೆ ಎಂದು ಆ ಬಣ್ಣ–ಬಣ್ಣದ ಗಿಳಿ ಹೇಳುತ್ತದೆ. ಆ ನವಿಲು ನೋಡು, ಅದರ ಗರಿಗಳು, ಅದರ ವೈಯ್ಯಾರದ ನಡತೆ, ಅದರ ನೃತ್ಯ–ಅದು ಬಹಳ ಆನಂದದಿಂದ ಇದೆ. ಇದ್ದರೆ ಅಂತ ಜೀವನ ಇರಬೇಕು ಎಂದ ಗಿಳಿ, ಹಾಗೆಯೇ ನವಿಲೇ ಉತ್ತಮ ಎಂದು ಹೇಳುತ್ತದೆ.

ಆಗ ಕಾಗೆ ನವಿಲಿನ ಹತ್ತಿರ ಹೋಗುತ್ತದೆ. ನವಿಲೇ ನಿನ್ನ ಜೀವನ ಬಹಳ ಸುಂದರವಾಗಿದೆಯಂತೆ. ನಿನ್ನ ವೈಯ್ಯಾರದ ನಡತೆ, ನಿನ್ನ ಬಣ್ಣ–ಬಣ್ಣದ ಪುಚ್ಛಗಳು, ನಿನ್ನ ನಾಟ್ಯವನ್ನು ಜನರು ನೋಡಿ ಆನಂದ ಪಡುತ್ತಾರೆ. ನಿನ್ನ ಜೀವನ ಬಹಳ ಸುಖವಾಗಿದೆಯಲ್ಲಾ ಎಂದು ನವಿಲನ್ನು ಕೇಳುತ್ತದೆ.

ಆಗ ಆ ನವಿಲು ಹೇಳುತ್ತದೆ. ನನಗೆ ಎಲ್ಲರಿಗಿಂತ ಬಹಳ ದುಃಖವಿದೆ. ನೋಡಿದವರೆಲ್ಲಾ ನನ್ನ ಪುಚ್ಛ ಕಿತ್ತುಕೊಳ್ಳುತ್ತಾರೆ. ತಮ್ಮ ಮನೆಗಳಲ್ಲಿ ಅಲಂಕಾರ ಮಾಡಿಕೊಳ್ಳುತ್ತಾ ಇರುತ್ತಾರೆ. ಕೆಲವರು ನನ್ನನ್ನು ಹಿಡಿದು, ನವಿಲು ಮಾಂಸ ಬಹಳ ರುಚಿ ಎಂದು ದೊಡ್ಡ ದೊಡ್ಡ ಸಮಾರಂಭಗಳಲ್ಲಿ ನನ್ನ ಮಾಂಸದ ಅಡುಗೆ ಮಾಡುತ್ತಾರೆ. ನಾನು ಬಹಳ ಎತ್ತರಕ್ಕೆ ಹಾರಲು ಸಾಧ್ಯವಿಲ್ಲ. ನನಗೆ ಹಾವಿನಿಂದ ಕೂಡ ಭಯ. ನನ್ನ ಜೀವನಕ್ಕಿಂತ ನಿನ್ನ ಜೀವನ ಸಾವಿರಪಟ್ಟು ಮೇಲು. ನಿನ್ನನ್ನು ಹಿಡಿದು ಯಾರೂ ತಿನ್ನುವುದಿಲ್ಲ. ನೀನು ಬಹಳ ಎತ್ತರಕ್ಕೆ ಹಾರಬಲ್ಲೆ. ನಿನ್ನಲ್ಲಿ ಇರುವ ದೊಡ್ಡ ಗುಣ ಎಂದರೆ ನಿನಗೆ ಆಹಾರ ಕಂಡ ತಕ್ಷಣ ನಿನ್ನ ಎಲ್ಲ ಬಳಗಕ್ಕೆ ಕಾವ್ ಕಾವ್ ಎಂದು ಕರೆದು ಎಲ್ಲರ ಜೊತೆ ಸೇರಿ ಹಂಚಿಕೊಂಡು ಆತ್ಮೀಯವಾಗಿ ತಿನ್ನುತ್ತಿ. ನಿನ್ನ ಸಮಯ ಪಾಲನೆ ಉತ್ತಮವಾಗಿದೆ. ನೀನು ಬೆಳಗ್ಗೆ ನಾಲ್ಕು ಗಂಟೆಗೆ ಏಳುತ್ತಿ. ಆರೋಗ್ಯವಾಗಿ ಇದ್ದೀಯಾ. ನಿನಗೆ ಆಯುಷ್ಯ ಜಾಸ್ತಿ. ನಿನ್ನ ಆಹಾರ ಹುಡುಕುವ ವೇಳೆ ಯಾರೂ ನಿನ್ನನ್ನು ಹಿಡಿಯಲು ಬರುವುದಿಲ್ಲ, ಸುಖವಾಗಿದ್ದಿ ಎಂದು ನವಿಲು ಕಾಗೆಗೆ ಹೇಳುತ್ತದೆ.

ಆಗ ಕಾಗೆಗೆ ನಿಜ ಜೀವನದ ಕಥೆ ಅರ್ಥವಾಗಿ, ಇದ್ದದ್ದರಲ್ಲಿ ತೃಪ್ತಿಯಿಂದ ಇರಬೇಕು. ಎಲ್ಲರಿಗಿಂತ ನಾನೇ ಉತ್ತಮ ಎಂದು ಅರ್ಥವಾಗಿ ಮರದ ಕೆಳಗೆ ಕುಳಿತಿದ್ದ ಋಷಿಗಳ ಬಳಿ ಬಂದು ಹೇಳುತ್ತದೆಯಂತೆ; ಗುರುಗಳೇ ನನಗೆ ಇದೇ ಬಣ್ಣ ಇರಲಿ, ಬೇರೆ ಯಾವ ಬಣ್ಣ ಬೇಕಾಗಿಲ್ಲ. ನನಗೆ ಎಲ್ಲರ ಜೀವನದ ಸ್ಥಿತಿ ಅರ್ಥವಾಯಿತು, ನಾನೇ ಬಹಳ ಸುಖವಾಗಿದ್ದೇನೆ.

ಇದು ಒಂದು ಕಾಲ್ಪನಿಕ ಕಥೆ ಇರಬಹುದು. ಇಂತಹ ಕಥೆಗಳ ಹಿಂದಿರುವ ನೀತಿಯನ್ನು ನಾವು ನೋಡಬೇಕು. ಜೀವನದಲ್ಲಿ ಎಲ್ಲರಿಗೂ ಒಂದಲ್ಲ ಒಂದು ಸಮಸ್ಯೆ ಇರುತ್ತದೆ. ನಮ್ಮ ಕಣ್ಣಿಗೆ ದೂರದ ಬೆಟ್ಟ ನುಣ್ಣಗೆ ಎಂಬ ನಾಣ್ನುಡಿಯಂತೆ ಪ್ರತಿಯೊಬ್ಬರೂ ತಮ್ಮದೇ ಆದ ಸಮಸ್ಯೆ, ದುಃಖದಲ್ಲಿ ಇರುತ್ತಾರೆ.

ಹಿಂದಿಯಲ್ಲಿ ಒಂದು ಸಿನಿಮಾ ಹಾಡು ಇದೆ;

ದುನೀಯಾ ಮೇ ಕಿತ್ನಾ ಗಮ್ ಹೇ
ಮೇರಾ ಗಮ್ ಕಿತ್ನಾ ಕಮ್ ಹೇ

ಒಂದು ಸಲ ಅಮೆರಿಕಾದ ಮನೋವಿಜ್ಞಾನಿಗಳು ಒಂದು ಪ್ರಯೋಗ ಮಾಡುತ್ತಾರೆ. ನೂರು ಜನರನ್ನು ಒಂದೆಡೆ ಕೂಡಿಸಿ ತಮ್ಮ ಸಮಸ್ಯೆಗಳನ್ನು ಒಂದು ಕಾಗದದ ಹಾಳೆ ಮೇಲೆ ಬರೆದು, ಒಂದು ಡಬ್ಬಿಯಲ್ಲಿ ಹಾಕಲು ಹೇಳುತ್ತಾರೆ. ಎಲ್ಲರೂ ತಮ್ಮ ತಮ್ಮ ಸಮಸ್ಯೆಗಳನ್ನು ಒಂದು ಹಾಳೆಯಲ್ಲಿ ಬರೆದು ಆ ಡಬ್ಬಿಯಲ್ಲಿ ಮುದುಡಿ ಹಾಕುತ್ತಾರೆ. ನಂತರ ಅದನ್ನೆಲ್ಲಾ ಮಿಶ್ರಣ ಮಾಡುತ್ತಾರೆ. ಕೊನೆಗೆ ಎಲ್ಲರೂ ಒಂದೊಂದು ಚೀಟಿ ತೆಗೆದುಕೊಂಡು ಓದಿ ಮತ್ತೆ ಅದರಲ್ಲಿ ಹಾಕಲು ಹೇಳುತ್ತಾರೆ. ಆ ನೂರು ಜನ ಹಾಗೆಯೇ ಮಾಡುತ್ತಾರೆ. ಆಗ ಪ್ರತಿಯೊಬ್ಬರೂ ಇತರರ ಸಮಸ್ಯೆಗಳ ಆ ಚೀಟಿಗಳನ್ನು ಓದಿದಾಗ ಎಲ್ಲರಿಗಿಂತ ನಾನೇ ಸುಖಿ ಎಂಬ ಭಾವನೆ ಅವರಲ್ಲಿ ಬರುತ್ತದೆಯಂತೆ. ಹಾಗೆಯೇ ಸಮಾಧಾನಪಟ್ಟುಕೊಳ್ಳುತ್ತಾರಂತೆ. ಬೇರೆಯವರ ಸಮಸ್ಯೆ ನಮಗಿಂತ ಭಯಾನಕವಾಗಿದೆ ಎಂಬ ಅಭಿಪ್ರಾಯಕ್ಕೆ ಎಲ್ಲರೂ ಬಂದರಂತೆ.

ಲಿಂಕನ್ 35 ಫೇಲ್ಯೂರ್!: ಅಮೇರಿಕಾದ ಮಾಜಿ ಅಧ್ಯಕ್ಷರಾದ ಅಬ್ರಾಹಿಂ ಲಿಂಕನ್, ತಾವು ವೈಟ್ ಹೌಸ್‌ನಲ್ಲಿ ಕೂರುವ ಕುರ್ಚಿಯ ಹಿಂದುಗಡೆ ತಮ್ಮ 35 ಫೇಲ್ಯೂರ್ (ವೈಫಲ್ಯ)ಗಳು ಎಂದು ಬರೆದು ಬೋರ್ಡ್ ತೂಗು ಹಾಕಿರುತ್ತಾರೆ. ಯಾರಾದರೂ ನೀವು ಬಹಳ ಉನ್ನತ ಸ್ಥಾನದಲ್ಲಿ ಇದ್ದೀರಿ. ನಿಮ್ಮ ಅದೃಷ್ಟ ಬಹಳ ಚೆನ್ನಾಗಿದೆ ಎಂದು ಕೇಳಿದರೆ, ತಾವು ಕುಳಿತ ಕುರ್ಚಿಯ ಹಿಂದೆ ತಾವು ಬರೆಸಿದ ಬೋರ್ಡನ್ನು ಅವರು ತೋರಿಸುತ್ತಿದ್ದರಂತೆ. ಕಟ್ಟಿಗೆ ಮಾರುತ್ತಾ, ಸಂಘರ್ಷ ಜೀವನದಿಂದ ನಾಲ್ಕು ಸಲ ಚುನಾವಣೆಯಲ್ಲಿ ಸೋತು, ನಾಲ್ಕು ಸಲ ವ್ಯಾಪಾರದಲ್ಲಿ ಸಂಪೂರ್ಣ ನಷ್ಟವಾಗಿ ಅನೇಕ ಸಂಕಷ್ಟ – ಸಂಘರ್ಷದ ಹೋರಾಟದಿಂದ ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೆ ಅವರು ಬಂದಿರುತ್ತಾರೆ. ಅವರ ಜೀವನದಲ್ಲಿ 35 ಫೇಲ್ಯೂರ್(ವೈಫಲ್ಯ)ಗಳು ಇರುತ್ತವೆ.

ಕೃಷ್ಣನಿಗೂ ಕಡು ಕಷ್ಟ: ಈ ಜಗತ್ತಿನಲ್ಲಿ ತಾಯಿಯ ಗರ್ಭದಿಂದ ಬಂದು ಇದುವರೆಗೆ ಎಲ್ಲರಿಗಿಂತ ಹೆಚ್ಚು ಕಷ್ಟ ಪಟ್ಟ ವ್ಯಕ್ತಿ ಎಂದರೆ ಶ್ರೀಕೃಷ್ಣ ಪರಮಾತ್ಮನಂತೆ. ಸೆರೆಮನೆಯಲ್ಲಿ ಜನ್ಮ, ಮರುಕ್ಷಣ ಮಲತಾಯಿ ಹತ್ತಿರ ಬೆಳೆಯುವ ಸ್ಥಿತಿ, ಚಿಕ್ಕ ಮಗುವಿದ್ದಾಗ ಪೂತನಿ ವಿಷದ ಹಾಲು ಕುಡಿಸಿ ಹತ್ಯೆ ಯತ್ನ, ಸ್ವಂತ ಸೋದರ ಮಾವ ಕಂಸನಿಂದ ಹತ್ಯೆ ಪ್ರಯತ್ನ, ಬಾಲ್ಯವೆಲ್ಲ ಅಡವಿಯಲ್ಲಿ ತಿರುಗುತ್ತ ಗೋವುಗಳನ್ನು ಕಾಯಬೇಕಾಯಿತು, ತೃಣಾವರ್ತ, ಶಿಶುಪಾಲ, ಜರಾಸಂಧ ಅನೇಕರ ಜೊತೆ ಯುದ್ಧ, ಅವರ ಕಾಟ ತಾಳದೆ ಮಥುರಾದಿಂದ ರಾಜ್ಯ ದ್ವಾರಕಾಕ್ಕೆ ಬದಲಾವಣೆ, 14 ವರ್ಷ ವನವಾಸದಲ್ಲಿ ಪಾಂಡವರ ಜೊತೆ ತಿರುಗಾಟ, ಶಮಂತಕ ಮಣಿ ಕದ್ದ ಅಪವಾದ, ಮಹಾಭಾರತ ಯುದ್ಧ, ಯುದ್ಧದಲ್ಲಿ ಸೋದರಳಿಯ ಅಭಿಮನ್ಯು ತೀರಿದರು ಕೃಷ್ಣ ಏನೂ ಮಾಡಲಿಕ್ಕಾಗಲಿಲ್ಲ, ವಿನಾಕಾರಣ ಗಾಂಧಾರಿಯಿಂದ ಶಾಪ, ಕೃಷ್ಣನ ಮಗ ಸಾಂಬಾ ದುರ್ಯೋಧನನ ಮಗಳನ್ನು ಲಗ್ನವಾಗಿರುತ್ತಾನೆ. ಆತನಿಂದ ಕೊನೆಯ ದಿನಗಳಲ್ಲಿ ಕೃಷ್ಣನಿಗೆ ತುಂಬಾ ತೊಂದರೆ, ಯಾದವ ಕಲಹದಲ್ಲಿ ಶ್ರೀ ಕೃಷ್ಣ ಪರಮಾತ್ಮನ ಕಾಲಿಗೆ ಬಾಣ ಹೊಡೆದು ಅವತಾರ ಸಮಾಪ್ತಿ. ಇದು ಶ್ರೀಕೃಷ್ಣನ ಸಂಘರ್ಷ ಜೀವನದ ಅತೀ ಸಂಕ್ಷಿಪ್ತ ಕಥೆ.

ಪಾಲಿಗೆ ಬಂದದ್ದು...: 'ಭಗವಂತ ನಮಗೇನು ಕೊಟ್ಟಿದ್ದಾನೋ ಅದರಲ್ಲಿ ತೃಪ್ತಿ ಇರಬೇಕು. ಇಬ್ಬರೂ ವ್ಯಕ್ತಿಗಳು; ಒಬ್ಬಾತ ಒಂದು ದೊಡ್ಡ ಕೊಡ, ಮತ್ತೊಬ್ಬಾತ ಒಂದು ತಂಬಿಗೆ ಹಿಡಿದುಕೊಂಡು ಇಬ್ಬರು ನದಿ ನೀರು ತರುತ್ತಾರೆ. ನಂತರ ತಂಬಿಗೆ ನೀರು ತಂದಾತ ಯೋಚಿಸುತ್ತಾನೆ; ನಾವು ಇಬ್ಬರೂ ಬಹಳ ನೀರಿರುವ ನದಿಗೆ ಹೋಗಿದ್ದೆವು. ಆದರೆ, ನಾನು ಬಹಳ ಕಡಿಮೆ ನೀರು ತಂದೆ ಆತ ನನಗಿಂತ ಹೆಚ್ಚು ನೀರು ತಂದ ಹೀಗೇಕೆ?

ಆಗ ಅಲ್ಲಿದ್ದ ಒಬ್ಬ ಬುದ್ಧಿವಂತ ಹೇಳುತ್ತಾನೆ; ನದಿಯಲ್ಲಿ ಹೆಚ್ಚು ನೀರು ಇದೆಯಲ್ಲ ನನಗೆ ಹೀಗೇಕೆ ಕಡಿಮೆ ನೀರು ಬಂತು ಎಂದು ಆಲೋಚಿಸಬೇಡ, ನದಿಯಲ್ಲಿ ನೀರು ಎಷ್ಟಿದೆ ಎಂಬುದು ಮಹತ್ವ ಅಲ್ಲ, ನಿಮ್ಮ ಪಾತ್ರೆ ಎಷ್ಟಿದೆಯೋ ಅಷ್ಟೇ ನೀರು ನಿಮಗೆ ಸಂಗ್ರಹವಾಗುತ್ತದೆ. ಆತನ ಹತ್ತಿರ ದೊಡ್ಡ ಕೊಡವಿತ್ತು, ಆತನಿಗೆ 10 ತಂಬಿಗೆ ನೀರು ಬಂತು, ನಿನ್ನ ಹತ್ತಿರ ಒಂದು ತಂಬಿಗೆ ಮಾತ್ರ ಇತ್ತು, ನಿನಗೆ ಒಂದೇ ತಂಬಿಗೆ ನೀರು ಬಂತು. ನದಿಯಲ್ಲಿ ಎಷ್ಟೇ ನೀರು ಇರಲಿ ಅದು ನಿನಗೆ ಸಂಬಂಧವಿಲ್ಲ.

ಅದೇ ಪ್ರಕಾರ ನಮ್ಮ ಪ್ರಾರಬ್ಧ. ನಮ್ಮ ದೈವದಲ್ಲಿ ಏನಿದೆಯೋ ಅಷ್ಟೇ ನಮಗೆ ಸಿಗುತ್ತದೆ. ವಿನಾಕಾರಣ ಆಲೋಚಿಸಬಾರದು. ಹೀಗೆಂದು ಸೋಮಾರಿಯಾಗಿ ಕೂಡಬಾರದು. ಕರ್ಮ ಮಾಡುತ್ತಾ, ಪ್ರಯತ್ನಶೀಲರಾಗಿ, ಶ್ರಮಜೀವಿಯಾಗಿರಬೇಕು. ಇದೇ ಉತ್ತಮ ಜೀವನದ ಸಂದೇಶ.

– ದೀಕ್ಷಿತ್ ಕೃಷ್ಣ (ಕೃಪೆ: ವಾಟ್ಸಾಪ್)

ನೆದರ್‌ಲೆಂಡ್ ವಿರುದ್ಧ ಗೆದ್ದ ಇಂಗ್ಲೆಂಡ್



ಪುಣೆ, ನ.8– ಏಕದಿನ ವಿಶ್ವಕಪ್‌ನ 40ನೇ ಪಂದ್ಯದಲ್ಲಿ ನೆದರ್‌ಲೆಂಡ್ ವಿರುದ್ಧ ಇಂಗ್ಲೆಂಡ್ ಭರ್ಜರಿ ಜಯ ಸಾಧಿಸಿದೆ. ಪುಣೆಯ ಎಂಸಿಎ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಬ್ಯಾಟಿಂಗ್ ಆಯ್ದುಕೊಂಡರು. ಅದರಂತೆ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಪರ ಬೆನ್ ಸ್ಟೋಕ್ಸ್ (108) ಭರ್ಜರಿ ಶತಕ ಸಿಡಿಸಿದರು. ಈ ಶತಕದ ನೆರವಿನಿಂದ ಇಂಗ್ಲೆಂಡ್ ತಂಡವು 50 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 339 ರನ್ ಕಲೆಹಾಕಿತು. 340 ರನ್‌ಗಳ ಬೃಹತ್ ಗುರಿ ಪಡೆದ ನೆದರ್‌ಲೆಂಡ್ ತಂಡವು 37.2 ಓವರ್‌ಗಳಲ್ಲಿ 179 ರನ್ ಗಳಿಸಿ ಆಲೌಟ್ ಆಯಿತು. ಈ ಮೂಲಕ ಇಂಗ್ಲೆಂಡ್ ತಂಡವು 160 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಏಕದಿನ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ಹಾಗೂ ನೆದರ್‌ಲೆಂಡ್ ತಂಡಗಳು 7 ಬಾರಿ ಮುಖಾಮುಖಿಯಾಗಿವೆ. ಈ 7 ಪಂದ್ಯಗಳಲ್ಲೂ ಇಂಗ್ಲೆಂಡ್ ತಂಡವೇ ಗೆದ್ದಿರುವುದು ವಿಶೇಷ. ಇನ್ನು ಇಂದಿನ ಪಂದ್ಯದ ಗೆಲುವಿನೊಂದಿಗೆ ಇಂಗ್ಲೆಂಡ್ ತಂಡವು ಅಂಕಪಟ್ಟಿಯಲ್ಲಿ 7ನೇ ಸ್ಥಾನಕ್ಕೇರಿದೆ.

ಇಂಗ್ಲೆಂಡ್ (ಪ್ಲೇಯಿಂಗ್ XI): ಜಾನಿ ಬೈರ್‌ಸ್ಟೋವ್, ಡೇವಿಡ್ ಮಲಾನ್, ಜೋ ರೂಟ್, ಬೆನ್ ಸ್ಟೋಕ್ಸ್, ಹ್ಯಾರಿ ಬ್ರೂಕ್, ಜೋಸ್ ಬಟ್ಲರ್ (ನಾಯಕ), ಮೊಯೀನ್ ಅಲಿ, ಕ್ರಿಸ್ ವೋಕ್ಸ್, ಡೇವಿಡ್ ವಿಲ್ಲಿ, ಗಸ್ ಅಟ್ಕಿನ್ಸನ್, ಆದಿಲ್ ರಶೀದ್.

ನೆದರ್‌ಲೆಂಡ್ (ಪ್ಲೇಯಿಂಗ್ XI): ವೆಸ್ಲಿ ಬ್ಯಾರೆಸಿ, ಮ್ಯಾಕ್ಸ್ ಓಡೌಡ್, ಕಾಲಿನ್ ಅಕರ್ಮನ್, ಸೈಬ್ರಾಂಡ್ ಎಂಗೆಲ್ಬ್ರೆಕ್ಟ್, ಸ್ಕಾಟ್ ಎಡ್ವರ್ಡ್ಸ್ (ನಾಯಕ), ಬಾಸ್ ಡಿ ಲೀಡೆ, ತೇಜ ನಿಡಮನೂರು, ಲೋಗನ್ ವ್ಯಾನ್ ಬೀಕ್, ರೋಲೋಫ್ ವ್ಯಾನ್ ಡೆರ್ ಮೆರ್ವೆ, ಆರ್ಯನ್ ದತ್, ಪಾಲ್ ವ್ಯಾನ್ ಮೀಕೆರೆನ್.

ಇಂಗ್ಲೆಂಡ್ ತಂಡ: ಜೋಸ್ ಬಟ್ಲರ್ (ನಾಯಕ), ಮೊಯೀನ್ ಅಲಿ, ಗಸ್ ಅಟ್ಕಿನ್ಸನ್, ಜಾನಿ ಬೈರ್‌ಸ್ಟೋವ್, ಸ್ಯಾಮ್ ಕರನ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಆದಿಲ್ ರಶೀದ್, ಜೋ ರೂಟ್, ಹ್ಯಾರಿ ಬ್ರೂಕ್, ಬೆನ್ ಸ್ಟೋಕ್ಸ್, ರೀಸ್ ಟೋಪ್ಲಿ, ಡೇವಿಡ್ ವಿಲ್ಲಿ, ಮಾರ್ಕ್ ವುಡ್ ಮತ್ತು ಕ್ರಿಸ್ ವೋಕ್ಸ್.

ನೆದರ್‌ಲೆಂಡ್ ತಂಡ: ಸ್ಕಾಟ್ ಎಡ್ವರ್ಡ್ಸ್ (ನಾಯಕ), ಮ್ಯಾಕ್ಸ್ ಒಡೌಡ್, ಬಾಸ್ ಡಿ ಲೀಡೆ, ವಿಕ್ರಮ್ ಸಿಂಗ್, ತೇಜ ನಿಡಮನೂರು, ಪಾಲ್ ವ್ಯಾನ್ ಮೀಕೆರೆನ್, ಕಾಲಿನ್ ಅಕರ್ಮನ್, ರೋಲೋಫ್ ವ್ಯಾನ್ ಡೆರ್ ಮೆರ್ವೆ, ಲೋಗನ್ ವ್ಯಾನ್ ಬೀಕ್, ಆರ್ಯನ್ ದತ್, ರಿಯಾನ್ ಕ್ಲೈನ್, ವೆಸ್ಲಿ ಬ್ಯಾರೆಸಿ, ಸಕ್ವಿಬ್ ಬ್ಯಾರೆಸಿ ಜುಲ್ಫಿಕರ್, ಶರೀಜ್ ಅಹ್ಮದ್, ಸೈಬ್ರಾಂಡ್ ಎಂಗಲ್‌ಬ್ರೆಕ್ಟ್,

11 ದಿನದ ಬಾಣಂತಿ ಪತ್ನಿಯನ್ನೇ ಹತ್ಯೆಗೈದ ಪೊಲೀಸ್ ಪೇದೆ

ಚಾಮರಾಜನಗರ, ನ.8– ಚಾಮರಾಜನಗರದ ಪೊಲೀಸ್ ಪೇದೆಯೊಬ್ಬರು ಬಾಣಂತಿ ಪತ್ನಿಯನ್ನು ಕೊಲೆ ಮಾಡಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ಕೊಳತೂರು ಗ್ರಾಮದಲ್ಲಿ ನಡೆದಿದೆ.

ಚಾಮರಾಜನಗರದಲ್ಲಿ ಪೊಲೀಸ್ ಪೇದೆಯಾಗಿರುವ ಕಿಶೋರ್ ಮತ್ತು ಪ್ರತಿಭಾಗೆ ಒಂದು ವರ್ಷದ ಹಿಂದಷ್ಟೇ ಮದುವೆಯಾಗಿತ್ತು. ಆರೋಪಿ ಕಿಶೋರ್‌ಗೆ ತನ್ನ ಪತ್ನಿ ಮೇಲೆ ಅನುಮಾನ ಇತ್ತು ಎನ್ನಲಾಗಿದ್ದು, ಆ ಅನುಮಾನವೇ ಕೊಲೆಗೆ ಕಾರಣವೆಂದು ಹೇಳಲಾಗಿದೆ.



ಮದುವೆಯಾದ ಒಂದು ವರ್ಷದಲ್ಲೇ ಇವರಿಬ್ಬರ ನಡುವೆ ಹಲವು ಬಾರಿ ಗಲಾಟೆ ನಡೆದಿತ್ತು. ಕುಟುಂಬಸ್ಥರು ಇಬ್ಬರಿಗೂ ಹಲವು ಸಲ ಬುದ್ಧಿ ಹೇಳಿದ್ದರು. 11 ದಿನಗಳ ಹಿಂದಷ್ಟೇ ಪ್ರತಿಭಾಗೆ ಗಂಡು ಮಗುವಾಗಿತ್ತು. ಹೀಗಾಗಿ ಬಾಣಂತನಕ್ಕೆ ತವರು ಮನೆಗೆ ಬಂದಿದ್ದರು. ಮಗು ನೋಡುವ ನೆಪದಲ್ಲಿ ಮಾವನ ಮನೆಗೆ ಬಂದ ಪೇದೆ ಕಿಶೋರ್ ಮನೆಯಲ್ಲಿ ಪತ್ನಿ ಒಬ್ಬಳೇ ಇದ್ದ ವೇಳೆ ಉಸಿರುಗಟ್ಟಿಸಿ ಕೊಲೆ ಮಾಡಿ ನಂತರ ಫ್ಯಾನಿಗೆ ಸೀರೆ ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಬಿಂಬಿಸಲು ಪ್ರಯತ್ನಿಸಿದ್ದಾನೆ. ಇದೇ ವೇಳೆ ಮೃತ ಪ್ರತಿಭಾ ಪೋಷಕರು ಮನೆಗೆ ಬಂದಿದ್ದರಿಂದ ಬೆಚ್ಚಿಬಿದ್ದ ಕಿಶೋರ್ ಅಲ್ಲಿಂದ ಎಸ್ಕೇಪ್ ಆಗಿದ್ದಾನೆ. ಇನ್ನು ಆರೋಪಿ ಕಿಶೋರ್ ತನ್ನ ಪತ್ನಿಯನ್ನು ಕೊಂದು ಕೋಲಾರಕ್ಕೆ ಹೋಗಿ ತಾನೂ ಕೂಡ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದಾನೆ ಎಂದು ತಿಳಿದು ಬಂದಿದೆ. ಸದ್ಯ ಆರೋಪಿ ಕಿಶೋರ್ ಕೋಲಾರದ ಖಾಸಗಿ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಮೇಲೆ ಅಪರಿಚಿತರಿಂದ ಹಲ್ಲೆ

ಮೈಸೂರು,ನ.8(ಪಿಎಂ)– ವ್ಯಕ್ತಿಯೊಬ್ಬರ ಮೇಲೆ ಅಪರಿಚಿತ ಯುವಕರಿಬ್ಬರು ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ಮೈಸೂರಿನ ರಾಜೀವ್‌ನಗರದ ರಿಂಗ್ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಬುಧವಾರ ಸಂಜೆ ನಡೆದಿದೆ. ಮೈಸೂರಿನ ಕಲ್ಯಾಣಗಿರಿ ನಿವಾಸಿ ಸಾಜಿದ್ ಅಬ್ರಾರ್ ಅಲ್ವಿ (45) ಹಲ್ಲೆಗೆ ಒಳಗಾದವರಾಗಿದ್ದು, ರಾಜೀವ್‌ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ರಿಂಗ್ ರಸ್ತೆಯಲ್ಲಿರುವ ಆರ್‌ಟಿಓ ಪೂರ್ವ ಕಚೇರಿಯ ಸಮೀಪ ಈ ಘಟನೆ ನಡೆದಿದ್ದು, ಬೈಕ್‌ನಲ್ಲಿ ಬಂದ ಯುವಕರಿಬ್ಬರು ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ ಎನ್ನಲಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಾಜಿದ್ ಅಬ್ರಾರ್ ಅಲ್ವಿಯವರ ಬಾಮೈದ ಹಾಗೂ ಚಾಮರಾಜ ಕ್ಷೇತ್ರದ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ತನ್ವೀರ್, ಇಲ್ಲಿನ ಆರ್‌ಟಿಓ ಕಚೇರಿ ಎದುರು ನಮ್ಮ ಭಾವ ಡ್ರೈವಿಂಗ್ ಸ್ಕೂಲ್ ನಡೆಸುತ್ತಿದ್ದಾರೆ. ಇಂದು ಸಂಜೆ ಸುಮಾರು 6.15ರಲ್ಲಿ ಸ್ಕೂಲಿನ ಬಾಗಿನ ಮುಚ್ಚಿ ತೆರಳುತ್ತಿದ್ದ ಸಂದರ್ಭದಲ್ಲಿ ಹಿಂಬದಿಯಿಂದ ನಂಬರ್ ಪ್ಲೇಟ್ ಇಲ್ಲದ ಹೊಸ ಬೈಕ್‌ನಲ್ಲಿ ಬಂದ ಅಪರಿಚಿತ ಯುವಕರಿಬ್ಬರು, ನಮ್ಮ ಭಾವನವರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ ಎಂದು ತಿಳಿಸಿದರು.

ಘಟನೆ ಸಂಬಂಧ ಬೆಳಗ್ಗೆ ಹೇಳಿಕೆ ನೀಡುವುದಾಗಿ ಸಾಜಿದ್ ಅಬ್ರಾರ್ ಅಲ್ವಿಯವರು ತಿಳಿಸಿರುವುದಾಗಿ ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಪೊಲೀಸರು ಪತ್ರಿಕೆಗೆ ತಿಳಿಸಿದರು.

ಸೌಜನ್ಯ ಪ್ರಕರಣ; ಆರೋಪಿ ಸಂತೋಷ್ ರಾವ್ ಖುಲಾಸೆ ವಿರುದ್ಧ ಮೇಲ್ಮನವಿ ಸಲ್ಲಿಸಿದ ಸಿಬಿಐ

ಬೆಂಗಳೂರು: ಧರ್ಮಸ್ಥಳ ಸಮೀಪದ ಪಾಂಗಾಳದಲ್ಲಿ 2012ರಲ್ಲಿ ನಡೆದ ತೀವ್ರ ಸಂಚಲನ ಮೂಡಿಸಿದ್ದ 17 ವರ್ಷದ ವಿದ್ಯಾರ್ಥಿನಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಯನ್ನು ಖುಲಾಸೆಗೊಳಿಸಿರುವುದನ್ನು ಪ್ರಶ್ನಿಸಿ ಸಿಬಿಐ ಬುಧವಾರ ಕರ್ನಾಟಕ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಸಿಬಿಐ ವಿಶೇಷ ನ್ಯಾಯಾಲಯವು ಜುಲೈ 16ರಂದು ಆರೋಪಿ ಸಂತೋಷ್‌ರಾವ್ ಖುಲಾಸೆಗೊಳಿಸಿತ್ತು ಮತ್ತು ಪ್ರಕರಣದಲ್ಲಿ ಅವರನ್ನು ಬಂಧಿಸಿದ್ದಕ್ಕಾಗಿ ತನಿಖಾಧಿಕಾರಿ ಮತ್ತು ಪ್ರಾಸಿಕ್ಯೂಷನ್ ಅನ್ನು ತರಾಟೆಗೆ ತೆಗೆದುಕೊಂಡಿತ್ತು. ತನಿಖೆಗೆ ಅಡ್ಡಿಪಡಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಇತರರ ವಿರುದ್ಧ ಕ್ರಮ ಕೈಗೊಳ್ಳುವಂತೆ ನ್ಯಾಯಾಲಯ ಸೂಚಿಸಿತ್ತು. ಈ ತೀರ್ಪಿನ 4 ತಿಂಗಳ ನಂತರ ಸಿಬಿಐ ಮೇಲ್ಮನವಿ ಸಲ್ಲಿಸಿದೆ. ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಸಿಬಿಐಗೆ ಕೆಳ ನ್ಯಾಯಾಲಯವು 60 ದಿನಗಳ ಕಾಲಾವಕಾಶ ನೀಡಿತ್ತು. ಸದ್ಯ ಸಿಬಿಐ ಸಲ್ಲಿಸಿರುವ ಮೇಲ್ಮನವಿಯನ್ನು ಹೈಕೋರ್ಟ್ ಅಂಗೀಕರಿಸುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ ಎಂದು ತಜ್ಞರು ಹೇಳಿದ್ದಾರೆ. ಪ್ರಕರಣದಲ್ಲಿ ಖುಲಾಸೆಗೊಂಡಿರುವ ಸಂತೋಷ್ ರಾವ್ ಅವರೇ ನಿಜವಾದ ಅಪರಾಧಿ ಎಂದು ಸಿಬಿಐ ಹೇಳಿಕೊಂಡಿದ್ದು, ಅವರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಅಗತ್ಯ ಸಾಕ್ಷ್ಯಾಧಾರಗಳನ್ನು ಸಲ್ಲಿಸುವುದಾಗಿ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪತ್ರಕರ್ತರು ಜನರಿಗೆ ಉಪಕಾರವಾಗುವಂತೆ ಕಾರ್ಯನಿರ್ವಹಿಸಬೇಕು

'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿಯವರ ಸಲಹೆ



ಮೈಸೂರು,ನ.8(ಎಂಟಿವೈ)–ಪತ್ರಕರ್ತರು ಸಮಾಜಮುಖಿಯಾಗಿ ಕೆಲಸ ಮಾಡುವ ಮೂಲಕ ಕಣ್ಣಲ್ಲಿ ನೋಡಿದ್ದು ಹಾಗೂ ಕಿವಿಯಲ್ಲಿ ಕೇಳಿಸಿಕೊಂಡದನ್ನು ಬರೆದು ಜನರಿಗೆ ಉಪಕಾರವಾಗುವಂತೆ ಕಾರ್ಯ ನಿರ್ವಹಿಸಬೇಕು ಎಂದು 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ ಅವರು ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಬುಧವಾರ ಆಯೋಜಿಸಿದ್ದ ದತ್ತಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತದ ಸನ್ಮಾನಕ್ಕೆ ಭಾಜನರಾದ ಪತ್ರಕರ್ತರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪಡೆದ ಡಾ.ಕೆ.ಬಿ.ಗಣಪತಿ ಅವರಿಗೆ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯ ನನಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದ ಸಂದರ್ಭದಲ್ಲಿ ನಾನು ಕೃಷ್ಣವಟ್ಟಂ, ಕೆ.ರಾಮಣ್ಣ ಸೇರಿದಂತೆ ಇನ್ನಿತರ ಹಿರಿಯ ಪತ್ರಕರ್ತರನ್ನು ಸ್ಮರಿಸಿಕೊಂಡೆ. ಮೈಸೂರು ನನಗೆ ಜನ್ಮಭೂಮಿ, ಧರ್ಮಭೂಮಿ, ಕರ್ಮಭೂಮಿಯೂ ಆಗಿದ್ದು, ಇಂದು ನನಗೆ ಗೌರವ, ಸನ್ಮಾನ, ಪುರಸ್ಕಾರ ತಂದುಕೊಡುತ್ತಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಪತ್ರಿಕೋದ್ಯಮ ಒಂದು ರೀತಿ ವ್ಯಾಪಾರ, ವ್ಯವಹಾರ ಚಿಂತನೆ ಒಳಗೊಂಡಿದೆ. ಇಂತಹ ಸಂದರ್ಭದಲ್ಲಿ ಪತ್ರಕರ್ತನಾಗಿ ಕೆಲಸ ಮಾಡುವುದು ಕಷ್ಟದ ಕೆಲಸವಾಗಿದೆ. ಕೆಲಸ ಮಾಡುವ ವೇಳೆ ಒಂದೆಡೆ ಪತ್ರಿಕಾ ಸಂಸ್ಥೆಯ ಮಾಲೀಕರ ಬಗ್ಗೆ ಗಮನಹರಿಸಬೇಕು, ಇನ್ನೊಂದೆಡೆ ಸಮಾಜಮುಖಿಯಾಗಿ ಕೆಲಸ ಮಾಡಬೇಕಾದ ಸಂದಿಗ್ಧತೆ ಸಿಲುಕುವ ಸ್ಥಿತಿ ಇದೆ. ಆದರೂ ಪತ್ರಕರ್ತರಾದವರು ಕಣ್ಣಲ್ಲಿ ಕಂಡಿದ್ದು, ಕಿವಿಯಲ್ಲಿ ಕೇಳಿಸಿಕೊಂಡಿದ್ದನ್ನು ಬರೆಯಬೇಕು. ಕಂಡು, ಕೇಳಿಸಿಕೊಂಡದನ್ನು ಬಿಟ್ಟು, ಬೇರೆ ಬರೆದರೆ ಸಮಾಜದಲ್ಲಿ ಗೊಂದಲ ಸೃಷ್ಟಿಯಾಗುತ್ತದೆ. ಅದರಿಂದ ಬೇರೆ ಸಮಸ್ಯೆ ಉಂಟಾಗಲೂಬಹುದು. ಈ ಹಿನ್ನೆಲೆಯಲ್ಲಿ ಪತ್ರಕರ್ತರು ಸಮಾಜದ ಶಾಂತಿಗೆ ಭಂಗ ತಾರದಂತೆ ಕರ್ತವ್ಯನಿರ್ವಹಿಸಬೇಕು. ಕೆಲವು ಸಂದರ್ಭದಲ್ಲಿ ನೋಡಿದ್ದನ್ನು, ಕೇಳಿಸಿಕೊಂಡಿದ್ದನ್ನು ಬರೆದರೆ ಅಶಾಂತಿ ನಿರ್ಮಾಣವಾಗಬಹುದು. ಇಂತಹ ಸಂದರ್ಭದಲ್ಲಿ ವಿವೇಚನೆಯಿಂದ ಸುದ್ದಿ ಬರೆಯಬೇಕು ಎಂದು ಸಲಹೆ ನೀಡಿದರು.

ಕೆಲವರು ರಾಜಧರ್ಮ ಪಾಲಿಸಬೇಕೆ ಎನ್ನುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಧರ್ಮ, ರಾಜತ್ವಕ್ಕೆ ಮನ್ನಣೆ ಇಲ್ಲ. ಬದಲಾಗಿ ಎಲ್ಲರೂ ಸಂವಿಧಾನ ಧರ್ಮ ಪಾಲಿಸಲೇಬೇಕಾಗಿದೆ. ಅದನ್ನು ಅನುಸರಿಸದಿದ್ದರೆ ಸಮಾಜದಲ್ಲಿ ಅಶಾಂತಿಯುಂಟಾಗುತ್ತದೆ. ಸಂವಿಧಾನ ಧರ್ಮ ಪಾಲಿಸುವುದರ ಜೊತೆಗೆ ಸಮಾಜದ ಹಿತ ಪತ್ರಕರ್ತನಿಗೆ ಮುಖ್ಯವಾದಾಗ ಮಾತ್ರ ಒಳ್ಳೆಯ ಪತ್ರಕರ್ತನಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪತ್ರಕರ್ತರಿಗೆ ಸನ್ಮಾನ ಮಾಡಿದ ಮಾಜಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವನಾಗಿ ಮೂರು ವರ್ಷ ಸೇವೆ ಮಾಡುವ ವೇಳೆ ಮೈಸೂರಿನ ಕೆಲ ಪತ್ರಕರ್ತರು ನನಗೆ ಸಾಕಷ್ಟು ಸಲಹೆ ನೀಡುತ್ತಿದ್ದರು. ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿನ ಪತ್ರಕರ್ತರು ವಿಶಿಷ್ಟರಾಗಿದ್ದಾರೆ. ಹೆಚ್ಚು ಬದ್ಧತೆಯಿಂದ ಕೆಲಸ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಈ ಬಾರಿ ವಿಶೇಷವಾಗಿ ಪತ್ರಿಕಾ ವಿತರಕರೊಬ್ಬರಿಗೆ ರಾಜ್ಯದ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ದೊರೆತಿರುವುದು ಸಂತಸ ತಂದಿದೆ ಎಂದರು.

ಎರಡು ದತ್ತಿ ಪ್ರಶಸ್ತಿಯ ಮೊತ್ತ ಹೆಚ್ಚಿಸಲು ಸಂಘಕ್ಕೆ ಮತ್ತೆ ಒಂದು ಲಕ್ಷ ರೂ. ದೇಣಿಗೆ ನೀಡುತ್ತೇನೆ ಎಂದು ಭರವಸೆ ನೀಡಿದ ಅವರು, ನಾನು ಉಸ್ತುವಾರಿ ಸಚಿವನಾಗಿದ್ದಾಗ ಪತ್ರಕರ್ತರಿಗೆ ಗುಂಪು ಮನೆ ನಿರ್ಮಾಣಕ್ಕೆ ಉದ್ದೇಶಿಸಲಾಗಿತ್ತು ಆದರೆ, ನಮ್ಮವರೇ ಅದನ್ನು ಮುರಿದರು. ಈಗ ಆ ಹುನ್ನಾರದ ಹಿಂದಿನ ಕಾರಣ ತಿಳಿದಿದೆ. ಗುಂಪುಮನೆ ನಿರ್ಮಾಣವಾದರೆ ನನಗೆ ಹೆಸರು ಬರುತ್ತದೆ ಎಂಬ ಕಾರಣದಿಂದ ತಡೆಹಿಡಿದಿದ್ದಾರೆ ಎಂದು ವಿಷಾದಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ವಿಭಿನ್ನವಾದ ಚರ್ಚೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಮೈಸೂರು ಪತ್ರಕರ್ತರ ಸಂಘ ಉತ್ತಮ ಕೆಲಸ ಮಾಡುತ್ತಿದೆ. ಹಿಂದೊಮ್ಮೆ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಅವರು ತಡವಾಗಿ ಬಂದರೆಂದು ಪತ್ರಕರ್ತರ ಭವನದ ಗೇಟ್ ಬೀಗ ಹಾಕಿ ಅವರನ್ನು ಒಳಸೇರಿಸಿಕೊಳ್ಳದ ಕೆಲಸ ಮೈಸೂರು ಪತ್ರಕರ್ತರ ಸಂಘ ಮಾಡಿತ್ತು. ಇಂತಹ ಧೈರ್ಯ ಮೆಚ್ಚುವಂತದ್ದಾಗಿದೆ. ಎಲ್ಲ ಕಡೆಯೂ ಕಲುಷಿತ ವಾತಾವರಣವಿದ್ದರೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಇದರಿಂದ ದೂರಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಇದೇ ವೇಳೆ ಮೈಸೂರು ವಿವಿ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ ಡಾ.ಕೆ.ಬಿ.ಗಣಪತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪತ್ರಿಕಾ ವಿತರಕ ಜವರಪ್ಪ, ನೇತ್ರರಾಜು ದತ್ತಿ ಪ್ರಶಸ್ತಿ ಪಡೆದ ಎಂ.ಎಸ್. ಲಕ್ಷ್ಮೀನಾರಾಯಣ ಯಾದವ್, ನಿರಂಜನ್ ನಿಕ್ಕಂ ದತ್ತಿ ಪ್ರಶಸ್ತಿ ಪಡೆದ ರಾಜಕುಮಾರ್ ಭಾವಸಾರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪಡೆದ ರಮೇಶ್ ನಾಯಕ, ಮೂಗೂರು ನಂಜುಂಡಸ್ವಾಮಿ, ಜಿಲ್ಲಾ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿತರಾದ ದೊಡ್ಡಹುಂಡಿ ರಾಜಣ್ಣ, ಎಸ್.ಉದಯ್‌ಕುಮಾರ್, ನಾಗೇಶ್ ಪಾಣತ್ತಲೆ, ಸುತ್ತೂರು ನಂಜುಂಡನಾಯಕ, ಮಹೇಶ್ ಕೆಬ್ಬೆಪುರ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಪತ್ರಕರ್ತ ರಮೇಶ್ ಉತ್ತಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಡ್ವಾಣಿ ಅವರಿಗೆ 96ನೇ ಜನ್ಮದಿನ: ಶುಭ ಕೋರಿದ ಪ್ರಧಾನಿ ಮೋದಿ



ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಅವರ 96ನೇ ಜನ್ಮದಿನದ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಅವರು ಅಡ್ವಾಣಿ ಅವರ ನಿವಾಸಕ್ಕೆ ತೆರಳಿ ಶುಭಾಶಯ ಕೋರಿದರು.

ಜಿ.ಗಂಗಾಧರಗೆ ಪಿಹೆಚ್.ಡಿ ಪದವಿ



ಮೈಸೂರು, ನ.8– ಡಾ.ಎಸ್.ಅರುಣ್ ದಾಸ್ ಅವರ ಮಾರ್ಗದರ್ಶನದಲ್ಲಿ ಜಿ. ಗಂಗಾಧರ ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನೈಋತ್ಯ ರೈಲ್ವೆ
ದೀಪಾವಳಿ & ಛಠ್ ಪೂಜೆಗಳ ವಿಶೇಷ ರೈಲು ಸೇವೆಗಳು

ದೀಪಾವಳಿ ಮತ್ತು ಛಠ್ ಹಬ್ಬಗಳ ದೃಷ್ಟಿಯಿಂದ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿವಾರಿಸಲು ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲು ಭಾರತೀಯ ರೈಲ್ವೆ ಸೂಚನೆ ನೀಡಿದೆ. ಹೆಚ್ಚಿನ ಮಾಹಿತಿಗಾಗಿ, ಪ್ರಯಾಣಿಕರು https://enquiry.indianrail.gov.in ನ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಲು ಅಥವಾ 139 ಅನ್ನು ಡಯಲ್ ಮಾಡಲು ಸೂಚಿಸಲಾಗಿದೆ.

ಕ್ರಮ. ಸಂ.	ರೈಲು ಸಂಖ್ಯೆ	ಇಂದ – ವರೆಗೆ	ಸೇವೆಗಳ ದಿನಗಳು	ಪ್ರಯಾಣದ ದಿನಾಂಕಗಳು
1.	07335	ಬೆಳಗಾವಿ – ಕಾಚಿಗುಡ	ಪ್ರತಿದಿನ	01.11.2023 ರಿಂದ 30.11.2023
2.	07336	ಕಾಚಿಗುಡ – ಬೆಳಗಾವಿ	ಪ್ರತಿದಿನ	02.11.2023 ರಿಂದ 01.12.2023
3.	07339	ಎಸ್‌ಎಸ್‌ಎಸ್ ಹುಬ್ಬಳ್ಳಿ – ಕೆಎಸ್‌ಆರ್ ಬೆಂಗಳೂರು	ಪ್ರತಿದಿನ	01.11.2023 ರಿಂದ 31.12.2023
4.	07340	ಕೆಎಸ್‌ಆರ್ ಬೆಂಗಳೂರು – ಎಸ್‌ಎಸ್‌ಎಸ್ ಹುಬ್ಬಳ್ಳಿ	ಪ್ರತಿದಿನ	02.11.2023 ರಿಂದ 01.01.2024
5.	06287	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭುವನೇಶ್ವರ ನ್ಯೂ	ಶುಕ್ರವಾರ	10.11.2023
6.	06288	ಭುವನೇಶ್ವರ ನ್ಯೂ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಶನಿವಾರ	11.11.2023
7.	06231	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ವಿಜಯಪುರ	ಶುಕ್ರವಾರ	10.11.2023
8.	06232	ವಿಜಯಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	14.11.2023
9.	06585	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಬೆಳಗಾವಿ	ಶುಕ್ರವಾರ	10.11.2023
10.	06586	ಬೆಳಗಾವಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	14.11.2023
11.	06217	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭಗತ್ ಕಿ ಕೋಠಿ	ಗುರುವಾರ	09.11.2023, 16.11.2023 & 23.11.2023
12.	06218	ಭಗತ್ ಕಿ ಕೋಠಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಭಾನುವಾರ	12.11.2023, 19.11.2023 & 26.11.2023
13.	06219	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭಗತ್ ಕಿ ಕೋಠಿ	ಶನಿವಾರ	11.11.2023, 18.11.2023 & 25.11.2023
14.	06220	ಭಗತ್ ಕಿ ಕೋಠಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	14.11.2023, 21.11.2023 & 28.11.2023
15.	07303	ಮೈಸೂರು – ಮಂಗಳೂರು ಜಂ.	ಶುಕ್ರವಾರ	10.11.2023
16.	07304	ಮಂಗಳೂರು ಜಂ. – ಮೈಸೂರು	ಮಂಗಳವಾರ	14.11.2023
17.	06505	ಎಸ್‌ಎಸ್‌ಎಸ್ ಹುಬ್ಬಳ್ಳಿ – ಬೀದರ್	ಶುಕ್ರವಾರ	10.11.2023
18.	06506	ಬೀದರ್ – ಯಶವಂತಪುರ	ಮಂಗಳವಾರ	14.11.2023
19.	07353	ಕೆಎಸ್‌ಆರ್ ಬೆಂಗಳೂರು – ಎಸ್‌ಎಸ್‌ಎಸ್ ಹುಬ್ಬಳ್ಳಿ	ಶನಿವಾರ & ಬುಧವಾರ	11.11.2023 & 15.11.2023
20.	07354	ಎಸ್‌ಎಸ್‌ಎಸ್ ಹುಬ್ಬಳ್ಳಿ – ಕೆಎಸ್‌ಆರ್ ಬೆಂಗಳೂರು	ಶನಿವಾರ & ಬುಧವಾರ	11.11.2023 & 15.11.2023
21.	05215	ಬರೌನಿ – ಯಶವಂತಪುರ	ಶನಿವಾರ	07.11.2023 ರಿಂದ 09.12.2023
22.	05216	ಯಶವಂತಪುರ – ಬರೌನಿ	ಮಂಗಳವಾರ	10.11.2023 ರಿಂದ 12.12.2023
23.	08543	ವಿಶಾಖಪಟ್ಟಣಂ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಭಾನುವಾರ	05.11.2023 ರಿಂದ 26.11.2023
24.	08544	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ವಿಶಾಖಪಟ್ಟಣಂ	ಸೋಮವಾರ	06.11.2023 ರಿಂದ 27.11.2023
25.	05271	ಮುಜಫರ್‌ಪುರ – ಯಶವಂತಪುರ	ಶುಕ್ರವಾರ	06.11.2023 ರಿಂದ 08.12.2023
26.	05272	ಯಶವಂತಪುರ – ಮುಜಫರ್‌ಪುರ	ಸೋಮವಾರ	09.11.2023 ರಿಂದ 11.12.2023
27.	06083	ನಾಗರಕೋಯಿಲ್ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	07.11.2023 ರಿಂದ 21.11.2023
28.	06084	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ನಾಗರಕೋಯಿಲ್	ಬುಧವಾರ	08.11.2023 ರಿಂದ 22.11.2023
29.	04813	ಭಗತ್ ಕಿ ಕೋಠಿ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಶನಿವಾರ & ಸೋಮವಾರ	11.11.2023 ರಿಂದ 04.12.2023
30.	04814	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಭಗತ್ ಕಿ ಕೋಠಿ	ಸೋಮವಾರ & ಬುಧವಾರ	13.11.2023 ರಿಂದ 06.12.2023
31.	03245	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಬುಧವಾರ	08.11.2023 ರಿಂದ 06.12.2023
32.	03246	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಶನಿವಾರ	10.11.2023 ರಿಂದ 08.12.2023
33.	03251	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಭಾನುವಾರ & ಸೋಮವಾರ	07.11.2023 ರಿಂದ 10.12.2023
34.	03252	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಮಂಗಳವಾರ & ಬುಧವಾರ	07.11.2023 ರಿಂದ 12.12.2023
35.	03259	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	07.11.2023 ರಿಂದ 05.12.2023
36.	03260	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಗುರುವಾರ	09.11.2023 ರಿಂದ 07.12.2023
37.	03247	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಗುರುವಾರ	09.11.2023 ರಿಂದ 07.12.2023
38.	03248	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಶನಿವಾರ	11.11.2023 ರಿಂದ 09.12.2023
39.	03241	ಧಾನಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಶುಕ್ರವಾರ	10.11.2023 ರಿಂದ 08.12.2023
40.	03242	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಧಾನಾಪುರ	ಸೋಮವಾರ	05.11.2023 ರಿಂದ 04.12.2023
41.	07265	ನರಸಾಪುರ – ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು	ಮಂಗಳವಾರ	07.11.2023 ರಿಂದ 24.11.2023
42.	07266	ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ನರಸಾಪುರ	ಗುರುವಾರ	09.11.2023 ರಿಂದ 25.11.2023

PUB/487/AAD/PRB/SWR/2023-24

www.swr.indianrailways.gov.in | South Western Railway - SWR | SWRRLY | SWRRLY | southwesternrailway_swr | southwesternrailway

ಸಾರ್ವಜನಿಕ ಪ್ರಕಟಣೆ

Sd/- H.S. KUMAR, BAL, LL.B. ADVOCATE LAW
LEXICON ASSOCIATES Off.: # 1411, 1st Floor, 6th Cross Thyagaraja Road, K.R. Mohalla, Mysuru - 570 004, Mob: 8660540843

(ಕರ್ನಾಟಕ ಸರ್ಕಾರ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:05/2023–24 ದಿನಾಂಕ:07.11.2023

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪ.ರಾಜ್.ಇಂ.ವಿಭಾಗ, ಹಾಸನ.

Email: apmckrngar@gmail.com Ph: 08223-262342
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ
ಮೈಸೂರು – ಹಾಸನ ರಸ್ತೆ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ
ಸಂ.: ಕೃಉಮಾಸ(ಕೃರಾನ)/ಲೆ.ವಿ/473/2023–24 ದಿನಾಂಕ: 07.11.2023

ಇ-ಟೆಂಡರ್ ಪ್ರಕಟಣೆ

ಕೆ.ಆರ್.ನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಚ್ಚುವರಿ ನಿಧಿಯ ಮೊತ್ತ 125–00 ಲಕ್ಷಗಳನ್ನು ಇ–ಪೋರ್ಟಲ್ ಮುಖಾಂತರ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಸಂಬಂಧ ಅಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಾಗು ಪ್ರಾದೇಶಿಕ ಸಹಕಾರ ಬ್ಯಾಂಕುಗಳಿಂದ (RRBs) ಸ್ಪರ್ಧಾತ್ಮಕ ಇ-ಬಿಡ್ಡಿಂಗ್ ಅನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಬಿಡ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿ: 02.12.2023 ರ 12.30 ಗಂಟೆಯವರೆಗೆ ಹಾಗು ಇ-ಆಕ್ಷನ್ ದಿ: 05.12.2023 ರಂದು ಮಧ್ಯಾಹ್ನ 2.30 ರಿಂದ 4.30 ಗಂಟೆ ನಿಗಧಿಪಡಿಸಲಾಗಿದೆ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಕೆ.ಆರ್.ನಗರ
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಕೆ.ಆರ್.ನಗರ

ಮೈಸೂರು ಮಿತ್ರ | ಗುರುವಾರ 9 ನವೆಂಬರ್ 2023

ವಿಶ್ವೇಶ್ವರಯ್ಯ ನಾಲೆ ದುರಂತ: ಕುಟುಂಬಸ್ಥರಿಗೆ ದೇಹಗಳ ಹಸ್ತಾಂತರ

• ಮುಗಿಲು ಮುಟ್ಟಿದ ಮೃತರ ಕುಟುಂಬಸ್ಥರ ಆಕ್ರಂದನ • ಮೃತರ ಕುಟುಂಬಸ್ಥರಿಗೆ ತಲಾ 2 ಲಕ್ಷ ಪರಿಹಾರ ಘೋಷಣೆ • ಶಾಸಕ ದರ್ಶನ್ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಭೆ • ಸುರಕ್ಷತೆ ದೃಷ್ಟಿಯಿಂದ ತ್ವರಿತ ಕ್ರಮಕ್ಕೆ ಶಾಸಕರ ಸೂಚನೆ • ನಾಲೆಗಳಿಗೆ ತಡೆಗೋಡೆ ನಿರ್ಮಿಸಲು ಪುಟ್ಟರಾಜು ಒತ್ತಾಯ

ಮಂಡ್ಯ/ಪಾಂಡವಪುರ, ನ.8– ಕಳೆದ ಮಂಗಳವಾರ ಸಂಜೆ ಪಾಂಡವಪುರ ತಾಲೂಕಿನ ಬನಘಟ್ಟ ಗೇಟ್ ಬಳಿಯ ವಿಶ್ವೇಶ್ವರಯ್ಯ ನಾಲೆಗೆ ಕಾರು ಪಲ್ಟಿಯಾಗಿ ಸಾವನ್ನಪ್ಪಿದ ತಿಪಟೂರಿನ ಕೈದಾಳು ಗ್ರಾಮದ ಐದು ಮಂದಿಯ ಮೃತದೇಹವನ್ನು ಬುಧವಾರ ಮಧ್ಯಾಹ್ನ ಶವಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಒಪ್ಪಿಸಲಾಯಿತು.

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಕೈದಾಳು ಗ್ರಾಮದ ಬಾಬು (21), ಚಂದ್ರಣ್ಣ (65), ಧನಂಜಯ್ (40), ಕೃಷ್ಣಪ್ಪ (60), ಜಯರಾಮಯ್ಯ (65) ಇವರ ಮೃತದೇಹಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿತ್ತು. ಬುಧವಾರ ಮರಣೋತ್ತರ ಪರೀಕ್ಷೆ ನಂತರ ದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಈ ವೇಳೆ ಮೃತರ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

ಮೃತರ ಸಂಬಂಧಿಕರು ಹಾಗೂ ಸಾರ್ವಜನಿಕರು ಮೃತರ ಕುಟುಂಬಕ್ಕೆ ಜಿಲ್ಲಾಡಳಿತ ಹೆಚ್ಚಿನ ಪರಿಹಾರ ಘೋಷಣೆ ಮಾಡಬೇಕು ಎಂದು ಪಟ್ಟುಹಿಡಿದರು. ಪರಿಹಾರ ಘೋಷಣೆ ಮಾಡುವವರೆಗೂ ಮೃತದೇಹವನ್ನು ಇಲ್ಲಿಂದ ತೆಗೆದುಕೊಂಡು ಹೋಗುವುದಿಲ್ಲ ಎಂದು ಬಿಗಿಪಟ್ಟುಹಿಡಿದರು. ಬಳಿಕ ಉಪವಿಭಾಗಾಧಿಕಾರಿ ನಂದೀಶ್ ಅವರು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಅಂತಿಮವಾಗಿ ಜಿಲ್ಲಾಡಳಿತದಿಂದ ಮೃತರ ಕುಟುಂಬಕ್ಕೆ ತಲಾ 2 ಲಕ್ಷ ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ ನಂತರ ಕುಟುಂಬಸ್ಥರು ಮೃತದೇಹವನ್ನು ಪಡೆದು ತಿಪಟೂರಿನ ಕೈದಾಳು ಗ್ರಾಮಕ್ಕೆ ತೆರಳಿದರು.



> ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವಾಗಿದೆ. ನಾನು ಸಂಸದನಾಗಿದ್ದ ಸಂದರ್ಭದಲ್ಲಿ ರಸ್ತೆಯನ್ನು ಮೇಲ್ದರ್ಜೆಗೇರಿಸಲಾಗಿತ್ತು. ರಸ್ತೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದರೂ ಸೇತುವೆ ಅಗಲೀಕರಣ ಕಾಮಗಾರಿ ನಡೆಸಿಲ್ಲ. ಈ ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಆರು ತಿಂಗಳ ಹಿಂದೆಯೇ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಆದರೆ ಅಧಿಕಾರಿಗಳು ಕ್ರಮವಹಿಸಿಲ್ಲ. ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿಗೆ ಸಮರ್ಪಕ ಪರಿಹಾರ ನೀಡದೆ ವಿಳಂಬ ಮಾಡಿ ಕಾಮಗಾರಿ ತಡವಾಗುವಂತೆ ಮಾಡಿದರು. ರಸ್ತೆಯಲ್ಲಿ ಸೂಚನಾ ಫಲಕವಿಲ್ಲ, ಹಂಪ್, ಬ್ಯಾರಿಕೇಡ್ ಇಲ್ಲ, ತಡೆಗೋಡೆ ಕುಸಿದಿದೆ, ಇದೇ ಸ್ಥಳದಲ್ಲಿ ನಾಲ್ಕೈದು ಅಪಘಾತಗಳು ಸಂಭವಿಸಿವೆ. ಹೀಗಿದ್ದರೂ ಸಹ ಅಧಿಕಾರಿಗಳು ಕ್ರಮಕೈಗೊಂಡಿಲ್ಲ. ತ್ವರಿತವಾಗಿ ತಡೆಗೋಡೆ ನಿರ್ಮಿಸಬೇಕು. ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಲಾಗಿದ್ದು, ಮೃತರ ಪ್ರತಿ ಕುಟುಂಬಕ್ಕೂ 10 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಜಿಲ್ಲಾಡಳಿತಕ್ಕೆ ಒತ್ತಾಯಿಸಲಾಗಿದೆ.
>
> - ಸಿ.ಎಸ್.ಪುಟ್ಟರಾಜು, ಮಾಜಿ ಸಚಿವರು

ಸಿ.ಎಸ್.ಪುಟ್ಟರಾಜು ಸಾಂತ್ವನ: ಇದಕ್ಕೂ ಮುನ್ನ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಗಮಿಸಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದುರ್ಘಟನೆ ನಡೆಯಬಾರದಾಗಿತ್ತು ನಡೆದಿದೆ. ಘಟನೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಮೃತಕುಟುಂಬಸ್ಥರಿಗೆ ತಾತ್ಕಾಲಿಕವಾಗಿ 10 ಲಕ್ಷ ಪರಿಹಾರ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಬಳಿಕ ದುರ್ಘಟನೆ ನಡೆದ ಬನಘಟ್ಟ ವಿಶ್ವೇಶ್ವರಯ್ಯ ನಾಲೆಯ ಸ್ಥಳಕ್ಕೆ ಸಿ.ಎಸ್. ಪುಟ್ಟರಾಜು ತೆರಳಿ ಪರಿಶೀಲಿಸಿ, ನಾಲೆಗೆ ತಡೆಗೋಡೆ ನಿರ್ಮಿಸುವ ಜತೆಗೆ ಸೇತುವೆ ಕಾಮಗಾರಿ ಪೂರ್ಣಗೊಳಿಸಿ ಇಂತಹ ದುರ್ಘಟನೆಗಳು ಮುಂದಿನ ದಿನಗಳಲ್ಲಿ ಸಂಭವಿಸದಂತೆ ಕ್ರಮವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಶಾಸಕರಿಂದ ಸ್ಥಳ ಪರಿಶೀಲನೆ: ಬನಘಟ್ಟ ಬಳಿ ನಡೆದ ಅಪಘಾತ ಸಂಬಂಧ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಬೆಳಗ್ಗೆ ಪಟ್ಟಣದ ಮಿನಿವಿಧಾನಸೌಧ ತಮ್ಮ ಕಚೇರಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಇಇ ಶಿವಕುಮಾರ್, ಎಇ ಉಜ್ಜನಿಕೊಪ್ಪಲ ಹಾಗೂ ಲೋಕೋಪಯೋಗಿ ಇಇ ಆರ್ಡರ್ ಅವರ ಜತೆಗೆ ಸಭೆ ನಡೆಸಿದರು. ಬಳಿಕ ಅಧಿಕಾರಿಗಳೊಂದಿಗೆ ಘಟನಾ ಸ್ಥಳಕ್ಕೆ ತೆರಳಿ ಸ್ಥಳ ಪರಿಶೀಲಿಸಿ ತ್ವರಿತವಾಗಿ ವಿಶ್ವೇಶ್ವರಯ್ಯ ನಾಲೆ ಸೇತುವೆ ಬಳಿ ಮುನ್ನೆಚ್ಚರಿಕಾ ಕ್ರಮಗಳನ್ನು ಜರುಗಿಸಬೇಕು ಎಂದು ಸೂಚಿಸಿದರು.

ರೈತರಿಗೆ ನೀಡಬೇಕಿರುವ ಪರಿಹಾರ ದೊರಕಿಸಿಕೊಟ್ಟು ಸ್ಥಗಿತಗೊಂಡಿರುವ ಸೇತುವೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡಿ, ತಕ್ಷಣವೇ ನಾಲೆಗೆ ತಡೆಗೋಡೆ ನಿರ್ಮಿಸಿ, ರಸ್ತೆಗೆ ಹಂಪ್, ಬ್ಯಾರಿಕೇಟ್, ಸೂಚನಾಫಲಕಗಳನ್ನು ಹಾಕಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

6 ವರ್ಷವಾದರೂ ಮುಗಿಯದ ಸೇತುವೆ ಕಾಮಗಾರಿ



ಸಿ.ಎಸ್. ಪುಟ್ಟರಾಜು ಅವರು ಸಂಸದರಾಗಿದ್ದಾಗ 2017ರಲ್ಲಿ ಪಾಂಡವಪುರದಿಂದ ನಾಗಮಂಗಲದ ಬೆಳ್ಳೂರು ಕ್ರಾಸ್‌ವರೆಗೆ ಸುಮಾರು 50 ಕಿಮೀ ದೂರದ ರಸ್ತೆ ಅಭಿವೃದ್ಧಿ ಕಾಮಗಾರಿ 251 ಕೋಟಿ ರೂ. ವೆಚ್ಚದಲ್ಲಿ ಆರಂಭಗೊಂಡಿತ್ತು. ರಸ್ತೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದರೂ ಸೇತುವೆ ಸೇರಿದಂತೆ ಸುಮಾರು ಅರ್ಧ ಕಿಲೋ ಮೀಟರ್ ರಸ್ತೆ ಹಾಗೂ ಸೇತುವೆ ಅಗಲೀಕರಣ ಕಾಮಗಾರಿ ಸ್ಥಗಿತಗೊಂಡಿದೆ. ಈ ಕಾಮಗಾರಿ ಸ್ಥಗಿತಗೊಳ್ಳಲು ರೈತರಿಂದ ವಶಪಡಿಸಿಕೊಳ್ಳಲಾಗಿರುವ ಭೂಮಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಗಳು ಇನ್ನೂ ಪರಿಹಾರ ನೀಡದೇ ಇರುವುದೇ ಕಾರಣ ಎನ್ನಲಾಗಿದೆ. ಸೇತುವೆಯ ಎರಡೂ ಬದಿಗಳಲ್ಲೂ ರಸ್ತೆ ವಿಶಾಲವಾಗಿದ್ದು, ಸೇತುವೆ ಬಳಿ ರಸ್ತೆ ಕಿರಿದಾಗಿರುವುದರಿಂದ ಈ ಸ್ಥಳದಲ್ಲಿ ಅಪಘಾತಗಳು ಸಂಭವಿಸುತ್ತಿದೆ. ರಸ್ತೆ ವಿಶಾಲವಾಗಿದೆ ಎಂದು ವೇಗವಾಗಿ ವಾಹನ ಚಾಲನೆ ಮಾಡಿಕೊಂಡು ಬರುವ ಚಾಲಕರು ಹಠಾತ್ತನೆ ರಸ್ತೆ ಕಿರಿದಾಗಿರುವುದನ್ನು ನೋಡಿದಾಗ ವಾಹನದ ವೇಗವನ್ನು ಕಡಿಮೆ ಮಾಡಲು ಹಠಾತ್ ಬ್ರೇಕ್ ಹಾಕುತ್ತಾರೆ. ಈ ಸಂದರ್ಭದಲ್ಲಿ ಬಹುತೇಕ ವಾಹನಗಳು ಚಾಲಕನ ನಿಯಂತ್ರಣ ತಪ್ಪಿ ಅಪಘಾತಗಳು ಸಂಭವಿಸುತ್ತಿವೆ. ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವವರೆಗೂ ಈ ಸ್ಥಳದಲ್ಲಿ ಅಪಘಾತಗಳನ್ನು ತಪ್ಪಿಸುವುದು ಅಸಾಧ್ಯ ಎಂದು ಸಾರ್ವಜನಿಕರ ಅಭಿಪ್ರಾಯವಾಗಿದೆ.



> ತ್ವರಿತವಾಗಿ ಬನಘಟ್ಟ ಬಳಿಯ ವಿಶ್ವೇಶ್ವರಯ್ಯ ನಾಲೆಯ ಸೇತುವೆಗೆ ತಡೆಗೋಡೆ ನಿರ್ಮಿಸಿ, ಸೂಚನಾಫಲಕ, ರಸ್ತೆಗೆ ಹಂಪ್ ನಿರ್ಮಿಸುವಂತೆ ರಾಷ್ಟ್ರೀಯ ಹೆದ್ದಾರಿ ವಲಯದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ರೈತರಿಗೆ ಭೂ ಸ್ವಾಧೀನದ ಪರಿಹಾರದ ಹಣವನ್ನು ಮೂರು ದಿನದಲ್ಲಿ ನೀಡಬೇಕು. ಸ್ಥಗಿತಗೊಂಡಿರುವ ಸೇತುವೆ ಕಾಮಗಾರಿ ಪೂರ್ಣಗೊಳಿಸುವಂತೆಯೂ ಸಹ ಅಧಿಕಾರಿಗೆ ಖಡಕ್ ಸೂಚನೆ ನೀಡಲಾಗಿದೆ. ತಾಲೂಕಿನಲ್ಲಿ ಅಪಘಾತ ವಲಯಗಳನ್ನು ಗುರುತಿಸಿ ಕ್ರಮಕೈಗೊಳ್ಳಲು ಸರಕಾರಕ್ಕೆ 19 ಕೋಟಿ ಪ್ರಸ್ತಾವನೆ ಕಳುಹಿಸಲಾಗಿದೆ.
>
> - ದರ್ಶನ್ ಪುಟ್ಟಣ್ಣಯ್ಯ, ಮೇಲುಕೋಟೆ ಶಾಸಕರು

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ, ನ.8– ನಾಗಮಂಗಲ 220/ 66/ 11 ಕೆ.ವಿ ವಿದ್ಯುತ್ ಸ್ವೀಕರಣ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ನಾಳೆ ಕರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಗ್ರಾಮಗಳಾದ ಬಳಪದ ಮಂಟಿಕೊಪ್ಪಲು, ಬೀರೇಶ್ವರ ಪುರ, ಮುದ್ದೇಗೌಡನ ಕೊಪ್ಪಲು, ಹುಲ್ಲೇಕೆರೆ, ಹೊಸಕೊಪ್ಪಲು, ಗದ್ದೆ ಭೂವನಹಳ್ಳಿ, ತಟ್ಟಹಳ್ಳಿ, ದಂಜಕ್ಕನಹಳ್ಳಿ, ಹರಳಕೆರೆ, ಕಲ್ಲಿನಾಥಪುರ ಹಾಗೂ ದಂಡಿಗನಹಳ್ಳಿ ಗ್ರಾಮಗಳಿಗೆ ನಾಳೆ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ವರೆಗೆ ವಿದ್ಯುತ್ ಇರುವುದಿಲ್ಲ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಮರಿಸ್ವಾಮಿ ತಿಳಿಸಿದ್ದಾರೆ.

ಹೃದಯ ಸಂಬಂಧಿ ಕಾಯಿಲೆ ತಡೆಯಲು ಪ್ರತಿ ದಿನ ವಾಕ್ ಮಾಡಿ: ಸಚಿವ ಚಲುವರಾಯಸ್ವಾಮಿ ಸಲಹೆ

ನಾಗಮಂಗಲ, ನ.8– ಪ್ರತಿ ದಿನ ಬೆಳಗಿನ ಜಾವ ವಾಕ್, ವ್ಯಾಯಾಮ ಮಾಡುವುದರಿಂದ ಹೃದಯ ಸಂಬಂಧಿ ಕಾಯಿಲೆ ತಡೆಯಬಹುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಬುಧವಾರ ತಾಲೂಕಿನ ಬಿ.ಜಿ.ಎಸ್ ವಾಕಥಾನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೊದಲು 60 ವರ್ಷ ಮೇಲ್ಪಟ್ಟವರಲ್ಲಿ ಹೃದಯ ಸಂಬಂಧಿ ಕಾಯಿಲೆ ಕಾಣಿಸಿಕೊಳ್ಳುತ್ತಿತ್ತು, ಇಂದಿನ ಜನರ ಜೀವನ ಶೈಲಿ ಬದಲಾಗಿದ್ದು, ಚಿಕ್ಕ ಮಕ್ಕಳಲ್ಲೂ ಹೃದಯ ಸಂಬಂಧಿ ಕಾಯಿಲೆ ಕಾಣುತ್ತಿದೆ. ಇದನ್ನು ತಡೆಯಲು ಚಿಕ್ಕ ವಯಸ್ಸಿನಿಂದಲೇ ನಡಿಗೆಯನ್ನು ರೂಢಿಸಿಕೊಳ್ಳಬೇಕು. ಮಕ್ಕಳು ತಮ್ಮ ಮನೆಯಲ್ಲಿರುವ ಪೋಷಕರಿಗೂ ಬೆಳಗಿನ ಸಮಯ ನಡಿಗೆಯ ಅಭ್ಯಾಸ ಮಾಡಿಸಬೇಕು ಎಂದರು. ನಿತ್ಯ ಜೀವನದಲ್ಲಿ ನಡಿಗೆ ಇರಲಿ. ಪ್ರತಿದಿನ ಸಮಯ ಸಿಕ್ಕಾಗೆಲ್ಲಾ ನಡಿಗೆಯಲ್ಲಿ ನಿಮ್ಮ ದಿನ ಆರಂಭಿಸಿ. ಇದರಿಂದ ಹೃದಯ ಸಂಬಂಧಿ ಕಾಯಿಲೆ ಹಾಗೂ ಆರೋಗ್ಯ ಪೂರ್ಣ ಜೀವನ ನಿಮ್ಮದಾಗುತ್ತದೆ. ಹಣ, ಅಧಿಕಾರ, ಆಸ್ತಿಯಿಂದ ಮನುಷ್ಯ ಆರೋಗ್ಯವಾಗಿರಲು ಸಾಧ್ಯವಿಲ್ಲ. ಪ್ರತಿದಿನ ನೀವು ನಡೆಯುವ ನಡಿಗೆ ಆರೋಗ್ಯದ ಜೊತೆಗೆ ಎಲ್ಲವನ್ನೂ ತಂದುಕೊಡುತ್ತದೆ ಎಂದು ಹೇಳಿದರು.



ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, ನಾವು ಮಾಡುವ ತಪ್ಪುಗಳನ್ನು ದೇವರು ಕ್ಷಮಿಸಬಹುದು. ವ್ಯಾಯಾಮ, ಯೋಗ, ನಡಿಗೆ ಮಾಡದಿದ್ದರೆ ದೇಹದ ಜೀವಕೋಶ ಕ್ಷಮಿಸುವುದಿಲ್ಲ. ಉತ್ತಮ ಆರೋಗ್ಯಕ್ಕಾಗಿ ವಾಕ್ ಮಾಡಿ. ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಹೃದಯ ಸಂಬಂಧಿ ಕಾಯಿಲೆಗೆ ತಕ್ಕಂತೆ ಸುಸಜ್ಜಿತ ಕಟ್ಟಡವುಳ್ಳ ಆಸ್ಪತ್ರೆ ನಿರ್ಮಿಸಿದೆ. ಅತ್ಯುತ್ತಮ ಯಂತ್ರೋಪಕರಣಗಳೊಂದಿಗೆ ವೈದ್ಯಕೀಯ ಚಿಕಿತ್ಸೆ ಸಿಗುತ್ತದೆ ಎಂದರು. ವಾಕಾಥಾನ್‌ನಲ್ಲಿ 12 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ, ಸುಮಾರು 6 ಕಿ.ಮೀ ನಡಿಗೆ ನಡೆಸಿದರು.

ಇದೇ ಸಂದರ್ಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಪ್ರಸನ್ನನಂದನಾಥ ಸ್ವಾಮೀಜಿ, ಶ್ರೀ ಶಂಭುನಾಥನಂದ ಸ್ವಾಮೀಜಿ, ಶ್ರೀ ಮಂಗಳನಾಥನಂದ ಸ್ವಾಮೀಜಿ, ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಎಸ್ಪಿ ಎನ್.ಯತೀಶ್, ಡಿಎಚ್‌ಓ ಡಾ.ಮೋಹನ್, ಚಲನಚಿತ್ರ ನಟರಾದ ಯಶಸ್ ಸೂರ್ಯ, ಧನ್ವೀರ್ ಸೇರಿದಂತೆ ಇನ್ನಿತರ ಗಣ್ಯರು ಹಾಜರಿದ್ದರು.

ಮೂರನೇ ಪುಟದಿಂದ

ಶಾಸಕರು ಕಾಂಗ್ರೆಸ್ ಸೇರ್ಪಡೆ

ಮಾಡಲು ಆಗಿಲ್ಲ. ಬಿಜೆಪಿಯವರು ಗೊಂದಲ ಸೃಷ್ಟಿಸಲು ಪ್ರಯತ್ನ ಮಾಡುತ್ತಿದ್ದಾರೆ. ಬಿಜೆಪಿಯಲ್ಲೇ ಸಾಕಷ್ಟು ಸಮಸ್ಯೆ ಇದೆ, ಹೀಗಿರುವಾಗ ನಮ್ಮ ಶಾಸಕರನ್ನು ಅವರು ಸೆಳೆದುಕೊಳ್ಳುವುದು ದೂರದ ಮಾತು ಎಂದು ಡಿ.ಕೆ.ಶಿವಕುಮಾರ್ ಲೇವಡಿ ಮಾಡಿದರು. ಬಿಜೆಪಿಯವರಿಗೆ ಅಸ್ತಿತ್ವದಲ್ಲಿಲ್ಲದ ಪರಿಸ್ಥಿತಿ ಎದುರಾಗಿದೆ. ಸದ್ಯ ಅವರಿಗೆ ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿರಬೇಕು. ಅದಕ್ಕೋಸ್ಕರ ಅಲ್ಲಲ್ಲಿ ಹೋಗುತ್ತಾ, ಅವರಿವರನ್ನು ಭೇಟಿ ಮಾಡಿ ಮಾತುಕತೆ ನಡೆಸುತ್ತಾ ಸುದ್ದಿಯಾಗುತ್ತಿದ್ದಾರಷ್ಟೆ. ಮಾರ್ಕೆಟ್‌ನಲ್ಲಿ ಇರುವುದಕ್ಕೆ ಇಂತಹ ಪ್ರಯತ್ನ ಮಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಸಭೆ ಆಗಿರುವ ಬಗ್ಗೆ ನಾನು ಮಾತನಾಡಲ್ಲ. ಎಲ್ಲಾ ಮೂಮೆಂಟ್ ಗೊತ್ತಿದೆ, ನಿರುದ್ಯೋಗಿಗಳು ಚಪಲಕ್ಕೆ ಮಾತನಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ರಾಜ್ಯ ಸರ್ಕಾರದ ಕುರಿತು ಪ್ರಧಾನಿ ನರೇಂದ್ರ ಮೋದಿ ಟೀಕೆ ವಿಚಾರವಾಗಿ ಮಾತನಾಡಿದ ಅವರು, ಪ್ರಧಾನಿಗಳು ನಮ್ಮನ್ನು ನೆನಪಿಸಿಕೊಳ್ಳುತ್ತಾರೆ ಅದೇ ಸಂತೋಷ. ನಮ್ಮ ಗ್ಯಾರಂಟಿ, ನಮ್ಮ ಒಗ್ಗಟ್ಟು, ಜನರ ತೀರ್ಮಾನ ಅವರ ನಿದ್ದೆ ಕೆಡಿಸಿದೆ. ಅದಕ್ಕೆ ನೆನಪಿಸಿಕೊಳ್ಳುತ್ತಾರೆ ಎಂದು ಟೀಕಿಸಿದರು.

ಜೆಡಿಎಸ್ ಶಾಸಕರ ಒಗ್ಗಟ್ಟು ಪ್ರದರ್ಶನ

ನಾವು ಇಂದು ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದರು. **ಹಾಸನದ ರೆಸಾರ್ಟ್‌ನಲ್ಲಿ 3 ದಿನ ಸಭೆ:** ಡಿಕೆ ಬ್ರದರ್ಸ್ ಆಪರೇಷನ್ ಹಸ್ತಕ್ಕೆ ಕೌಂಟರ್ ನೀಡಲು ನಿನ್ನೆಯಿಂದ ಹಾಸನದ ರೆಸಾರ್ಟ್‌ವೊಂದರಲ್ಲಿ ತಮ್ಮ ಶಾಸಕರಿಗೆ ತಿಳುವಳಿಕೆ ನೀಡಲು ಹೆಚ್.ಡಿ. ಕುಮಾರಸ್ವಾಮಿ ಸಭೆ ಕರೆದಿದ್ದಾರೆ. ಡಿಕೆ ಬ್ರದರ್ಸ್ ನಾಗಾಲೋಟಕ್ಕೆ ಬ್ರೇಕ್ ಹಾಕಲು ಕುಮಾರಸ್ವಾಮಿ ಪ್ಲ್ಯಾನ್ ಮಾಡಿದ್ದು, ರೆಸಾರ್ಟ್ ರಾಜಕೀಯ ಆರಂಭಿಸಿದ್ದಾರೆ.

ಇಂದು ಕೂಡ ಸಭೆ ಮುಂದುವರಿಕೆ: ಇಂದು ಮತ್ತೆ ಶಾಸಕರ ಜೊತೆ ಕುಮಾರಸ್ವಾಮಿ ಮುಕ್ತಾಗಿ ಒನ್ ಟು ಒನ್ ಮಾತುಕತೆ ನಡೆಸುತ್ತಿದ್ದು, ಶಾಸಕರಿಗೆ ಕಾಂಗ್ರೆಸ್ ನಾಯಕರಿಂದ ಒತ್ತಡ ಹಾಕುತ್ತಿರುವ ಬಗ್ಗೆ ಚರ್ಚಿಸಲಿದ್ದಾರೆ. ಕೈ ನಾಯಕರ ಆಮಿಷಕ್ಕೆ ಒಳಗಾಗಬೇಡಿ, ಕಾಂಗ್ರೆಸ್‌ನೊಳಗೆಯೇ ಭಿನ್ನಾಭಿಪ್ರಾಯ ತಾರಕಕ್ಕೇರಿದೆ. ಈ ಡ್ಯಾಮೇಜ್ ಕಂಟ್ರೋಲ್‌ಗೆ ಆಪರೇಷನ್ ಹಸ್ತದ ಹೇಳಿಕೆ ನೀಡುತ್ತಿದೆ ಎಂದು ಕುಮಾರಸ್ವಾಮಿ ನಿನ್ನೆಯ ಸಭೆಯಲ್ಲಿ ತಮ್ಮ ಶಾಸಕರಿಗೆ ಪಾಠ ಮಾಡಿದ್ದಾರೆ. ಲೋಕಸಭೆ ಚುನಾವಣೆಗೆ ಮುನ್ನ ಆಪರೇಷನ್ ಹಸ್ತ ರಾಜ್ಯದಲ್ಲಿ ನಡೆಯುತ್ತದೆಯೇ, ಡಿಕೆ ಬ್ರದರ್ಸ್‌ನ ಆಟಕ್ಕೆ ಜೆಡಿಎಸ್–ಬಿಜೆಪಿ ನಾಯಕರು ಬ್ರೇಕ್ ಹಾಕುತ್ತಾರೆಯೇ ಎಂದು ಕಾದುನೋಡಬೇಕಿದೆ.

ಸದಾನಂದಗೌಡ ನಿವೃತ್ತಿ ಘೋಷಣೆ

ಪಕ್ಷದ ವರಿಷ್ಠರು ತಮ್ಮ ನಿಲುವು ತಿಳಿಸಬೇಕು ಎಂದು ಆಗ್ರಹಿಸಿದ್ದರು.

ಜೆಡಿಎಸ್ ಜತೆಗಿನ ಮೈತ್ರಿ ಎನ್‌ಡಿಎ ನಿರ್ಧಾರ: ಎನ್‌ಡಿಎ ವಿಚಾರಕ್ಕೆ ಬಂದರೆ ನಮ್ಮ ಕೇಂದ್ರ ನಾಯಕರು ನಿರ್ಧಾರ ಕೈಗೊಂಡಿದ್ದಾರೆ. ಆದರೆ, ನಮ್ಮ ಕಾರ್ಯಕರ್ತರು ಇಷ್ಟು ವರ್ಷ ಹೋರಾಡಿದ ಪಕ್ಷದೊಂದಿಗೆ ಏಕಾಏಕಿ ಚುನಾವಣೆಗೆ ಸ್ಪರ್ಧಿಸುವುದು ಕಷ್ಟವಾಗುವುದರಿಂದ ರಾಜ್ಯದಲ್ಲಿ ಇದನ್ನು ಜಾರಿಗೆ ತರಲು ಸೂಕ್ತ ಮಾರ್ಗಸೂಚಿಗಳನ್ನು ನೀಡುವಂತೆ ನಾವು ಅವರಿಗೆ ಮನವಿ ಮಾಡಿದ್ದೇವೆ. ರಾಜ್ಯ ನಾಯಕರು ಮತ್ತು ವಿರೋಧ ಪಕ್ಷದ ನಾಯಕರ ನೇಮಕ ವಿಳಂಬವಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಇದು ತಮಗೆ ಮುಜುಗರ ಉಂಟು ಮಾಡಿದೆ. ವಿಳಂಬವನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದು ಮುಜುಗರವನ್ನು ಉಂಟುಮಾಡಿದೆ. ನಮ್ಮ ನಾಯಕರು ಈ ವಿಷಯದ ಬಗ್ಗೆ ವೈಯಕ್ತಿಕ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ ಮತ್ತು ಐದು ರಾಜ್ಯಗಳ ಚುನಾವಣೆಗಳು ಮುಗಿದ ನಂತರ ಘೋಷಣೆ ಮಾಡಬಹುದೆಂದು ನಾವು ನಿರೀಕ್ಷಿಸುತ್ತೇವೆ ಎಂದು ಹೇಳಿದರು.

ಬಿಜೆಪಿ ಸಾರಥ್ಯ ಅನಿವಾರ್ಯ

ಸದಾ ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಯತ್ನಾಳ್ ಅವರಿಗೆ ಹೆಚ್ಚು ಬೆಂಬಲ ವ್ಯಕ್ತವಾಗಿದೆ. ಯತ್ನಾಳ್ ಅವರನ್ನು ನೇಮಕ ಮಾಡಲು ಕೇಂದ್ರ ಗೃಹ ಸಚಿವ ಅಮಿತ್ ಷಾ ಒಲವು ತೋರುತ್ತಿಲ್ಲ. ರಾಜ್ಯಾಧ್ಯಕ್ಷರಾಗಿ ವಿವಾದಾತ್ಮಕ ಹೇಳಿಕೆ ನೀಡಿ ಪಕ್ಷವನ್ನೇ ಗೊಂದಲಕ್ಕೆ ಸಿಲುಕಿಸಿದರೆ ಎಂಬ ಭಯ ಕಾಡುತ್ತಿದೆ. ಸೋಮಣ್ಣ ಬಗ್ಗೆ ಗೃಹ ಸಚಿವರಿಗೆ ಒಲವು ಇದ್ದಂತಿದೆ. ಪಕ್ಷದ ಸೂಚನೆಯಂತೆ ತಮ್ಮ ಕ್ಷೇತ್ರ ತೊರೆದು ವರುಣಾದಲ್ಲಿ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿ ಆದೇಶ ಪಾಲನೆ ಮಾಡಿದ್ದು, ಈಗ ಅವರಿಗೆ ವರದಾನವಾಗುತ್ತಿದೆ. ಹಾಲಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಅವಧಿ ಪೂರ್ಣಗೊಂಡು 8 ತಿಂಗಳೇ ಕಳೆದಿವೆ. ಅಲ್ಲದೆ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸ್ಥಾನಕ್ಕೆ 6 ತಿಂಗಳಿಂದಲೂ ನೇಮಕವಾಗಿಲ್ಲ. ಸದ್ಯಕ್ಕೆ ರಾಜ್ಯಾಧ್ಯಕ್ಷರ ಸ್ಥಾನ ಭರ್ತಿ ಮಾಡಲು ವರಿಷ್ಠರು ಕಸರತ್ತು ನಡೆಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕ ಸೇರಿದಂತೆ ಲೋಕಸಭಾ ಚುನಾವಣೆ ಕುರಿತು ಸಮಾಲೋಚನೆ ನಡೆಸಲು ನವೆಂಬರ್ 10 ಅನ್ನು ಮೀಸಲಿಟ್ಟಿದ್ದಾರೆ. ಅಂದು ರಾಜ್ಯಾಧ್ಯಕ್ಷರ ಬಗ್ಗೆ ಚರ್ಚೆ ನಡೆದು ದೀಪಾವಳಿ ಹಬ್ಬದ ನಂತರ ಹೊಸ ಅಧ್ಯಕ್ಷರ ನೇಮಕಾತಿ ಆಗಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ನಕಲಿ ಮಾಡಿ ಕೋಟ್ಯಾಂತರ ರೂ. ಲೂಟಿ

ವರ್ಗಾವಣೆಗಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಶೀಲಿಸಿ ಆಯಾ ವಲಯ ಕಚೇರಿಗಳಲ್ಲಿ ಖಾತಾ ವರ್ಗಾವಣೆ ಶುಲ್ಕ ಪಾವತಿಸಲು ಮುಡಾದಿಂದ ಸಿದ್ಧಪಡಿಸಿದ ತ್ರಿಪ್ರತಿ ಚಲನ್‌ಗಳನ್ನು ಅರ್ಜಿದಾರರಿಗೆ ನೀಡಲಾಗುತ್ತದೆ. ಈ ಚಲನ್‌ಗಳ ಮೂಲಕ ಅರ್ಜಿದಾರರು ಬ್ಯಾಂಕ್ ಆಫ್ ಬರೋಡಾ, ಮುಡಾ ಶಾಖೆಯಲ್ಲಿ ಹಣ ಪಾವತಿಸಿ, ಚಲನ್‌ನ ಜೆರಾಕ್ಸ್ ಪ್ರತಿಯನ್ನು ಮುಡಾಗೆ ನೀಡಬೇಕಾಗುತ್ತದೆ. ಚಲನ್‌ನ ತ್ರಿಪ್ರತಿಗಳಲ್ಲಿ ಒಂದು ಹಣ ಪಾವತಿಸಿದ ಅರ್ಜಿದಾರನಿಗೆ ಬ್ಯಾಂಕ್‌ನಿಂದ ನೀಡಿದರೆ, ಮತ್ತೊಂದು ಪ್ರತಿ ಬ್ಯಾಂಕ್‌ನಲ್ಲಿರುತ್ತದೆ. ಇನ್ನೊಂದು ಪ್ರತಿಯನ್ನು ಮುಡಾ ಲೆಕ್ಕ ಶಾಖೆಗೆ ಬ್ಯಾಂಕ್‌ನಿಂದಲೇ ರವಾನಿಸಲಾಗುತ್ತದೆ. ಹಣ ಪಾವತಿಸಿರುವುದಕ್ಕೆ ಚಲನ್ ಮೇಲೆ ಬ್ಯಾಂಕ್‌ನ ಸೀಲ್ ಮತ್ತು ಹಣ ಸ್ವೀಕರಿಸಿದ ಕ್ಯಾಶಿಯರ್‌ನ ಸಹಿ ಇರುತ್ತದೆ.

ಅರ್ಜಿದಾರರು ನೀಡಿದ ಚಲನ್‌ನ ಜೆರಾಕ್ಸ್ ಪ್ರತಿಯನ್ನು ಪಡೆದ ಮುಡಾ ಅಧಿಕಾರಿಗಳು ಬ್ಯಾಂಕ್‌ಗೆ ಹಣ ಪಾವತಿಯಾಗಿರುವ ಬಗ್ಗೆ ಲೆಕ್ಕ ಶಾಖೆಯಿಂದಲೂ ಖಚಿತಪಡಿಸಿಕೊಂಡು ನಂತರ ಖಾತಾ ವರ್ಗಾವಣೆ ಮಾಡಿಕೊಡುವುದು ವಾಡಿಕೆ.

ಆದರೆ ಇಲ್ಲಿ ಬ್ಯಾಂಕ್‌ಗೆ ಹಣವನ್ನೇ ಪಾವತಿಸದೇ, ಚಲನ್ ಮತ್ತು ಬ್ಯಾಂಕ್ ಸೀಲ್ ಅನ್ನೇ ನಕಲಿ ಮಾಡಿ, ಅದನ್ನು ಮುಡಾಗೆ ನೀಡಿ ಖಾತೆ ಮಾಡಿಸಿಕೊಂಡು ಪ್ರಾಧಿಕಾರಕ್ಕೆ ಪಂಗನಾಮ ಹಾಕಲಾಗಿದೆ. ಈ ರೀತಿ ಅನೇಕ ಪ್ರಕರಣಗಳು ನಡೆದಿದೆ ಎಂದು ಶಂಕಿಸಲಾಗಿದ್ದು, ಇತ್ತೀಚೆಗೆ ಅಧಿಕಾರಿಗಳು ಚಲನ್ ಅನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ತಿ.ನರಸೀಪುರ ತಾಲೂಕು ಎಂ.ಎಲ್.ಹುಂಡಿ ಗ್ರಾಮದ ಎಂ.ಎಲ್.ಮೋಹನ್ ಕುಮಾರ್ ಎಂಬುವರು ಲಲಿತಾದ್ರಿಪುರ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆಯ ನಿವೇಶನ ಸಂಖ್ಯೆ 1870 ಖಾತೆ ವರ್ಗಾವಣೆ ಸಂಬಂಧ 8,050 ರೂ., ಶ್ಯಾದನಹಳ್ಳಿ ಗ್ರಾಮದ ಗಾಲಿ ಆನಂದ ರೆಡ್ಡಿ ಎಂಬುವರು ಶ್ಯಾದನಹಳ್ಳಿ ಗ್ರಾಮದ ನಿ.ಸಂ.310ರ ಸಂಬಂಧ 8,270 ರೂ., ಹೆಬ್ಬಾಳಿನ ಆರ್.ಯೋಗೇಶ್ ಎಂಬುವರು 8,800 ರೂ., ನಜರ್‌ಬಾದಿನ ಯು.ಆರ್.ಗಿರೀಶ್ ಅವರು 16,899 ರೂ., ಬೆಂಗಳೂರಿನ ಸಿ.ಡಿ.ವೇಣುಗೋಪಾಲ್ ಎಂಬುವರು ಮಾದಗಳ್ಳಿ ಗ್ರಾಮದ ನಿವೇಶನ ಸಂಖ್ಯೆ 29ರ ಖಾತೆ ವರ್ಗಾವಣೆಗಾಗಿ 40,050 ರೂ. ಶುಲ್ಕ ಪಾವತಿಸಿರುವುದರ ಸಂಬಂಧ ಮುಡಾಗೆ ಚಲನ್‌ಗಳನ್ನು ನೀಡಿದ್ದರು.

ಆದರೆ ಶುಲ್ಕ ಪಾವತಿ ಬಗ್ಗೆ ಪ್ರಾಧಿಕಾರದ ಲೆಕ್ಕ ಶಾಖೆಯಲ್ಲಿ ಪರಿಶೀಲಿಸಲಾಗಿ ಸದರಿ ಹಣವು ಮುಡಾ ಖಾತೆಗೆ ಜಮೆಯಾಗಿಲ್ಲ. ಕೂಲಂಕುಶವಾಗಿ ಪರಿಶೀಲಿಸಿದಾಗ ಅರ್ಜಿದಾರರು ಸಲ್ಲಿಸಿರುವ ಚಲನ್‌ಗಳು ಹಾಗೂ ಅದರ ಮೇಲೆ ಹಾಕಿದ್ದ ಬ್ಯಾಂಕಿನ ಸೀಲ್ ನಕಲಿ ಎಂಬುದು ಗೊತ್ತಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅವರ ನಿರ್ದೇಶನದಂತೆ ಕಾರ್ಯದರ್ಶಿ ಜಿ.ಡಿ.ಶೇಖರ್‌ರೊಂದಿಗೆ ವಲಯ ಕಚೇರಿ 3, 5ಎ ಮತ್ತು 5ಬಿಯ ವಿಶೇಷ ತಹಶೀಲ್ದಾರ್ ಆರ್.ಶಿವಕುಮಾರ್ ಅವರು ಲಕ್ಷ್ಮೀಪುರಂ ಠಾಣೆಗೆ ದೂರು ನೀಡಿದ್ದಾರೆ.

ಅರ್ಜಿದಾರರು ಸಲ್ಲಿಸಿರುವ ಚಲನ್‌ಗಳು ನಕಲಿ ಎಂದು ಕಂಡು ಬಂದಿರುವುದರಿಂದ ಅವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ವಹಿಸಬೇಕೆಂದು ಹಾಗೂ ಅದೇ ರೀತಿ ಸಹೋದ್ಯೋಗಿಯಾದ ವಲಯ ಕಚೇರಿ–6ರ ವಿಶೇಷ ತಹಶೀಲ್ದಾರ್ ಹೆಚ್.ಪಿ.ರವಿಪ್ರಸಾದ್ ಅವರ ಕಚೇರಿಯಲ್ಲೂ ಇಂತಹ ಪ್ರಕರಣಗಳು ನಡೆದಿವೆ ಎಂದು ಶಿವಕುಮಾರ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಅರ್ಜಿದಾರರು ಹಣ ಪಾವತಿ ಚಲನ್ ಪ್ರತಿ ನೀಡಿದಾಗ ಪ್ರಾಧಿಕಾರದ ಲೆಕ್ಕ ಶಾಖೆಯಲ್ಲಿ ಹಣ ಮುಡಾ ಖಾತೆಗೆ ಜಮೆ ಆಗಿರುವುದನ್ನು ಖಚಿತಪಡಿಸಿಕೊಳ್ಳದೇ ಸೇವೆ ಒದಗಿಸಿರುವ ಕೇಸ್ ವರ್ಕರ್, ವಲಯಾಧಿಕಾರಿ, ವಿಶೇಷ ತಹಶೀಲ್ದಾರರು ಮತ್ತು ಕಚೇರಿ ಅಧೀಕ್ಷಕರುಗಳೂ ಸಹ ಈ ಅವ್ಯವಹಾರದಲ್ಲಿ ಪಾಲ್ಗೊಂಡಿರಬಹುದು ಎಂಬ ಸಂಶಯ ವ್ಯಕ್ತವಾಗಿದೆ.

ಕಳೆದ ಹಲವು ವರ್ಷಗಳಿಂದ ಈ ಜಾಲ ಎಗ್ಗಿಲ್ಲದೇ ನಡೆಯುತ್ತಿರುವ ಶಂಕೆ ವ್ಯಕ್ತವಾಗಿದ್ದು, ಮುಡಾಗೆ ಕೋಟ್ಯಾಂತರ ರೂ. ವಂಚನೆಯಾಗಿರುವ ಸಾಧ್ಯತೆ ಇರುವುದರಿಂದ ಪ್ರತೀ ವರ್ಷ ನಡೆಯುವ ಲೆಕ್ಕ ಪರಿಶೋಧನೆ ವೇಳೆ ಆಕ್ಷೇಪ ವ್ಯಕ್ತವಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಚಲನ್ ಮತ್ತು ಬ್ಯಾಂಕ್ ಸೀಲ್ ಅನ್ನು ಸಂಶಯವೇ ಬಾರದಂತೆ ಮೂಲ ವಿನ್ಯಾಸದಲ್ಲೇ ಸಿದ್ಧಪಡಿಸಿರುವುದರಿಂದ ವಂಚಕರ ಜಾಲದೊಂದಿಗೆ ಕೆಲ ಮುಡಾ ಅಧಿಕಾರಿಗಳು ಅಥವಾ ಸಿಬ್ಬಂದಿ ಕೈಜೋಡಿಸಿರಬಹುದು ಎಂಬ ಮಾತುಗಳು ಕೇಳಿಬಂದಿವೆ.

ಹಗರಣ ಬಯಲಾಗುತ್ತಿದ್ದಂತೆಯೇ ಮುಡಾದ ಮೂವರು ಸಿಬ್ಬಂದಿ ಕಚೇರಿಗೆ ಗೈರು ಹಾಜರಾಗಿ, ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾರೆ ಎಂದು ವಿಶೇಷ ತಹಶೀಲ್ದಾರ್ ಶಿವಕುಮಾರ್ ಪೊಲೀಸರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಮುಡಾ ಅಧಿಕಾರಿಗಳ ದೂರಿನಂತೆ ಆರೋಪಿಗಳಾಗಿರುವ ಅರ್ಜಿದಾರರು ಯಾರಿಗೆ ಹಣ ನೀಡಿದ್ದಾರೆ ಎಂಬುದು ಪತ್ತೆಯಾದರೆ ಈ ಭಾರೀ ಹಗರಣದ ರೂವಾರಿಗಳ ಬಣ್ಣ ಬಯಲಾಗಲಿದೆ. ಮುಡಾ ಚಲನ್ ಪ್ರತಿಗಳು ಹಾಗೂ ಬ್ಯಾಂಕ್ ಆಫ್ ಬರೋಡಾ ಮುಡಾ ಶಾಖೆಯ ಸೀಲ್ ಅನ್ನು ಎಲ್ಲಿ, ಯಾರು ಸಿದ್ಧಪಡಿಸಿದರೆಂಬುದು ತನಿಖೆಯಿಂದ ಬಯಲಾಗಬೇಕಾಗಿದೆ. 'ಹಣ ಪಾವತಿಸಿದೆ' (Cash Paid) ಎಂಬ ಸೀಲ್ ತಯಾರಿಸಲು ಬ್ಯಾಂಕಿನ ಲೆಟರ್ ಹೆಡ್‌ನಲ್ಲಿ ಶಾಖಾ ವ್ಯವಸ್ಥಾಪಕರು ಲಿಖಿತ ಮನವಿ ಸಲ್ಲಿಸಿದ ನಂತರ ಜವಾಬ್ದಾರಿಯುತ ಅಧಿಕಾರಿಗಳು ಖುದ್ದಾಗಿ ಅಲ್ಲೇ ನಿಂತು ಸೀಲು ಮಾಡಿಸಿ ತರಬೇಕು. ನಕಲಿ ಸೀಲ್ ಸಿದ್ಧವಾಗಿದೆ ಎಂದರೆ, ಬ್ಯಾಂಕ್ ಅಧಿಕಾರಿಗಳು ಶಾಮೀಲಾಗಿರಬಹುದು ಎಂಬ ಮಾತುಗಳು ಮುಡಾ ವಲಯದಲ್ಲಿ ಕೇಳಿ ಬರುತ್ತಿದೆ.

ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಬೇಕೆಂದು ಮುಡಾ ಕಾರ್ಯದರ್ಶಿ ಜಿ.ಡಿ.ಶೇಖರ್ ಠಾಣೆ ಇನ್ಸ್‌ಪೆಕ್ಟರ್‌ಗೆ ಮನವಿ ಮಾಡಿದ್ದಾರೆ.

ನಕಲಿ ಬ್ಯಾಂಕ್ ಮೊಹರು, ಚಲನ್ ತಯಾರಿಸಿ ವಂಚಿಸುವ ಜಾಲವೇ ಇದೆ

ಮೈಸೂರು, ನ. 8(ಆರ್‌ಕೆ)– ಬ್ಯಾಂಕ್ ಮೊಹರು ಮತ್ತು ಚಲನ್ ನಕಲಿ ಮಾಡಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಂಚಿಸಿ ಹಣ ಗುಳುಂ ಮಾಡುವ ಮಹಾ ಜಾಲವೇ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಾಧಿಕಾರದ ಅಧಿಕಾರಿಗಳೇ ಹೇಳುತ್ತಿದ್ದಾರೆ. ಮಧ್ಯವರ್ತಿಗಳು ಹಣದ ಆಮಿಷವೊಡ್ಡಿ ಸಿಬ್ಬಂದಿಗಳ ಮೂಲಕ ಮುಡಾ ಅಧಿಕಾರಿಗಳ ಮನವೊಲಿಸಿ ಅವ್ಯವಹಾರದಲ್ಲಿ ಭಾಗಿದಾರರನ್ನಾಗಿ ಮಾಡಿ ಹಣ ಮಾಡುವ ದಂಧೆಯನ್ನು ಕೆಲವರು ಎಗ್ಗಿಲ್ಲದೇ ಮಾಡುತ್ತಿದ್ದಾರೆ ಎಂದು ದೂರುತ್ತಿದ್ದಾರೆ.

ಮುಡಾ ಕಚೇರಿಯ ಒಳ ಹಾಗೂ ಹೊರ ಆವರಣದಲ್ಲಿ ಸಿಸಿ ಕ್ಯಾಮರಾಗಳು ಕಾರ್ಯ ನಿರ್ವಹಿಸುತ್ತಿದ್ದರೂ, ಮಧ್ಯವರ್ತಿಗಳು ಕೇಸ್ ವರ್ಕರ್‌ಗಳು ಹಾಗೂ ಅಧಿಕಾರಿಗಳನ್ನು ಭ್ರಷ್ಟರನ್ನಾಗಿ ಮಾಡಿ ಬಿಡಿ ನಿವೇಶನ, ಬದಲಿ ನಿವೇಶನ, 50:50 ಅನುಪಾತದಲ್ಲಿ ಪರಿಹಾರಕ್ಕೆ ಬದಲಾಗಿ ಬೆಲೆಬಾಳುವ ನಿವೇಶನ ಮಂಜೂರಾತಿ, ಟೈಟಲ್ ಡೀಡ್, ಖಾತಾ ನೋಂದಣಿ, ವರ್ಗಾವಣೆ, ಸಿಆರ್, ನಕ್ಷೆ ಅನುಮೋದನೆ, ನಿವೇಶನಗಳ ಬಿಡುಗಡೆಯಂತಹ ಕೆಲಸಗಳ ಸಂಬಂಧ ಸಾರ್ವಜನಿಕರಿಂದ ಹಣ ಪೀಕಿ ಭಾರೀ ಅವ್ಯವಹಾರ ನಡೆಸುತ್ತಿದ್ದಾರೆ ಎಂದು ಮುಡಾ ಅಧಿಕಾರಿಗಳೇ ಬಾಯಿಬಡಿದುಕೊಳ್ಳುತ್ತಿದ್ದಾರೆ. ಇ–ಖಾತೆ ಸೆಕ್ಷನ್, ಟಿಪಿಎಂ, ಸೈಟ್, ಇಂಜಿನಿಯರಿಂಗ್, ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿ, ಲೆಕ್ಕ ಶಾಖೆ, ಎಲ್ಲಾ ವಲಯ ಕಚೇರಿಗಳಲ್ಲೂ ಅವ್ಯವಹಾರ, ಅಕ್ರಮ ತಾಂಡವವಾಡುತ್ತಿದ್ದು, ಕುರುಡು ಕಾಂಚಾಣ ಅಟ್ಟಹಾಸ ಮೆರೆಯುತ್ತಿದೆ ಎಂದು ಹೇಳಲಾಗುತ್ತಿದೆ.

ಮಾನಿಟರಿಂಗ್ ಸಿಸ್ಟಂ ಅಳವಡಿಕೆ

ತಲುಪಿಸುವ ವ್ಯವಸ್ಥೆ ಮಾಡಲಾಗಿತ್ತು. ಈಗ ಅದೇ ರೀತಿ ಕಾವೇರಿ ನದಿ ಹರಿಯುವ ಮಾರ್ಗದ ಕುಶಾಲನಗರ ಕಾವೇರಿ ಸೇತುವೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ಈ ಕೇಂದ್ರದಲ್ಲಿ ಎರಡು ವೆಲಾಸಿಟಿ ಸೆನ್ಸಾರ್ ಮತ್ತು ಇನ್ನೊಂದು ಡೆಪ್ತ್ ಸೆನ್ಸಾರ್ ಅಳವಡಿಸಲಾಗಿದ್ದು, ದಿನದ 24 ಗಂಟೆಗಳ ಕಾಲ ಈ ಕೇಂದ್ರದಿಂದ ಬೆಂಗಳೂರು ಸೇರಿದಂತೆ ಕೇಂದ್ರಕ್ಕೆ ಮಾಹಿತಿ ರವಾನೆಯಾಗಲಿದೆ. ಇದೀಗ ಹಾರಂಗಿ ಜಲಾಶಯ ಸೇರಿದಂತೆ ಕಾವೇರಿ ನದಿ ಮೇಲೂ ಕೇಂದ್ರ ಜಲ ಆಯೋಗ ಕಣ್ಗಾವಲು ಇರಿಸಲು ಮುಂದಾಗಿದೆ. ಆಟೋ ಮೆಟಿಕ್ ವಾಟರ್ ಗೇಜ್ ಕಾವೇರಿ ನದಿ ನೀರಿನ ಸ್ಥಿತಿಗತಿ ಜೊತೆಗೆ ಮಳೆಯ ಪ್ರಮಾಣ, ಹವಾಮಾನ ವರದಿ, ಮಳೆ ಎಷ್ಟು ಬೀಳಬಹುದು ಎಂಬುದರ ಬಗ್ಗೆ ಮಾಹಿತಿ ಪಡೆದುಕೊಳ್ಳಲೂ ಈ ವ್ಯವಸ್ಥೆ ಸಹಕಾರಿಯಾಗಿದೆ.

ಈ ಮೊದಲು ಕಾವೇರಿ ನೀರಾವರಿ ನಿಗಮ ಮತ್ತು ನೀರಾವರಿ ಇಲಾಖೆ ಅಧೀನಕ್ಕೆ ಜಲಾಶಯಗಳು ಒಳಪಟ್ಟಿದ್ದವು. ನೀರಾವರಿ ಇಲಾಖೆ ಅಣೆಕಟ್ಟೆ ವಿಭಾಗದ ಅಧಿಕಾರಿಗಳು ಜಲಾಶಯಗಳ ನೀರಿನ ಪ್ರಮಾಣ ಕುರಿತು ಅಳತೆ ಮಾಡಿ ಲಿಖಿತವಾಗಿ ಮೇಲಾಧಿಕಾರಿಗಳಿಗೆ ಕಳುಹಿಸುವ ವ್ಯವಸ್ಥೆ ಇತ್ತು. ಇದೀಗ ನೂತನ ಯಂತ್ರೋಪಕರಣ ಅಳವಡಿಸಿರುವುದರಿಂದ ಕ್ಷಣ ಕ್ಷಣದ ಮಾಹಿತಿ ನೇರವಾಗಿ ಆಯೋಗಕ್ಕೆ ತಲುಪುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತ, ಪ್ರವಾಹಗಳಿಗೆ ಹಾರಂಗಿ ಅಣೆಕಟ್ಟೆಯಲ್ಲಿನ ನೀರಿನ ಅವೈಜ್ಞಾನಿಕ ನಿರ್ವಹಣೆಯೇ ಕಾರಣ ಎಂಬ ಆರೋಪ ವ್ಯಾಪಕವಾಗಿ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಜಲಾಶಯದ ಸ್ಥಿತಿಗತಿಗಳ ಬಗ್ಗೆ ಕಣ್ಣಿಡಲು ಸರ್ಕಾರ ಟೆಲಿಮೆಟ್ರಿಕ್ ವಾಟರ್ ಮಾನಿಟರಿಂಗ್ ಸಿಸ್ಟಂ ಅಳವಡಿಸಿದೆ. ಜೊತೆಗೆ ತಮಿಳುನಾಡಿಗೆ ಹರಿಸುವ ಕಾವೇರಿ ನೀರಿನಲ್ಲಿ ಹಾರಂಗಿ ಅಣೆಕಟ್ಟೆಯಲ್ಲಿ ಸಂಗ್ರಹವಾಗುವ ನೀರಿನ ಪ್ರಮಾಣವೂ ಮಹತ್ವದ ಪಾತ್ರ ವಹಿಸುವುದರಿಂದಲೂ ಜಲ ಆಯೋಗಕ್ಕೆ ಅಣೆಕಟ್ಟೆ ಹಾಗೂ ನದಿಗಳ ಮೇಲೆ ನಿಯಂತ್ರಣ ಹೊಂದಲು ಆಟೋಮ್ಯಾಟಿಕ್ ವಾಟರ್ ಗೇಜ್ ಅಳವಡಿಕೆ ಸಹಾಯಕವಾಗಲಿದೆ ಎಂಬ ಅಭಿಪ್ರಾಯಗಳೂ ವ್ಯಕ್ತವಾಗುತ್ತಿದೆ.

ಸ್ವಯಂಚಾಲಿತ ಉಪಕರಣ: ಕುಶಾಲನಗರ ಕಾವೇರಿ ನದಿ ಸೇತುವೆಗೆ ಅಳವಡಿಸಿರುವ ಟೆಲಿಮೆಟ್ರಿಕ್ ವಾಟರ್ ಗೇಜ್‌ನಿಂದ ನದಿಯ ನೀರಿನ ಮಟ್ಟ, ಏರಿಕೆ, ಇಳಿಕೆ, ಹರಿವು ಮುಂತಾದ ಅಂಕಿ ಅಂಶಗಳು ಸೇರಿದಂತೆ ಎಲ್ಲಾ ಬಗೆಯ ಮಾಹಿತಿ ಉಪಗ್ರಹದ ಮೂಲಕ ಕೇಂದ್ರ ಜಲ ಆಯೋಗದ ಬೆಂಗಳೂರು ಮತ್ತು ದೆಹಲಿಯ ಕಚೇರಿಗಳಿಗೆ ನೇರವಾಗಿ ರವಾನೆ ಆಗುತ್ತದೆ. ಆಟೋಮ್ಯಾಟಿಕ್ ವಾಟರ್ ಗೇಜ್ ಮೂಲಕ ಸಂಗ್ರಹವಾಗುವ ಈ ಎಲ್ಲಾ ಮಾಹಿತಿಗಳು ಸ್ಥಳೀಯ ಅಧಿಕಾರಿಗಳಿಗೆ ಸಿಗುವುದಿಲ್ಲ. ಹಾಗಾಗಿ ಹೊಸ ವ್ಯವಸ್ಥೆ ಬಂದಿದ್ದರೂ ಇಲ್ಲಿನ ಸಿಬ್ಬಂದಿ ಹಳೆಯ ವ್ಯವಸ್ಥೆಯ ಮಾಪಕಗಳ ಅವಲಂಬನೆ ಅನಿವಾರ್ಯವಾಗಿದೆ.

ಅಂದಾಜು 30 ಲಕ್ಷ ರೂಗಳ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ತಂತ್ರಜ್ಞಾನದ ಕಾಮಗಾರಿ ಸಂಪೂರ್ಣಗೊಂಡಿದ್ದು ಕೆಲವೇ ದಿನಗಳಲ್ಲಿ ಕಾರ್ಯ ಆರಂಭಿಸಲಿದೆ ಎಂದು ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಸಂತೋಷ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇದುವರೆಗೆ ನೀರಿನ ಹರಿವಿನ ಪ್ರಮಾಣವನ್ನು ಮಾನವ ಸಂಪನ್ಮೂಲ ಬಳಸಿ ಸಂಗ್ರಹಿಸಲಾಗುತ್ತಿತ್ತು. ಇದೀಗ ಸಂಪೂರ್ಣ ಸ್ವಯಂ ನಿಯಂತ್ರಿತವಾಗಿ ನದಿ ನೀರಿನ ಹರಿವಿನ ಪ್ರಮಾಣವನ್ನು ಪಡೆಯುವ ವ್ಯವಸ್ಥೆ ಹೊಂದಿದೆ ಎಂದು ತಿಳಿಸಿದ್ದಾರೆ.

ಶ್ರೀಗಳಿಗೆ ಷರತ್ತು ಬದ್ಧ ಜಾಮೀನು

ಜಾಮೀನನ್ನು ದುರುಪಯೋಗಪಡಿಸಿಕೊಳ್ಳಬಾರದು ಮತ್ತು ಅವರು ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದರೆ, ಅದು ಸ್ವಯಂಚಾಲಿತವಾಗಿ ರದ್ದಾಗುತ್ತದೆ ಎಂದು ಹೈಕೋರ್ಟ್ ಹೇಳಿದೆ. ಮುರುಘಾಶ್ರೀಗೆ ಜಾಮೀನು ಸಿಕ್ಕರೂ ಮತ್ತೊಂದು ಅರ್ಜಿ ವಿಚಾರಣೆ ಬಾಕಿ ಇರುವ ಹಿನ್ನೆಲೆಯಲ್ಲಿ ಅವರಿಗೆ ಬಿಡುಗಡೆ ಭಾಗ್ಯವಿಲ್ಲ. ಮುರುಘಾಶ್ರೀಗಳ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದ್ದು, ಕಳೆದ ವರ್ಷ ಸೆಪ್ಟೆಂಬರ್ 1 ರಂದು ಬಂಧಿಸಿದ್ದು, ಒಂದು ವರ್ಷದಿಂದ ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯಿದೆ 2012, ಭಾರತೀಯ ದಂಡ ಸಂಹಿತೆ 1860, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯಿದೆ–1988, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯ ತಡೆ ಕಾಯಿದೆ 1989 ಮತ್ತು ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯಿದೆ 2015ರ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ.

ನಮ್ಮ ಶಾಸಕರು ಗಟ್ಟಿಯಾಗಿದ್ದಾರೆ

ನಿಮಗೆ ಯಾರು ಹೇಳಿದ್ದು. ಯಾರೇ ಸಂಪರ್ಕ ಮಾಡಿದರೂ ನಮ್ಮ ಶಾಸಕರು ಗಟ್ಟಿಯಾಗಿದ್ದಾರೆ. ಸರ್ಕಾರ ಅಸ್ಥಿರಗೊಳಿಸುವ ಬಿಜೆಪಿ ಪ್ರಯತ್ನ ವಿಫಲವಾಗುತ್ತೆ ಎಂದರು.

ಕಳೆದ ವಾರವೂ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಸರ್ಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಬಿಜೆಪಿ ಆಪರೇಷನ್ ಕಮಲಕ್ಕೆ ಯತ್ನಿಸುತ್ತಿದೆ ಎಂದು ಆರೋಪಿಸಿದ್ದರು. ವಿರೋಧ ಪಕ್ಷದ ಯಾವುದೇ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ.

ಜಂಬೂಸವಾರಿ ವಿಜೇತ ಸ್ತಬ್ಧಚಿತ್ರಗಳಿಗೆ ಬಹುಮಾನ



ಮೈಸೂರು,ನ.8(ಎಂಟಿವೈ)–ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿ ಜನಾಕರ್ಷಣೀಯ ಕೇಂದ್ರ ಬಿಂದುವಾಗಿ ಬಹುಮಾನ ಬಳಸಿದ ಸ್ತಬ್ಧಚಿತ್ರಗಳಿಗೆ ಬಹುಮಾನ ವಿತರಿಸಲಾಯಿತು.

ದಸರಾ ಸ್ತಬ್ಧಚಿತ್ರ ಉಪಸಮಿತಿ ವತಿಯಿಂದ ಬಂಡಿಪಾಳ್ಯದ ವರ್ತಕರ ಭವನದಲ್ಲಿ ಆಯೋಜಿಸಿದ್ದ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿಜೇತ ಜಿಲ್ಲೆಗಳ ಅಧಿಕಾರಿಗಳು ಆಗಮಿಸಿ, ಬಹುಮಾನ ಸ್ವೀಕರಿಸಿದರು. ನಡೆಯಿತು. ಈ ಬಾರಿ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿದ 49 ಸ್ತಬ್ಧಚಿತ್ರಗಳಲ್ಲಿ ಜಿಲ್ಲಾ ಪಂಚಾಯಿತಿ ವಿಭಾಗದಲ್ಲಿ ಧಾರವಾಡ, ಚಿಕ್ಕಮಗಳೂರು, ಚಾಮರಾಜನಗರ ಉತ್ತಮ, ಹಾಸನ, ಶಿವಮೊಗ್ಗ ಮತ್ತು ಮಂಡ್ಯ ಪ್ರೋತ್ಸಾಹದಾಯಕ, ನಿಗಮ ಮಂಡಳಿ ವಿಭಾಗದಿಂದ ವಾರ್ತಾ ಇಲಾಖೆ, ಕಾವೇರಿ ನೀರಾವರಿ ನಿಗಮ ಉತ್ತಮ, ಕೆಎಂಎಫ್ ಅಮುಲ್ ಪ್ರೋತ್ಸಾಹಕ ಪ್ರಶಸ್ತಿ ಪಡೆದುಕೊಂಡಿತ್ತು. ಈ ಹಿನ್ನೆಲೆಯಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಸ್ತಬ್ಧಚಿತ್ರ ನೋಡಲ್ ಅಧಿಕಾರಿಗಳಿಗೆ ಪ್ರಮಾಣ ಪತ್ರ, ಟ್ರೋಫಿ ನೀಡಿ ಸನ್ಮಾನಿಸಲಾಯಿತು.

ಸ್ತಬ್ಧಚಿತ್ರ ಉಪಸಮಿತಿ ಅಧ್ಯಕ್ಷ ಅಹಿಂದ ಜವರಪ್ಪ ಮಾತನಾಡಿ, ಜಂಬೂಸವಾರಿ ಮೆರವಣಿಗೆಯಲ್ಲಿ ಜನರ ಕಣ್ಮನ ಸೆಳೆಯುವುದರ ಜತೆಗೆ ಸರ್ಕಾರದ ಸಾಧನೆ ಬಿಂಬಿಸಿದ ಸ್ತಬ್ಧಚಿತ್ರಗಳಿಗೆ ಪ್ರೋತ್ಸಾಹ ನೀಡಲು ಬಹುಮಾನ ವಿತರಿಸಲಾಗಿದೆ. 49 ಸ್ತಬ್ಧಚಿತ್ರಗಳಿಗೂ ತಲಾ 10 ಸಾವಿರ ರೂ. ಗೌರವಧನ ನೀಡಲಾಗಿದೆ. ಸ್ತಬ್ಧಚಿತ್ರವನ್ನು ಜಿಲ್ಲಾ ಪಂಚಾಯಿತಿ ನಿರ್ಮಿಸುತ್ತದೆ. ಟೆಂಡರ್ ಮೂಲಕ ಕಲಾವಿದರಿಗೆ ಅವಕಾಶ ನೀಡಲಾಗುತ್ತದೆ. ಹಾಗಾಗಿ ಕಲಾವಿದರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಮುಂದಿನ ದಿನಗಳಲ್ಲಿ ಕಲಾವಿದರನ್ನು ಗೌರವಿಸಲಾಗುವುದು ಎಂದು ತಿಳಿಸಿದರು.

ಈ ಬಾರಿ ನಮ್ಮ ಉಪ ಸಮಿತಿಗೆ ಸಿಕ್ಕ ಕಡಿಮೆ ಅವಧಿಯಲ್ಲಿಯೇ ಉತ್ತಮ ವಾದ ಸ್ತಬ್ಧಚಿತ್ರ ರಚಿಸಿ, ಮೆರವಣಿಗೆ ಯುದ್ದಕ್ಕೂ ನೆರೆದಿದ್ದ ಅಪಾರ ಸಂಖ್ಯೆ ಜನರಿಗೆ ಉತ್ತಮ ಸಂದೇಶ ನೀಡುವಲ್ಲಿ ಯಶಸ್ವಿ ಯಾಗಿದ್ದೇವೆ. ಒಂದೊಂದು ಸ್ತಬ್ಧಚಿತ್ರವೂ ಕಲಾತ್ಮಕತೆಯಿಂದ ಕೂಡಿದ್ದು, ಮೆಚ್ಚುಗೆಗೆ ಪಾತ್ರವಾಗಿವೆ ಎಂದರು.

ಚಾಮರಾಜನಗರ ಜಿಲ್ಲಾ ಪಂಚಾಯಿತಿ ಸ್ತಬ್ಧಚಿತ್ರದ ನೋಡಲ್ ಅಧಿಕಾರಿ ರಾಜೇಂದ್ರ ಪ್ರಸಾದ್ ಮಾತನಾಡಿ, 12ನೇ ಬಾರಿಗೆ ದಸರಾದಲ್ಲಿ ಭಾಗವಹಿಸಿದ್ದು, ವಿಶಿಷ್ಟ ಅನುಭವವಿದು. ದೂರದರ್ಶನದ ಮೂಲಕ ವಿದೇಶಿಗರು ಸ್ತಬ್ಧಚಿತ್ರ ವೀಕ್ಷಿಸಿದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಧಾರವಾಡದ ಜಿಪಂ ನೋಡಲ್ ಅಧಿಕಾರಿ ಶಿವನಾಂದಕುಮಾರ್ ಮಾತನಾಡಿ, 2 ವರ್ಷಕ್ಕೂ ಮೊದಲು ವಾಸ್ತವ್ಯಕ್ಕೆ ತೊಂದರೆಯಾಗಿತ್ತು. ಈ ವರ್ಷ ಎಲ್ಲರ ಸಹಕಾರದಿಂದ ಜನರ ಗಮನಸೆಳೆಯುವ ಸ್ತಬ್ಧಚಿತ್ರ ನಿರ್ಮಿಸಲು ಸಾಧ್ಯವಾಯಿತು ಎಂದರು. ಉಪವಿಶೇಷಾಧಿಕಾರಿ ಮೈಸೂರು ಜಿಪಂ ಸಿಪಿಓ ರಾಜಗೋಪಾಲ್, ಕಾರ್ಯಾಧ್ಯಕ್ಷೆ ಮೇಘಲಾ, ಕಾರ್ಯದರ್ಶಿ ರಾಘವೇಂದ್ರ, ಉಪಾಧ್ಯಕ್ಷರಾದ ಎನ್.ಭಾಸ್ಕರ್, ಚೇತನ್, ಸದಸ್ಯ ಯೋಗೇಶ್, ಕುಮಾರ್ ಇದ್ದರು.

ಜಲ ದೀಪಾವಳಿ ಅಭಿಯಾನ: ನೀರಿನ ಮಿತ ಬಳಕೆ ಜಾಗೃತಿ



ಮೈಸೂರು, ನ.8(ಎಂಟಿವೈ)– ಜೀವಜಲ ನೀರಿನ ಮಹತ್ವ ಸಾರುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆಯು 'ಡೇ–ನಲ್ಮ್' ಯೋಜನೆ ಸ್ವ–ಸಹಾಯ ಸಂಘದ ಮಹಿಳೆಯರಿಗಾಗಿ ಆಯೋಜಿಸಿದ್ದ 'ಜಲ ದೀಪಾವಳಿ', 'ಮಹಿಳೆಯರಿಗಾಗಿ ನೀರು, ನೀರಿಗಾಗಿ ಮಹಿಳೆಯರು' ಕುರಿತ ಕಾರ್ಯಾಗಾರದಲ್ಲಿ ಹಲವು ಮಹಿಳೆಯರು ಪಾಲ್ಗೊಂಡಿದ್ದರು.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ಮಧ್ಯಾಹ್ನ ನಡೆದ ಕಾರ್ಯಾಗಾರದಲ್ಲಿ ಮೈಸೂರು ನಗರದ ವಿವಿಧ ಬಡಾವಣೆಗಳಿಂದ ಮಹಿಳೆಯರ ಸ್ವ–ಸಹಾಯ ಸಂಘದ ಪ್ರತಿನಿಧಿಗಳು ಪಾಲ್ಗೊಂಡು ನೀರಿನ ಮಹತ್ವ ಸಾರುವ ಪ್ರಬಂಧ ಬರೆದು ಗಮನ ಸೆಳೆದರು.

ಕಾರ್ಯಕ್ರಮವನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಿ ಮಾತನಾಡಿ, ನೀರಿನ ಸಂರಕ್ಷಣೆಯ ಕಾಳಜಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ದೀಪಾವಳಿ ಹಬ್ಬದ ಅಂಗವಾಗಿ ಜಲ ದೀಪಾವಳಿ ಅಭಿಯಾನಕ್ಕೆ ಕರೆ ನೀಡಿದ್ದಾರೆ. ನಗರಪಾಲಿಕೆ ವತಿಯಿಂದ ಮೂರು ದಿನಗಳು ಸ್ವ ಸಹಾಯ ಸಂಘದ ಮಹಿಳೆಯರಿಗೆ ಜಲ ಸಂರಕ್ಷಣೆ ಕುರಿತು ಮೌಲ್ಯಯುತ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮಹಿಳೆಯರು ನೀರನ್ನು ಮಿತವಾಗಿ ಬಳಸಬೇಕು. ಕೆಲವರು ನೀರನ್ನು ಪೋಲು ಮಾಡುತ್ತಿರುವುದು ಬೇಸರದ ಸಂಗತಿ. ನೀರನ್ನು ಸಂರಕ್ಷಿಸಿದರೆ ಮಾತ್ರ ನಾವು ಉಳಿಯಲು ಸಾಧ್ಯ. ನೀರಿನ ಸಂರಕ್ಷಣೆಯಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದೆ. ಹೀಗಾಗಿ ನಗರದ ವಿವಿಧ ಸ್ವ ಸಹಾಯ ಸಂಘಗಳ 90 ಮಹಿಳೆಯರಿಗೆ ಕಾರ್ಯಾಗಾರ ನಡೆಸಲಾಗುತ್ತಿದೆ. ಈ ಮಹಿಳೆಯರು ನಂತರದ ದಿನಗಳಲ್ಲಿ ತಮ ನೆರೆ–ಹೊರೆಯವರಿಗೆ ನೀರಿನ ಮಹತ್ವ ತಿಳಿಸಬೇಕು ಎಂದರು.

ಮಹಾರಾಣಿ ಕಾಲೇಜಿನ ಭೌತಶಾಸ್ತ್ರ ಪ್ರಾಧ್ಯಾಪಕ ಡಾ.ಹೇಮಚಂದ್ರ ಮಾತನಾಡಿ, ನೀರಿನ ಸಂರಕ್ಷಣೆಯಲ್ಲಿ ಪುರುಷರ ಪಾತ್ರ ಶೂನ್ಯ. ನೀರು ಅಮೃತಕ್ಕೆ ಸಮ ಎನ್ನುತ್ತೇವೆ. ದೇಶದಲ್ಲಿ ಈ ಹಿಂದೆ ಇದ್ದಂತೆ ನೀರಿನ ಪರಿಸ್ಥಿತಿ ಇಲ್ಲ. ಪ್ರಸ್ತುತ ದೇಶದ ಬಹುತೇಕ ಭಾಗಗಳಲ್ಲಿ ನೀರಿನ ಅಭಾವ ಸೃಷ್ಟಿಯಾಗಿದೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ರಂಗೋಲಿ ಬಿಡುವ ನೆಪದಲ್ಲಿ ರಸ್ತೆಗೆ ನೀರು ಚೆಲ್ಲಿ ವ್ಯರ್ಥ ಮಾಡುತ್ತಿದ್ದಾರೆ. ನಲ್ಲಿಯನ್ನು ಸರಿಯಾಗಿ ನಿಲ್ಲಿಸದೇ, ಸೋರಿಕೆಯಿಂದ ದಿನಕ್ಕೆ ನಲ್ಲಿಯೊಂದರಿಂದ 13.5 ಲೀಟರ್ ನೀರು ವ್ಯರ್ಥವಾಗಲಿದೆ. ಪ್ರಸ್ತುತ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರು ಇಲ್ಲದಂತಾಗಿದೆ. ಆದರೂ ನಮಗೆ ನೀರಿನ ಮಹತ್ವ ತಿಳಿಯುತ್ತಿಲ್ಲ. ನದಿಗಳು ಮಲಿನಗೊಳ್ಳುತ್ತಿವೆ. ಮುಂದಿನ ಪೀಳಿಗೆಗಾಗಿ ನಾವು ನೀರನ್ನು ಸಂರಕ್ಷಿಸಬೇಕು ಎಂದು ಮನವರಿಕೆ ಮಾಡಿದರು. ನಗರಪಾಲಿಕೆ ಆಯುಕ್ತ ಅಬ್ದುಲ್ ಉರ್ ರೆಹಮಾನ್ ಷರೀಫ್, ಎಲ್ಲರೂ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ಅರಿಯಬೇಕೆ ವಿನಹಃ ನಲ್ಲಿಯಿಂದ ನೀರನ್ನ ಅರಿಯ ಬಿಡಬಾರದು. ನೀರು ಮೌಲ್ಯವಾದದ್ದು, ನೀರಿಗೆ ಬೆಲೆ ಕಟ್ಟಲಾಗದು. ಹೀಗಾಗಿ ನೀರನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಬೇಕು. ನೀರಿನ ಸಂರಕ್ಷಣೆಗಾಗಿ ನಗರಪಾಲಿಕೆ ಸದಾ ಸನ್ನದ್ಧವಾಗಿದೆ. ಜನರಲ್ಲಿ ಜಾಗೃತಿ ಮೂಡಿಸಲು ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದರು.

ಸಭಾ ಕಾರ್ಯಕ್ರಮದ ಬಳಿಕ ಪ್ರಬಂಧ ಸ್ಪರ್ಧೆ ಮತ್ತು ಕಿರು ಪರೀಕ್ಷೆ ನಡೆಸಲಾಯಿತು. ಅಲ್ಲದೆ, ಕಾರ್ಯಕ್ರಮದ ಸ್ಮರಣಾರ್ಥ ಗಿಡ ನೆಡಲಾಯಿತು. ಈ ಸಂದರ್ಭದಲ್ಲಿ ಉಪ ಮೇಯರ್ ಡಾ.ಜಿ.ರೂಪ, ಉಪ ಆಯುಕ್ತೆ ಎಂ.ರೂಪ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

K-SET ಪರೀಕ್ಷೆ ಡಿ.31ಕ್ಕೆ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ(KEA) ವತಿಯಿಂದ ನಡೆಸಲ್ಪಡುವ, 26ರಂದು ನಿಗದಿಯಾಗಿದ್ದ ಸಹಾಯಕ ಪ್ರಾಧ್ಯಾಪಕ ಅರ್ಹತಾ ಪರೀಕ್ಷೆ ಮುಂದೂಡಲಾಗಿದೆ. ಈ ತಿಂಗಳಾಂತ್ಯ ಅಂದರೆ ನ.26ರಂದು ನಿಗದಿ ಯಾಗಿದ್ದ ಪರೀಕ್ಷೆಯನ್ನು ಮುಂದೂಡಲಾಗಿದ್ದು ಡಿ.31ರಂದು ನಡೆಸಲು ತಾತ್ಕಾಲಿಕ ದಿನಾಂಕವನ್ನು ನಿಗದಿ ಮಾಡಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಪ್ರಕಟಣೆ ಹೊರಡಿಸಿದ್ದಾರೆ. ಅಂದಹಾಗೆ ನಿಖರವಾಗಿ ದಿನಾಂಕವನ್ನು ತಿಳಿಸದ ಕಾರಣ ತಾತ್ಕಾಲಿಕವಾಗಿ ನಿಗದಿಪಡಿಸಿದ ದಿನಾಂಕವೂ ಮುಂದೂಡಬಹುದು. ಹೀಗಾಗಿ ಅಭ್ಯರ್ಥಿಗಳು KEA ವೆಬ್‌ಸೈಟ್ ಅನ್ನು ಪರಿಶೀಲಿಸುತ್ತಿದ್ದರೆ ಉತ್ತಮ.

ಶಾಲಾ ಆವರಣದಲ್ಲಿ ಅಪಾಯಕಾರಿ ಗುಂಡಿ



ಮೈಸೂರು, ನ.8(ಎಸ್‌ಪಿಎನ್)– ಮಹಾರಾಜ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ನಿತ್ಯ ನೂರಾರು ವಿದ್ಯಾರ್ಥಿಗಳು ಓಡಾಡುವ ಜಾಗದಲ್ಲಿ ತೆರೆದ ಯುಜಿಡಿ ಗುಂಡಿ ಅಪಾಯಕ್ಕೆ ಆಹ್ವಾನಿಸುತ್ತಿದೆ.

ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಶಾಲಾ ಮುಖ್ಯಸ್ಥರು ಪ್ಲಾಸ್ಟಿಕ್ ಚೀಲದಿಂದ ಮುಚ್ಚಿರುವುದು ಬಿಟ್ಟರೆ, ಈ ಸಮಸ್ಯೆ ಪರಿಹರಿಸುವ ಕುರಿತು ಕ್ರಮ ವಹಿಸಿಲ್ಲ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಲವು ತಿಂಗಳಿಂದ ಇದೇ ಪರಿಸ್ಥಿತಿ ಇದ್ದು ವಿದ್ಯಾರ್ಥಿಗಳು, ಯುವಕರು ಶಾಲಾ ಕ್ರೀಡಾಂಗಣದಲ್ಲಿ ಆಟವಾಡಲು ನಿತ್ಯ ಆಗಮಿಸುತ್ತಾರೆ. ಅಪ್ಪಿ–ತಪ್ಪಿ ಗುಂಡಿ ಒಳಗೆ ಬಿದ್ದರೆ, ಏನು ಗತಿ. ಇಲ್ಲಿನ ಶಿಕ್ಷಕರು ಸಂಬಂಧಪಟ್ಟ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ತೆರೆದ ಯುಜಿಡಿ ಗುಂಡಿ ಮುಚ್ಚಲು ಕ್ರಮವಹಿಸಿಲ್ಲ. ಅಲ್ಲದೆ, ಈ ಗುಂಡಿ ಅನುಪಯುಕ್ತವಾಗಿದ್ದರೆ ಮುಚ್ಚಿ ವಿದ್ಯಾರ್ಥಿಗಳ ಸುರಕ್ಷತೆಯತ್ತ ಗಮನ ಹರಿಸಬೇಕು ಎಂದು ಕ್ರೀಡಾಪಟು ಕಿರಣ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಈ ಕುರಿತು ಇಲ್ಲಿನ ಮುಖ್ಯ ಶಿಕ್ಷಕರಿಗೆ ಗಮನಕ್ಕೆ ತಂದಾಗ ಈ ಗುಂಡಿ ಮೇಲೆ ಪ್ಲಾಸ್ಟಿಕ್ ಚೀಲ ಮುಚ್ಚಿ ಸುಮ್ಮನಾಗಿದ್ದಾರೆ. ಶಾಶ್ವತವಾಗಿ ಯುಜಿಡಿ ಗುಂಡಿ ಮುಚ್ಚಲು ಕ್ರಮವಹಿಸಿಲ್ಲ ಎಂದು ಕಿಡಿಕಾರಿದ ಕಿರಣ್, ಈ ಪ್ರೌಢಶಾಲೆಯಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದು, ಅವರ ಸುರಕ್ಷತೆ ಬಗ್ಗೆ ಶಿಕ್ಷಕರು ಕಿಂಚಿತ್ತು ಗಮನಹರಿಸುತ್ತಿಲ್ಲ. ಇನ್ನು ಗುಣಮಟ್ಟದ ಶಿಕ್ಷಣ ನೀಡಲು ಇಲ್ಲಿನ ಶಿಕ್ಷಕರು ಮುಂದಾಗುವವರೇ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ಟಿಕೆಟ್ ವಂಚನೆ ಹಗರಣ

ಚೈತ್ರಾ ಕುಂದಾಪುರ ಗ್ಯಾಂಗ್ ವಿರುದ್ಧ ಪೊಲೀಸರಿಂದ ಚಾರ್ಜ್‌ಶೀಟ್ ಸಲ್ಲಿಕೆ

ಬೆಂಗಳೂರು: ಚೈತ್ರಾ ಕುಂದಾಪುರ ಗ್ಯಾಂಗ್‌ನಿಂದ ಉದ್ಯಮಿಗೆ ಕೋಟ್ಯಾಂತರ ರೂ. ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ 9 ಆರೋಪಿಗಳ ವಿರುದ್ಧ ಸಿಸಿಬಿ ಚಾರ್ಜ್‌ಶೀಟ್ ಸಲ್ಲಿಸಿದೆ. 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ. 75 ಮಂದಿ ಸಾಕ್ಷಿಗಳ ಹೇಳಿಕೆ ದಾಖಲಿಸಿ ಸುಮಾರು 800 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದೆ.

ಕೇಂದ್ರ ನಗರ ಅಪರಾಧ ವಿಭಾಗ ಮೊದಲ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ಗೆ ಚಾರ್ಜ್ ಶೀಟ್ ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ 75 ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

4.11 ಕೋಟಿ ನಗದು ವಶಪಡಿಸಿಕೊಂಡಿರುವ ಪೊಲೀಸರು ಆರೋಪಿಗಳ ವಿರುದ್ಧ ಪ್ರಾಥಮಿಕ, ಸಾಂದರ್ಭಿಕ ಹಾಗೂ ಡಿಜಿಟಲ್ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದರು. ಉದ್ಯಮಿ ಗೋವಿಂದ ಬಾಬು ಪೂಜಾರಿ 10 ವಿಡಿಯೋ ಹಾಗೂ ಆಡಿಯೋ ದಾಖಲೆಗಳನ್ನು ಪೊಲೀಸರಿಗೆ ಒಪ್ಪಿಸಿದ್ದರು. ಪ್ರಕರಣ ಎಲ್ಲಾ ಆರೋಪಿಗಳು ಸದ್ಯ ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿದ್ದಾರೆ. ಹಗರಣದ ಸೂಕ್ಷ್ಮತೆಯನ್ನು ಪರಿಗಣಿಸಿ ನ್ಯಾಯಾಲಯಗಳು ಆರೋಪಿಗಳಿಗೆ ಇದುವರೆಗೆ ಜಾಮೀನು ನಿರಾಕರಿಸಿದೆ.

ಚೈತ್ರಾ ಕುಂದಾಪುರ ಅವರಿಂದ ಸುಮಾರು 17 ಟಿಕೆಟ್ ಆಕಾಂಕ್ಷಿಗಳು 185 ಕೋಟಿ ರು ಹಣ ಕಳೆದುಕೊಂಡಿರುವ ಬಗ್ಗೆ ನನ್ನ ಬಳಿ ಮಾಹಿತಿ ಇದೆ ಎಂದು ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಚೈತ್ರಾ ಕುಂದಾಪುರಗೆ ಬಿಜೆಪಿಯ ಉನ್ನತ ನಾಯಕರೊಂದಿಗೆ ನೇರ ಸಂಪರ್ಕವಿದ್ದು ಇದರ ಬಗ್ಗೆ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

ಜಯಪುರದಲ್ಲಿ ಬೋನಿಗೆ ಬಿದ್ದ ಚಿರತೆ



ಮೈಸೂರು, ನ.8(ಎಂಟಿವೈ)– ತಾಲೂಕಿನ ಜಯಪುರ ಗ್ರಾಮದಲ್ಲಿ 7 ವರ್ಷದ ಗಂಡು ಚಿರತೆ ಅರಣ್ಯ ಇಲಾಖೆ ಇಟ್ಟಿದ್ದ ಬೋನ್‌ಗೆ ಸೆರೆಸಿಕ್ಕಿದೆ.

ಕಳೆದ 3 ದಿನದ ಹಿಂದಷ್ಟೇ ಎರಡು ಮೇಕೆ ಬಲಿ ಪಡೆದಿದ್ದ ಚಿರತೆ ಸೆರೆಗೆ ಗ್ರಾಮಸ್ಥರು ಮನವಿ ಮಾಡಿದರು. ಕಳೆದ ರಾತ್ರಿ ಜಯಪುರದಿಂದ ಅರಸಿನಕೆರೆಗೆ ಹೋಗುವ ದಾರಿಯಲ್ಲಿರುವ ಹೊಸಕೆರೆ ಏರಿ ಬಳಿ ಅರಣ್ಯ ಸಿಬ್ಬಂದಿ ಬೋನ್ ಇಟ್ಟಿದ್ದರು. ರಾತ್ರಿ ಇಟ್ಟ ಬೋನಿಗೆ ಬೆಳಗಿನ ಜಾವ 7 ವರ್ಷದ ಚಿರತೆ ಸೆರೆ ಸಿಕ್ಕಿದೆ. ಇದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಆರ್‌ಎಫ್‌ಓ ಕೆ.ಸುರೇಂದ್ರ, ಡಿಆರ್‌ಎಫ್‌ಓ ಮೋಹನ್, ಸಿಬ್ಬಂದಿ ರಾಜೇಗೌಡ ಸೇರಿದಂತೆ ಇನ್ನಿತರರು ತೆರಳಿ ಬೋನಿನಲ್ಲಿದ್ದ ಚಿರತೆಯನ್ನು ಅರಣ್ಯ ಭವನಕ್ಕೆ ತಂದರು. ಬಳಿಕ ಪಶುವೈದ್ಯರಿಂದ ತಪಾಸಣೆಗೊಳಪಡಿಸಿ, ಚಿರತೆ ಆರೋಗ್ಯದಿಂದ ಕೂಡಿರುವುದು ದೃಢಪಟ್ಟಿದ್ದರಿಂದ ಅದಕ್ಕೆ ಮೈಕ್ರೋಚಿಪ್ ಅಳವಡಿಸಿ, ಕಿವಿಗೆ ಗುರುತು ಮಾಡಿ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲಾಯಿತು.

7 ತಿಂಗಳಲ್ಲಿ 17 ಚಿರತೆ ಸೆರೆ

ಮೈಸೂರು ಭಾಗದಲ್ಲಿ ಚಿರತೆ ಹಾವಳಿ ದೂರು ಹೆಚ್ಚಾಗುತ್ತಲೇ ಇದ್ದು, ಸ್ಥಳೀಯರು ನೀಡಿದ ದೂರನ್ನು ಆಧರಿಸಿ ಅರಣ್ಯ ಇಲಾಖೆ ವಿವಿಧೆಡೆ ಇಟ್ಟಿದ್ದ ಬೋನ್‌ಗೆ ಕಳೆದ 7 ತಿಂಗಳಲ್ಲಿ 17 ಚಿರತೆ ಸೆರೆ ಸಿಕ್ಕಿವೆ. ಏ.1ರಿಂದ ನ.7ರವರೆಗೆ ಸೆರೆ ಸಿಕ್ಕ 17 ಚಿರತೆಗಳಲ್ಲಿ ಗಾಯಗೊಂಡಿದ್ದ ಸ್ಥಿತಿಯಲ್ಲಿದ್ದ 3 ಚಿರತೆಗಳನ್ನು ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿದೆ. ಉಳಿದ 14 ಚಿರತೆಗಳನ್ನು ಮೈಕ್ರೋಚಿಪ್ ಅಳವಡಿಸಿ, ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲಾಗಿದೆ. –ಡಾ.ಬಸವರಾಜು, ಡಿಸಿಎಫ್



ಡೆತ್‌ನೋಟ್ ಬರೆದಿಟ್ಟು ನಾಪತ್ತೆಯಾಗಿದ್ದ ಮಾಜಿ ಸೈನಿಕ ಶವವಾಗಿ ಪತ್ತೆ

ಮೃತದೇಹ ಪತ್ತೆ ಹಚ್ಚಿದ ಮಂಗಳೂರಿನ ಮುಳುಗು ತಜ್ಞ

• ಆತ್ಮಹತ್ಯೆಗೆ ಮಹಿಳೆ, ಅವರ ಮನೆಯವರು ಕಾರಣ– ಡೆತ್‌ನೋಟ್ • ಮಾಜಿ ಸೈನಿಕನ ಪತ್ನಿಯಿಂದ ಹನಿಟ್ರ್ಯಾಪ್ ದೂರು ದಾಖಲು





ಮಡಿಕೇರಿ, ನ.8– ಮನೆಯಲ್ಲಿ ಡೆತ್ ನೋಟ್ ಬರೆದಿಟ್ಟು ನಾಪತ್ತೆಯಾಗಿದ್ದ ಮಾಜಿ ಸೈನಿಕ, ನಗರದ ಉಕ್ಕುಡ ನಿವಾಸಿ ಸಂದೇಶ್(38) ಶವವಾಗಿ ಪತ್ತೆಯಾಗಿದ್ದಾರೆ.

ಉಕ್ಕಡ ಪಂಪಿನ ಕೆರೆಯ ದಂಡೆ ಮೇಲೆ ಸಂದೇಶ್ ಅವರಿಗೆ ಸೇರಿದ ಚಪ್ಪಲಿ ಹಾಗೂ ವಾಚ್, ಮೊಬೈಲ್ ಕಂಡು ಬಂದ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳ ಹಾಗೂ ಪೊಲೀಸ್ ಸಿಬ್ಬಂದಿಗಳು ಬುಧವಾರ ಬೆಳಗ್ಗೆ 9.30 ಗಂಟೆ ಯಿಂದ ಸಂಜೆವರೆಗೂ ಕೆರೆಯಲ್ಲಿ ಶೋಧ ನಡೆಸಿದರು.

ಮುಳುಗು ತಜ್ಞರಿಂದ ಶೋಧ: ನೀರಿನಲ್ಲಿ ಮುಳುಗಿ ಮೃತಪಟ್ಟ ನೂರಾರು ಮೃತದೇಹಗಳನ್ನು ನೀರಿನ ಆಳದಿಂದ ಹೊರ ತೆಗೆಯುವಲ್ಲಿ ತಜ್ಞರಾಗಿ ರುವ ಕುಶಾಲನಗರದ ರಾಮಕೃಷ್ಣ, ಅಗ್ನಿಶಾಮಕ ದಳದ ಮುತ್ತಪ್ಪ, ಗರಗಂದೂರು ಲತೀಫ್ ಕೂಡ ಮಡಿಕೇರಿಗೆ ಆಗಮಿಸಿ ಪಂಪಿನ ಕೆರೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದರು. ಸಂಜೆ ಕತ್ತಲಿನವರೆಗೂ ನೀರಿನಲ್ಲಿ ಶೋಧ ನಡೆಸಿದರೂ ನೀರಿಗೆ ಧುಮುಕಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದ್ದ ಸಂದೇಶ್ ಅವರ ಯಾವುದೇ ಸುಳಿವು ಲಭ್ಯವಾಗಿರಲಿಲ್ಲ.

ಈಶ್ವರ್ ಮಲ್ಪೆ ಆಗಮನ: ಕೆರೆ 25 ರಿಂದ 30 ಅಡಿ ಆಳವಾಗಿದ್ದು ಹುಡುಕಾಟ ಕಷ್ಟಸಾಧ್ಯವಾದ ಹಿನ್ನೆಲೆಯಲ್ಲಿ ಮಂಗಳೂರಿನ ಆಳ ಸಮುದ್ರ ಮುಳುಗು ತಜ್ಞ ಈಶ್ವರ್ ಮಲ್ಪೆ ಅವರು ಕೂಡ ಮಡಿಕೇರಿಗೆ ಆಗಮಿಸಿದ್ದರು.ತಮ್ಮ ತಂಡದೊಂದಿಗೆ ಪಂಪಿನ ಕೆರೆಗೆ ಆಗಮಿಸಿದ ಈಶ್ವರ್ ಮಲ್ಪೆ ರಾತ್ರಿ ವೇಳೆ ಶೋಧ ಕಾರ್ಯಾಚರಣೆ ನಡೆಸಿದರು. ಆಕ್ಸಿಜನ್ ಕಿಟ್, ನೀರಿನ ಆಳದಲ್ಲೂ ಉರಿಯುವ ಟಾರ್ಚ್ ಸಹಿತ ಕೆರೆಯಲ್ಲಿ ಶೋಧ ಕಾರ್ಯ ನಡೆಸಲಾಯಿತು.

ಕಾರ್ಯಾಚರಣೆಗೆ ಅನುಕೂಲವಾಗುವಂತೆ ಕೆರೆಯ ಬಳಿ ಬೆಳಕಿನ ವ್ಯವಸ್ಥೆಯನ್ನೂ ಮಾಡಲಾಗಿತ್ತು. ರಾತ್ರಿ 8.45ರ ವೇಳೆಗೆ ಮಾಜಿ ಯೋಧ ಸಂದೇಶ್ ಮೃತದೇಹವನ್ನು ಈಶ್ವರ್ ಮಲ್ಪೆ ತಂಡ ನೀರಿನಿಂದ ಹೊರ ತೆಗೆಯುವಲ್ಲಿ ಸಫಲವಾಗಿದೆ. ಆ ಮೂಲಕ ನಿವೃತ್ತ ಯೋಧ ಸಂದೇಶ್ ನಾಪತ್ತೆ ಪ್ರಕರಣ ದುರಂತ ಅಂತ್ಯ ಕಂಡಿದೆ. ನಾಪತ್ತೆಯಾಗಿದ್ದ ಸಂದೇಶ್ ಪತ್ನಿ ಮಕ್ಕಳು ಮತ್ತು ಕುಟುಂಬಸ್ಥರ ರೋದನೆ ಮುಗಿಲು ಮುಟ್ಟಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು. ಇದರೊಂದಿಗೆ ಸಂದೇಶ್ ಬರೆದಿರುವ ಡೆತ್‌ನೋಟ್ ಬಗ್ಗೆಯೂ ಪೊಲೀಸ್ ಇಲಾಖೆ ಸಮಗ್ರ ತನಿಖೆ ನಡೆಸಬೇಕಿದೆ ಎಂದು ಸಾರ್ವಜನಿಕ ವಲಯದಿಂದ ಆಗ್ರಹಗಳು ಕೇಳಿ ಬಂದಿವೆ.

ಹನಿಟ್ರ್ಯಾಪ್ ಆರೋಪ: ಇನ್ನು ನಿವೃತ್ತ ಯೋಧ ಸಂದೇಶ್ ನಾಪತ್ತೆಯಾಗುವ ಮುನ್ನ ಡೆತ್‌ನೋಟ್ ಬರೆದಿಟ್ಟಿದ್ದು, ಪೊಲೀಸರು ಅದನ್ನು ವಶಕ್ಕೆ ಪಡೆದಿದ್ದಾರೆ. ಡೆತ್‌ನೋಟ್‌ನಲ್ಲಿ ನನ್ನ ಸಾವಿಗೆ ಜೀವಿತ ಎಂಬ ಮಹಿಳೆ ಕಾರಣ ಎಂದು ಉಲ್ಲೇಖಿಸಿದ್ದಾರೆ. ಪ್ರೀತಿ ಎಂದು ಹನಿಟ್ರ್ಯಾಪ್ ಮಾಡಿ ನನ್ನ ಬ್ಲಾಕ್‌ಮೇಲ್ ಮಾಡಿದ್ದಾರೆ. ಜೊತೆಗೆ ಆಕೆಯ ತಾಯಿ ಹಾಗೂ ತಂಗಿ ಕೂಡ ಬ್ಲಾಕ್‌ಮೇಲ್ ಮಾಡಿದ್ದಾರೆ. ಹಾಗೆ ಆಕೆಯ ಪರಿಚಯಸ್ಥರು ಕೂಡ ನನಗೆ ಟಾರ್ಚರ್ ಮಾಡಿದ್ದಾರೆ ಎಂದು ಡೆತ್‌ನೋಟ್‌ನಲ್ಲಿ ತಿಳಿಸಿದ್ದರು.

ನಿನ್ನೆ ದಿನ ಮುಂಜಾನೆ ವಾಯು ವಿಹಾರಕ್ಕೆಂದು ಮನೆಯಿಂದ ಹೊರ ಹೋದ ಸಂದೇಶ್ ಕೊನೆಯದಾಗಿ ತನ್ನ ತಂಗಿಗೆ ಮೆಸೇಜ್ ಮಾಡಿದ್ದು, ನನ್ನ ಮೊಬೈಲ್ ಹಾಗೂ ಚಪ್ಪಲಿ ಪಂಪಿನ ಕೆರೆಯ ಬಳಿ ಇರುವುದಾಗಿ ತಿಳಿಸಿದ್ದರು. ಮೊಬೈಲ್ ಲೊಕೇಶನ್ ಆಧರಿಸಿ ಪೊಲೀಸರು ಹುಡುಕಾಟ ನಡೆಸಿದ್ದು ಆತ ಹೇಳಿದ ಜಾಗದಲ್ಲೇ ಸಂದೇಶ್‌ನ ವಸ್ತುಗಳು ಪತ್ತೆಯಾಗಿದ್ದವು. ಮಾತ್ರವಲ್ಲದೇ, ಆತ ಪಂಪಿನ ಕೆರೆಗೆ ಇಳಿದಿರುವ ಕುರುಹುಗಳು ಕಂಡು ಬಂದಿತ್ತು.

> ಸಂದೇಶ್ ಅವರ ಪತ್ನಿ ನಗರ ಠಾಣೆಯಲ್ಲಿ ತಮ್ಮ ಪತಿಯನ್ನು ಹನಿಟ್ರ್ಯಾಪ್ ಮಾಡಿ ಹಣ ವಸೂಲಿಗೆ ಒತ್ತಡ ಹಾಕಿರುವುದಾಗಿ ದೂರು ದಾಖಲಿಸಿದ್ದಾರೆ. ಡೆತ್‌ನೋಟ್‌ನಲ್ಲೂ ಕೆಲವರ ಹೆಸರು ನಮೂದಿಸಲಾಗಿದೆ. ಈ ಕುರಿತು ಎಫ್‌ಐಆರ್ ದಾಖಲಿಸಲಾಗಿದ್ದು, ತನಿಖೆ ಮುಂದುವರೆದಿದೆ. ಸಂದೇಶ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಆಯಾಮಗಳಲ್ಲಿ ಏಕಕಾಲಕ್ಕೆ ತನಿಖೆ ನಡೆಸಲಾಗುತ್ತದೆ.
> - ಕೆ.ರಾಮರಾಜನ್, ಕೊಡಗು ಎಸ್.ಪಿ.

ಲೋನ್ ಕಟ್ಟಲು ಚಿನ್ನ ಅಡವಿಟ್ಟು ಹಣ ಕೊಂಡೊಯ್ಯುತ್ತಿದ್ದ ವ್ಯಕ್ತಿ ಗಮನ ಬೇರೆಡೆ ಸೆಳೆದು 2 ಲಕ್ಷ ದೋಚಿದ ಖದೀಮರು

ಖಾಸಗಿ ಹೋಟೆಲ್ ಸಿಸಿ ಕ್ಯಾಮರಾದಲ್ಲಿ ಕಳ್ಳರ ಕೈಚಳಕ ಸೆರೆ



ಮಡಿಕೇರಿ,ನ.8– ಬ್ಯಾಂಕ್‌ಗೆ ಲೋನ್ ಹಣ ಕಟ್ಟಲು ಚಿನ್ನ ಅಡವಿಟ್ಟು ಕೊಂಡೊಯ್ಯುತ್ತಿದ್ದ ಎರಡು ಲಕ್ಷ ಹಣವನ್ನು ಖದೀಮರು ಲಪಟಾಯಿಸಿದ ಘಟನೆ ಕುಶಾಲನಗರದಲ್ಲಿ ನಡೆದಿದೆ. ಮೂಲತಃ ಪಿರಿಯಾಪಟ್ಟಣ ತಾಲೂಕು ಬೆಣಗಾಲ್ ವ್ಯಾಪ್ತಿಯ ಆನಂದನಗರದ ಓಹಿಲೇಶ್(52) ಎಂಬುವರು ಹಣ ಕಳೆದುಕೊಂಡವರು.

ಕುಶಾಲನಗರದಲ್ಲಿ ಚಿನ್ನ ಅಡವಿಟ್ಟ ಓಹಿಲೇಶ್ ಅವರು ಆತ್ಮೀಯರೊಬ್ಬರನ್ನು ಸಾರಿಗೆ ಬಸ್ ನಿಲ್ದಾಣಕ್ಕೆ ಡ್ರಾಪ್ ಮಾಡಿ ದ್ವಿಚಕ್ರ ವಾಹನದಲ್ಲಿ ಬ್ಯಾಂಕ್‌ನ ಸಾಲ ತೀರಿಸಲು ಹಣ ಕೊಂಡೊಯ್ಯುತ್ತಿದ್ದ ಸಂದರ್ಭ ಹೊಂಚು ಹಾಕಿದ್ದ ಖದೀಮರ ತಂಡ, ನಗರದ ಅಯ್ಯಪ್ಪಸ್ವಾಮಿ ದೇವಾಲಯ ರಸ್ತೆ ಬಳಿ, ನಿಮ್ಮ ಹಣ ರಸ್ತೆಯಲ್ಲಿ ಬಿದ್ದಿದೆ ಎಂದು ಗಮನ ಬೇರೆಡೆ ಸೆಳೆದಿದ್ದಾರೆ.

ಈ ಸಂದರ್ಭ ಓಹಿಲೇಶ್ ಅವರು ಬೈಕ್‌ನಿಂದ ಕೆಳಗಿಳಿದು ರಸ್ತೆಯಲ್ಲಿ ಬಿದ್ದಿದ್ದ ಹಣವನ್ನು ಸಂಗ್ರಹಿಸುತ್ತಿದ್ದ ಸಂದರ್ಭ ಬೈಕ್‌ನ ಪರ್ಸ್‌ನಲ್ಲಿಟ್ಟಿದ್ದ ಪಾಸ್‌ಬುಕ್ ಸಹಿತ 2 ಲಕ್ಷ 9 ಸಾವಿರ ಹಣವನ್ನು ಖದೀಮರು ದೋಚಿ ಪರಾರಿಯಾಗಿದ್ದಾರೆ. ಸಮೀಪದ ಖಾಸಗಿ ಹೋಟೆಲ್‌ನ ಸಿ.ಸಿ. ಕ್ಯಾಮೆರಾದಲ್ಲಿ ಕಳ್ಳರ ಕೈಚಳಕದ ದೃಶ್ಯ ಸೆರೆಯಾಗಿದೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂದರ್ಭ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ನಾಲ್ವರ ತಂಡ ಈ ಕೃತ್ಯ ಎಸಗಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಹಣ ದೋಚಿದ ಪ್ರಕರಣವನ್ನು ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಕಳ್ಳರನ್ನು ಪತ್ತೆಹಚ್ಚಲು ಕುಶಾಲನಗರ ನಗರ ಮತ್ತು ಗ್ರಾಮಾಂತರ ಹಾಗೂ ಸುಂಟಿಕೊಪ್ಪ ಠಾಣಾಧಿಕಾರಿಗಳ ನೇತೃತ್ವದಲ್ಲಿ ಎರಡು ವಿಶೇಷ ತಂಡಗಳನ್ನು ರಚಿಸಿ, ಕಳ್ಳರ ಪತ್ತೆಗೆ ಬಲೆ ಬೀಸಲಾಗುವುದು ಎಂದು ಹೇಳಿದರು. ಈ ಸಂದರ್ಭ ಗ್ರಾಮಾಂತರ ಠಾಣಾಧಿಕಾರಿಗಳಾದ ಚಂದ್ರಶೇಖರ್, ಮೋಹನ್ ರಾಜ್ ಮತ್ತು ಜಿಲ್ಲಾ ಅಪರಾಧ ಪತ್ತೆ ದಳದ ಸಿಬ್ಬಂದಿಗಳು ಹಾಜರಿದ್ದರು.

ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಇಬ್ಬರು ಮಹಿಳೆಯರು ನಾಪತ್ತೆ



ಚೆಗನಿದೇವಿ



ಪುನಿತಾ

ಗೋಣಿಕೊಪ್ಪ, ನ.8– ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಇಬ್ಬರು ಮಹಿಳೆಯರು ನಾಪತ್ತೆಯಾಗಿದ್ದಾರೆ.

ಮೊದಲ ಪ್ರಕರಣದಲ್ಲಿ ಗೋಣಿಕೊಪ್ಪ ವೆಂಕಟಪ್ಪ ಬಡಾವಣೆ ನಿವಾಸಿ ಸಿ. ಶೇಖರ್ ಅವರ ಪತ್ನಿ ಚೆಗನಿದೇವಿ (28) ನ.6 ರಿಂದ ಕಾಣೆಯಾಗಿದ್ದಾರೆ. ಈ ಸಂಬಂಧ ಪತಿ ಶೇಖರ್ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ತಿತಿಮತಿ ರೇಷ್ಮೆಹಡ್ಲು ನಿವಾಸಿ ಜೇನುಕುರುಬರ ಸುರೇಶ ಎಂಬುವರ ಪತ್ನಿ ಪುನಿತಾ (24) ನ.5 ರಿಂದ ಕಾಣೆಯಾಗಿದ್ದಾರೆ. ಕನ್ನಡ, ಯರವ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋದವರು ಬಂದಿಲ್ಲ ಎಂದು ಪತಿ ಸುರೇಶ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರಿಬ್ಬರ ಬಗ್ಗೆ ಸುಳಿವು ಸಿಕ್ಕವರು 08274247333 ಸಂಖ್ಯೆ ಸಂಪರ್ಕಿಸುವಂತೆ ಗೋಣಿಕೊಪ್ಪ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಕೊಡಗು ಮುಸ್ಲಿಂ ಸೊಸೈಟಿಯಲ್ಲಿ ಭಾರಿ ಅವ್ಯವಹಾರ: ಸಿಐಡಿ ತನಿಖೆ ಆರಂಭ



ವಿರಾಜಪೇಟೆ,ನ.8– ವಿರಾಜಪೇಟೆಯಲ್ಲಿರುವ ಕೊಡಗು ಮುಸ್ಲಿಂ ಪತ್ತಿನ ಸಹಕಾರ ಸಂಘ ನಿಯಮಿತ ಸೊಸೈಟಿಯಲ್ಲಿ ನಡೆದಿದೆಯೆನ್ನಲಾದ ಅವ್ಯವಹಾರದ ಬಗ್ಗೆ ಸಿಐಡಿ ತನಿಖೆ ಆರಂಭಗೊಂಡಿದೆ.

ಸೊಸೈಟಿಯ ಅವ್ಯವಹಾರ ಕುರಿತು ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ (ಮೊಕದ್ದಮೆ ಸಂಖ್ಯೆ 61/2021) ಪ್ರಕರಣ ದಾಖಲಾಗಿದೆ. ದೂರಿನ ಮೇರೆಗೆ ಅಧಿಕಾರಿಗಳು ತನಿಖೆ ಆರಂಭಿಸಿ ಮಾಹಿತಿ ಸಂಗ್ರಹಿಸಿದ್ದಾರೆ.

ದಕ್ಷಿಣ ಕೊಡಗು ಮುಸ್ಲಿಂ ಪತ್ತಿನ ಸಹಕಾರ ಸಂಘ ನಿಯಮಿತ (ನಂ.283) ಸೊಸೈಟಿಯಲ್ಲಿ ಸುಮಾರು 5 ಕೋಟಿಗೂ ಹೆಚ್ಚು ಅವ್ಯವಹಾರ ನಡೆದಿದ್ದು, ತನಿಖೆ ನಡೆಸುವಂತೆ ಬ್ಯಾಂಕ್ ಗ್ರಾಹಕರು ಮತ್ತು ಠೇವಣಿದಾರರು 2021 ರಲ್ಲಿ ವಿರಾಜಪೇಟೆ ನಗರ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದ್ದರು. ನಗರ ಠಾಣಾಧಿಕಾರಿ ಹಾಗೂ ವೃತ್ತ ನಿರೀಕ್ಷಕರ ಸಮ್ಮುಖದಲ್ಲಿ ಪ್ರಾಥಮಿಕ ಹಂತದ ತನಿಖೆ ಕೈಗೊಂಡು ಹೆಚ್ಚಿನ ತನಿಖೆಗಾಗಿ ಸಿಐಡಿ ಘಟಕಕ್ಕೆ ಪ್ರಕರಣ ವರ್ಗಾವಣೆ ಮಾಡಲಾಗಿತ್ತು. ಮುಸ್ಲಿಂ ಪತ್ತಿನ ಬ್ಯಾಂಕ್‌ನಲ್ಲಿ ಸುಮಾರು 1,500 ಸದಸ್ಯರನ್ನು ಹೊಂದಿದ್ದು. ಸುಮಾರು 90 ವರ್ಷಗಳ ಕಾಲ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಿ 14 ಕೋಟಿಗೂ ಹೆಚ್ಚು ವ್ಯವಹಾರ ನಡೆಯುತ್ತಿತ್ತು. ಅದರಲ್ಲಿ ಸುಮಾರು ಐದು ಕೋಟಿಗೂ ಹೆಚ್ಚಿನ ಹಣ ದುರ್ಬಳಕೆಯಾಗಿದೆ ಎಂಬ ದೂರುಗಳಿವೆ. ಸಿ.ಐ.ಡಿ ಡಿವೈಎಸ್‌ಪಿ ಶ್ರೀಹರ್ಷ ನೇತೃತ್ವದಲ್ಲಿ ಅಧಿಕಾರಿಗಳು ಮಂಗಳವಾರ ಬ್ಯಾಂಕಿಗೆ ಮತ್ತು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಭೇಟಿ ನೀಡಿ ಅಗತ್ಯ ದಾಖಲಾತಿ ಸಂಗ್ರಹಿಸಿ ತನಿಖೆ ಆರಂಭಿಸಿದರು.

ಈ ಅವ್ಯವಹಾರದಲ್ಲಿ ಭಾಗಿ ಎನ್ನಲಾದ ಮೂವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಇವರುಗಳು ಹೊಂದಿರುವ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಆದೇಶ ಹೊರಬೀಳಲಿದೆ. ಬ್ಯಾಂಕ್‌ನಲ್ಲಿ 1,500 ಗ್ರಾಹಕರಿದ್ದು, ಅದರಲ್ಲಿ 50 ಮಂದಿ ಮಾತ್ರ ಬ್ಯಾಂಕ್ ವಿರುದ್ಧ ದೂರು ಸಲ್ಲಿಸಿದ್ದಾರೆ. ಉಳಿದ ಠೇವಣಿದಾರರು–ಗ್ರಾಹಕರು ದಾಖಲೆಗಳ ಪತ್ರವನ್ನು ನೀಡಿದಲ್ಲಿ ತನಿಖೆ ಮುಂದುವರೆಸಲು ಹಾಗೂ ನೊಂದವರಿಗೆ ಪರಿಹಾರ ನೀಡಲು ಸಹಕಾರಿಯಾಗುತ್ತದೆ ಎಂದು ಸಿಐಡಿ ಡಿವೈಎಸ್‌ಪಿ ಶ್ರೀಹರ್ಷ ತಿಳಿಸಿದರು. ಬ್ಯಾಂಕ್ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಕಾರಣ ತನಿಖೆ ಆರಂಭಿಸಲಾಗಿದೆ. ಕೊಡಗು ಮುಸ್ಲಿಂ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ ವ್ಯವಹರಿಸಿರುವ ಎಲ್ಲಾ ಗ್ರಾಹಕರು ದಾಖಲೆ ಪತ್ರವನ್ನು ನೀಡುವ ಮೂಲಕ ಸಹಕರಿಸಬೇಕೆಂದು ಅವರು ಮನವಿ ಮಾಡಿದರು.

ಸಿಐಡಿ ಅಧಿಕಾರಿಗಳು ಅಮಾಯಕರನ್ನು ವಿನಾ ಕಾರಣ ತನಿಖೆಗೆ ಒಳಪಡಿಸುವುದು ಸರಿಯಲ್ಲ. ಇಲ್ಲಿನ ಕಲ್ಲುಬಾಣೆ ನಿವಾಸಿಯೊಬ್ಬರು ಬ್ಯಾಂಕ್‌ನಿಂದ 10 ಲಕ್ಷ ರೂ. ಸಾಲ ಪಡೆದಿದ್ದು, ಅವರು ವಿದೇಶದಲ್ಲಿ ನೆಲೆಸಿರುವುದರಿಂದ ಸಾಲ ಮರುಪಾವತಿ ಮಾಡಿಲ್ಲ. ಈ ಸಂಬಂಧ ಅವರ ಸಹೋದರನನ್ನು ತನಿಖೆಗಾಗಿ ಬೆಳಗ್ಗೆಯಿಂದ ಸಂಜೆವರೆಗೂ ಠಾಣೆಯಲ್ಲಿ ಕಾಯಿಸಿ ಕೂರಿಸಿದ್ದಾರೆ. ತನಿಖೆಯ ಹೆಸರಿನಲ್ಲಿ ಅಮಾಯಕರನ್ನು ಈ ರೀತಿ ನಡೆಸಿಕೊಳ್ಳುವುದು ಸೂಕ್ತವಲ್ಲ ಎಂದು ದೂರಿದ ವರ್ತಕರಾದ ಅಬ್ದುಲ್ ಸಲಾಂ ಹಾಗೂ ಮತ್ತಿತರರು ಈ ರೀತಿಯಾಗದಂತೆ ಪೊಲೀಸರು ಎಚ್ಚರ ವಹಿಸುವಂತೆ ಮನವಿ ಮಾಡಿದರು.

ಶ್ರಮಪಟ್ಟರೆ ಸಾಧನೆ ಶಿಖರ ಮುಟ್ಟಲು ಸಾಧ್ಯ



ಚಾಮರಾಜನಗರ, ನ.8– ವಿದ್ಯಾರ್ಥಿಗಳು ಶ್ರಮಪಟ್ಟು ಓದಿದಾಗ ಮಾತ್ರ ಸಾಧನೆಯ ಶಿಖರ ಮುಟ್ಟಲು ಸಾಧ್ಯ ಎಂದು ಜಿಲ್ಲಾ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದರು.

ನಗರದ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಭಾರತದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಶಾಲೆಗೆ ಸೇರಿದ ನವೆಂಬರ್ 7ರ ದಿನವನ್ನು ಪ್ರತಿಭಾ ಪುರಸ್ಕಾರ ದಿನವನ್ನಾಗಿ ಆಚರಿಸುತ್ತಿದ್ದು, ಇದರ ಅಂಗವಾಗಿ ಸಫಾಯಿ ಕರ್ಮಚಾರಿ ಮಕ್ಕಳಿಗೆ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾನತೆಗೆ ಹೋರಾಡಿದ ಮಹಾನ್ ವ್ಯಕ್ತಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಮಾಡಿದ ಸಾಧನೆಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಬೇಕು. ವಿದ್ಯಾರ್ಥಿ ದೆಸೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಪಟ್ಟ ಕಷ್ಟಗಳನ್ನು ನಾವು ಅನುಭವಿಸುತ್ತಿಲ್ಲ. ಅಂಬೇಡ್ಕರ್ ಅವರು ಸಂಕಷ್ಟಗಳ ನಡುವೆಯೂ ಮಾಡಿರುವ ಸಾಧನೆಗಳನ್ನು ಎಲ್ಲರೂ ಅರಿತುಕೊಳ್ಳಬೇಕು. ಹುಟ್ಟಿನಿಂದ ಎಲ್ಲರೂ ಎಲ್ಲವನ್ನು ಪಡೆದುಕೊಂಡು ಬಂದಿರುವುದಿಲ್ಲ. ಶ್ರಮದ ಪ್ರತಿಫಲವಾಗಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ವಿದ್ಯಾರ್ಥಿಗಳಿಗೆ ಕಲಿಯುವ ಆಸಕ್ತಿಯ ಜೊತೆಗೆ ಶ್ರಮವಿದ್ದಾಗ ಮಾತ್ರ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಪೋಷಕರಿಗೆ ಮಕ್ಕಳೇ ಆಸ್ತಿಗಳಾಗುತ್ತಾರೆ. ಮಕ್ಕಳು ಉನ್ನತ ಮಟ್ಟದಲ್ಲಿ ಸಾಧನೆ ಮಾಡಿದಾಗ ಪೋಷಕರಿಗೆ ಗೌರವ ಲಭಿಸುತ್ತದೆ. ಶಿಕ್ಷಣದಿಂದ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ವಿಶೇಷ ಉಪನ್ಯಾಸ ನೀಡಿದ ಚಿಂತಕರಾದ ಅರಕಲವಾಡಿ ನಾಗೇಂದ್ರ ಅವರು ಮಾತನಾಡಿ, ಸಮಾಜದ ಕಟ್ಟಕಡೆಯ ಸಮುದಾಯಗಳ ಉಳಿವಿಗಾಗಿ ಹೋರಾಡಿದ ಡಾ. ಬಿ.ಆರ್ ಅಂಬೇಡ್ಕರ್ ಅವರ ಸಾಧನೆಗಳು ಎಲ್ಲರಿಗೂ ದಾರಿದೀಪವಾಗಬೇಕು. ಅಂಬೇಡ್ಕರ್ ಅವರು ಶಾಲೆಗೆ ದಾಖಲಾದ ದಿನವನ್ನು ಪ್ರತಿಭಾ ಪುರಸ್ಕಾರ ದಿನವಾಗಿ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ನಗರಸಭೆ ಸದಸ್ಯ ಎಂ. ಮಹೇಶ್ ಮಾತನಾಡಿ, ನ.7ಅನ್ನು ಸರ್ಕಾರವು ಪ್ರತಿಭಾ ಪುರಸ್ಕಾರ ದಿನವಾಗಿ ಆಚರಿಸುತ್ತಿದ್ದು, ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳ ಜೀವನದಲ್ಲಿ ಬದಲಾವಣೆ ಕಾಣಲೂ ಸಾಧ್ಯವಾಗುತ್ತದೆ ಎಂದರು.

ಪ್ರತಿಭಾವಂತ ಮಕ್ಕಳನ್ನು ಗೌರವಿಸಲಾಯಿತು. ಪೌರಕಾರ್ಮಿಕರಿಗೆ ಗುರುತಿನ ಚೀಟಿ ನೀಡಲಾಯಿತು. ಸಫಾಯಿ ಕರ್ಮಚಾರಿ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮಿತಿ ಸದಸ್ಯರಾದ ಪುಷ್ಪಾ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಭಾಗ್ಯ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಸುಧಾ, ನಗರಸಭೆ ಆಯುಕ್ತ ರಾಮದಾಸ್, ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ ಇತರರಿದ್ದರು.

ನ.15 ರಿಂದ ರೈತರ ಭತ್ತ ಖರೀದಿ ನೋಂದಣಿ; ಡಿ.1 ರಿಂದ ಖರೀದಿ ಪ್ರಾರಂಭ



ಚಾಮರಾಜನಗರ, ನ.8– 2023–24ನೇ ಸಾಲಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಖರೀದಿಸಲಿದ್ದು, ಜಿಲ್ಲೆಯ ವಿವಿಧೆಡೆ ನ.15ರಿಂದ ರೈತರ ನೋಂದಣಿ ಪ್ರಕ್ರಿಯೆ ನಡೆಯಲಿದೆ. ಡಿ.1 ರಿಂದ ಭತ್ತ ಖರೀದಿ ಪ್ರಾರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದ್ದಾರೆ.

ಚಾಮರಾಜನಗರ, ಕೊಳ್ಳೇಗಾಲ ಪಟ್ಟಣದ ಎಪಿಎಂಸಿ ಆವರಣ, ಚಾಮರಾಜನಗರ ತಾಲೂಕಿನ ಸಂತೇಮರಹಳ್ಳಿಯ ಎಪಿಎಂಸಿ ಆವರಣ, ಯಳಂದೂರು ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ರೈತರ ನೋಂದಣಿ ಪ್ರಕ್ರಿಯೆಯು ನವೆಂಬರ್ 15ರಿಂದ ಡಿಸೆಂಬರ್ 31ರವರೆಗೂ ಇರುತ್ತದೆ. ಭತ್ತ ಖರೀದಿ ಪ್ರಕ್ರಿಯೆಯು ಡಿಸೆಂಬರ್ 1 ರಿಂದ ಪ್ರಾರಂಭವಾಗಲಿದೆ.

ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸಾಮಾನ್ಯ ಭತ್ತಕ್ಕೆ ಪ್ರತೀ ಕ್ವಿಂಟಾಲ್‌ಗೆ 2,183 ರೂ ಹಾಗೂ ಗ್ರೇಡ್ ಎ ಭತ್ತಕ್ಕೆ 2,203 ರೂ. ದರ ನಿಗದಿಪಡಿಸಲಾಗಿದೆ. ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಒಬ್ಬ ರೈತರಿಂದ ಗರಿಷ್ಠ 40 ಕ್ವಿಂಟಾಲ್ ಭತ್ತವನ್ನು ಖರೀದಿಸಲಾಗುವುದು.

ಕೃಷಿ ಇಲಾಖೆಯ ಫ್ರೂಟ್ಸ್ ತಂತ್ರಾಂಶದಲ್ಲಿ ಇರುವ ಭತ್ತ ಬೆಳೆದ ರೈತರಿಗೆ ನೋಂದಣಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಜಿಲ್ಲೆಗೆ ಭತ್ತ ಖರೀದಿಸಲು ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾ ಮಂಡಳಿ (ನಿ)ಯನ್ನು ಖರೀದಿ ಏಜೆನ್ಸಿಯಾಗಿ ನೇಮಕ ಮಾಡಲಾಗಿದೆ. ಜಿಲ್ಲೆಯ ರೈತರು ಬೆಂಬಲ ಬೆಲೆ ಯೋಜನೆಯನ್ನು ಸದುಪಯೋಗಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ಕಾರ್ಯಾಗಾರ

ಚಾಮರಾಜನಗರ, ನ.8– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಹಾಗೂ ಸಂಸ್ಥೆಗಳ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಕಾನೂನು ಸೇವಾ ದಿನದ ಅಂಗವಾಗಿ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ಕಾರ್ಯಾಗಾರವನ್ನು ನ.9ರಂದು ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಿವಿ ಮುಚ್ಚಿಕೊಂಡು 'ಕಾವೇರಿ' ಪ್ರತಿಭಟನೆ

ಚಾಮರಾಜನಗರ, ನ.8– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 58 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಕೂಡ ಕಿವಿ ಮುಚ್ಚಿಕೊಂಡು ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಿವಿಮುಚ್ಚಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಚಾ. ವೆಂ. ರಾಜ್‌ಗೋಪಾಲ್, ಮಹೇಶ್‌ಗೌಡ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಗು.ಪುರುಷೋತ್ತಮ್, ನಂಜುಂಡಸ್ವಾಮಿ, ಪ್ರಕಾಶ್, ತಾಂಡವಮೂರ್ತಿ, ವೀರಭದ್ರ, ಚಾ.ಸಿ.ಸಿದ್ದರಾಜು, ರಾಚಪ್ಪ, ಲಿಂಗರಾಜು ಇತರರು ಭಾಗವಹಿಸಿದ್ದರು.



'ಜಲ ದೀಪಾವಳಿ' ಕಾರ್ಯಕ್ರಮ ಯಶಸ್ವಿ



ಯಳಂದೂರು, ನ.8– ಜಿಲ್ಲಾ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಯಳಂದೂರು ಪಪಂ ಕಾರ್ಯಾಲಯ ವತಿಯಿಂದ ಕೇಂದ್ರದ ಅಮೃತ್ 2.0 ಯೋಜನೆಯಡಿಯಲ್ಲಿ ಬುಧವಾರ ಉತ್ತಂಬಳ್ಳಿ ಗ್ರಾಮದ ಬಳಿ ಇರುವ ನೀರು ಸಂರಕ್ಷಣಾ ಘಟಕದಲ್ಲಿ ಹಮ್ಮಿಕೊಂಡಿದ್ದ ಜಲ ದೀಪಾವಳಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಈ ಸಂದರ್ಭದಲ್ಲಿ ಪಪಂ ಮುಖ್ಯಾಧಿಕಾರಿ ಮಹೇಶ್‌ಕುಮಾರ್ ಮಾತನಾಡಿ, ಕೇಂದ್ರದ ಅಮೃತ್ ಯೋಜನೆಯಡಿಯಲ್ಲಿ ಈ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ರಾಜ್ಯದ 84 ನಗರಗಳಲ್ಲಿ ಈ ಕಾರ್ಯಕ್ರಮ ಏಕಕಾಲಕ್ಕೆ ನಡೆಯಲಿದೆ ಇದರಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಯಳಂದೂರು ಪಪಂ ಮಾತ್ರ ಇದಕ್ಕೆ ಆಯ್ಕೆಯಾಗಿದೆ. ಇದರ ಉದ್ದೇಶ ಜಲ ಸಂರಕ್ಷಣೆಯಾಗಿದೆ. ಮಹಿಳೆಯರಿಗಾಗಿ ನೀರು, ನೀರಿಗಾಗಿ ಮಹಿಳೆಯರು ಎಂಬ ಘೋಷವಾಕ್ಯದೊಂದಿಗೆ ಈ ಕಾರ್ಯಕ್ರಮ ಮಾಡಲಾಗುತ್ತಿದೆ ಎಂದರು.

ಪಪಂ ವ್ಯಾಪ್ತಿಯ ವಿವಿಧ ಸ್ವಸಹಾಯ ಗುಂಪಿನ 30 ಮಹಿಳೆಯರು ಇದರಲ್ಲಿ ಭಾಗವಹಿಸಿದ್ದಾರೆ. ಇವರಿಗೆ ಪಟ್ಟಣಕ್ಕೆ ನೀರು ಪೂರೈಕೆ ಮಾಡುವ ಮುಳ್ಳೂರು ಗ್ರಾಮದ ಕಾವೇರಿ ನದಿ ಬಳಿಯ ಜಾಕ್‌ವೆಲ್‌ನಲ್ಲಿ ಕಚ್ಚಾ ನೀರು ಎತ್ತುವುದು, ಅಲ್ಲಿಂದ ಸಂಸ್ಕರಣಾ ಘಟಕಕ್ಕೆ ಕರೆತಂದು ನೀರನ್ನು ಶುದ್ಧೀಕರಿಸುವ ಎಲ್ಲಾ ಪ್ರಕ್ರಿಯೆಗಳನ್ನು ಪ್ರಾಯೋಗಿಕವಾಗಿ ಇಲ್ಲಿ ತೋರಿಸಿ ನಂತರ ನೀರಿನ ಮಹತ್ವ ಇದರ ಉಳಿವಿನ ಬಗ್ಗೆ ಮಾಹಿತಿ ನೀಡಲಾಗಿದೆ ಎಂದರು.

ಕೌಶಲ್ಯಾಭಿವೃದ್ಧಿ ಇಲಾಖೆಯ ಎಇ ಮಲ್ಲೇಶ್ ಮಾತನಾಡಿ, ನೀರು ಅಮೂಲ್ಯವಾಗಿದೆ. ಇದನ್ನು ಮಿತವಾಗಿ ಬಳಸಬೇಕು, ಮಹಿಳೆಯರು ನೀರಿನ ಬಳಕೆ ಹೆಚ್ಚು ಮಾಡುವುದರಿಂದ ಇದರ ಮಹತ್ವವನ್ನು ಪ್ರಾಯೋಗಿಕವಾಗಿ ತೋರಿಸುವ ಕಾರ್ಯಕ್ರಮ ಇದಾಗಿದೆ. ಪ್ರತಿಯೊಬ್ಬರೂ ನೀರನ್ನು ಮಿತವಾಗಿ ಬಳಕೆ ಮಾಡಬೇಕು. ಅಲ್ಲದೆ ನೀರಿನ ಕಂದಾಯವನ್ನು ನಿಗದಿತ ಸಮಯದೊಳಗೆ ಪಾವತಿಸಿ ಪಂಚಾಯಿತಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಂಪನ್ಮೂಲ ವ್ಯಕ್ತಿ ಹರೀಶ್ ಮಾತನಾಡಿ, ಭೂಮಿ ಮೇಲಿರುವ ನೀರಿನಲ್ಲಿ ಶೇ. 97 ರಷ್ಟು ನೀರು ಸಮುದ್ರದಲ್ಲಿದೆ. ಶೇ 2 ರಷ್ಟು ನೀರು ಹಿಮದ ರೂಪದಲ್ಲಿದೆ. ನಾವು ನಿತ್ಯ ಬಳಸುವ ನೀರು ಶೇ. 1 ರಷ್ಟು ಮಾತ್ರ ಇದೆ. ಹಾಗಾಗಿ ಇದನ್ನು ಒಂದು ಸಂಪನ್ಮೂಲ ಎಂದು ಎಲ್ಲರೂ ಅರಿಯಬೇಕು. ಇದು ಮುಗಿದರೆ ಇಡೀ ಜೀವ ಕೋಟಿ ಅಂತ್ಯವಾಗಲಿದೆ. ಪ್ರತಿ ಹನಿ ನೀರು ಅಮೂಲ್ಯವಾಗಿದೆ. ಆದರೆ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಇದನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾನೆ. ನದಿ ಸೇರಿದಂತೆ ಹಲವು ಜಲಮೂಲಗಳು ಇಂದು ಮಲಿನವಾಗುತ್ತಿದೆ. ಇದರ ಬಳಕೆ ನಿಲ್ಲಿಸಬೇಕು, ಪರಿಶುದ್ಧ ನೀರಿನ ಪ್ರಮಾಣ ಕಡಿಮೆ ಇದ್ದು ಇದನ್ನು ಜತನ ಮಾಡುವ ಕೆಲಸವನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಪಪಂ ಅಧ್ಯಕ್ಷೆ ಪ್ರಭಾವತಿರಾಜಶೇಖರ್, ಶಾಂತಮ್ಮ ನಿಂಗರಾಜು, ಮಹದೇವ ನಾಯಕ, ನೀರು ಸರಬರಾಜು ಇಲಾಖೆಯ ವ್ಯವಸ್ಥಾಪಕ ಪುಟ್ಟಸ್ವಾಮಿ, ಜೆಇ ನಾಗೇಂದ್ರ, ಪರಮೇಶ್ವರಪ್ಪ, ಪರಮೇಶ್ ಇತರರಿದ್ದರು.

ನಗರದ ವಿದ್ಯಾರ್ಥಿಗಳಿಗೆ ಬ್ಲಾಕ್‌ಬೆಲ್ಟ್



ಚಾಮರಾಜನಗರ, ನ.8– ಮೈಸೂರಿನಲ್ಲಿ ನಡೆದ ಕರಾಟೆ ಬ್ಲಾಕ್‌ಬೆಲ್ಟ್ ಪರೀಕ್ಷೆಯಲ್ಲಿ ಚಾಮರಾಜನಗರದ ಶೋಟಾಕಾನ್ ಸ್ಕೂಲ್ ಆಫ್ ಕರಾಟೆ ವಿದ್ಯಾರ್ಥಿಗಳಾದ ಮಯೂರ್ ಎನ್, ಅದ್ವೈತ್ ಎಸ್ ನಾಯಕ್, ಅನುಶ್ರೀ ಎಸ್, ಅಶ್ವಿನ್ ಗೌಡ, ಪ್ರದೀಪ್ ಕುಮಾರ್ ಮತ್ತು ವೆಂಕಟೇಶ್‌ರವರು ಬ್ಲಾಕ್‌ಬೆಲ್ಟ್ ಮತ್ತು ಪದವಿ ಪ್ರಮಾಣ ಪತ್ರ ಪಡೆದಿದ್ದಾರೆ. ಇವರ ಈ ಸಾಧನೆಯನ್ನು ಸಂಸ್ಥೆಯ ಮುಖ್ಯಸ್ಥರಾದ ವಿ. ನಾಗರಾಜ್ ಹಾಗೂ ಮುಖ್ಯ ತರಬೇತುದಾರರಾದ ಗಣೇಶ್ ಮೂರ್ತಿ. ಆರ್, ರವೀಶ್, ಜಿತೇಶ್, ನಾಗಾಭರಣ ಮತ್ತು ರಿಹಾನ್ ಅಭಿನಂದಿಸಿದ್ದಾರೆ

ಮದ್ದೂರು ಗ್ರಾಮದ ವೃದ್ಧ ನಾಪತ್ತೆ



ಯಳಂದೂರು, ನ.8– ತಾಲೂಕಿನ ಮದ್ದೂರು ಗ್ರಾಮದ ವೃದ್ಧರೊಬ್ಬರು ನಾಪತ್ತೆಯಾಗಿದ್ದು, ಈ ಬಗ್ಗೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಗ್ರಾಮದ ಸಿದ್ದಬಸವಯ್ಯ(85) ಎಂಬ ವ್ಯಕ್ತಿಯೇ ನಾಪತ್ತೆಯಾದ ವ್ಯಕ್ತಿಯಾಗಿದ್ದಾರೆ. ನ.3ರಂದು ಇವರು ತಮ್ಮ ಮನೆಯಿಂದ ತೆರಳಿ ಮತ್ತೆ ಮನೆಗೆ ವಾಪಸ್ ಬಂದಿಲ್ಲ ಎಂದು ಇವರ ಮಗ ಬಸವರಾಜು ದೂರು ದಾಖಲಿಸಿದ್ದಾರೆ. ಈ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ.08226–240028, 222383, ಮೊ. ಸಂಖ್ಯೆ 9480804649 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕೆಂದು ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

ವರ್ಗೀಕೃತ ಜಾಹೀರಾತು

